
"JANAPADA" Monthly - September 2016
"ಜನಪದ" ಮಾಸಿಕ – ಸೆಪ್ಟೆಂಬರ್ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26










ಸಾಮಾಜಿಕ ಪರಿವರ್ತನೆಯ ಹರಿಕಾರ, ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ
101ನೇ ಜನ್ಮದಿನಾಚರಣೆ ಹಾಗೂ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭ ಬೆಂಗಳೂರಿನಲ್ಲಿ ನಡೆಯಿತು.



ಡಾ. ಸರ್ವಪಲ್ಲಿ ರಾಧಾಕೃಷ್ಣನ್






ಸಂಪುಟ–59 • ಸಂಚಿಕೆ–6

**ಸೆಪ್ಟೆಂಬರ್ 2016**

ಪ್ರಧಾನ ಸಂಪಾದಕರು

**ಎನ್. ಆರ್. ವಿಶುಕುಮಾರ್**

ನಿರ್ದೇಶಕರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ

**ಎಂ. ರವಿಕುಮಾರ್**

ಜಂಟಿ ನಿರ್ದೇಶಕರು

**ಬಸವರಾಜ ಕಂಬಿ**

ಉಪ ನಿರ್ದೇಶಕರು

ಉಪ ಸಂಪಾದಕರು

**ಸಿ. ರೂಪಾ**

ಸಹಾಯಕ ನಿರ್ದೇಶಕರು

ಪ್ರಕಾಶಕರು

ನಿರ್ದೇಶಕರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ

ಬೆಂಗಳೂರು–560 001

Email : varthajanapada@yahoo.co.in

ಮುದ್ರಕರು

**ಲಾವಣ್ಯ ಮುದ್ರಣ**

#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ

ಬೆಂಗಳೂರು–560 050

ಲೇಖಕರ ಅಭಿಪ್ರಾಯಗಳು, ಸರ್ಕಾರದ ಅಭಿಪ್ರಾಯಗಳಲ್ಲ.

**17** **ನಾವೇನು ಕಮ್ಮಿ ಇಲ್ಲ ಸರ್ಕಾರಿ ಶಾಲೆಗಳು**
• ಪರಮೇಶ್ವರಯ್ಯ ಸೊಪ್ಪಿಮಠ

## ಪುಟ ತೆರೆದಂತೆ...

**05** ನೆಲ– ಜಲ –ಭಾಷೆ ಸಂರಕ್ಷಣೆಗೆ ಮೊದಲ ಆದ್ಯತೆ

**14** ಟಿ. ಎಸ್. ವೆಂಕಣ್ಣಯ್ಯ ; ಒಂದು ನೆನಪು
• ಡಾ. ಹೆಚ್. ವೀರಭದ್ರಪ್ಪ

**23** ಡಾ. ಎಚ್. ನರಸಿಂಹಯ್ಯ: ನಾಡು ಕಂಡ ಅತ್ಯುತ್ತಮ ಶಿಕ್ಷಣ ತಜ್ಞ
• ಕೆ. ಎಸ್. ಸೋಮೇಶ್ವರ

**25** ಇವರಂಥ ಶಿಕ್ಷಕರು ಅಪರೂಪ
• ಗುರುರಾಜ ಬ. ಕನ್ನೂರ

**26** ಚೆನ್ನೈನಲ್ಲಿ ಕನ್ನಡ ಚಿತ್ರೋತ್ಸವದ ಪುಳಕ
• ಹೆಚ್. ಬಿ. ದಿನೇಶ್

**28** ವಿದ್ಯಾಕಾಶಿಯಲ್ಲಿ ರಾಜ್ಯದ ಮೊದಲ ಐಐಟಿ
• ಪಿ. ಎಸ್. ಪರ್ವತಿ

**30** ಶಾಲೆಗಾಗಿ ತನ್ನೆಲ್ಲಾ ಆಸ್ತಿಯನ್ನು ದಾನ ಮಾಡಿದ ಮಹಾದಾನಿ
• ಅನಿತಾ ಕುಲಕರ್ಣಿ

**33** ಹಳ್ಳಿಗಳ ಸರ್ಕಾರಿ ಶಾಲೆಯಲ್ಲಿ ಹೈಟೆಕ್ ಶೈಕ್ಷಣಿಕ ಕಾರ್ಯಕ್ರಮ
• ಕಿಶನ್

**34** ಈ ಶಾಲೆಯಲ್ಲಿ ಹಸಿರಿನ ನಿತ್ಯೋತ್ಸವ
• ಕಿಶನ್‌ರಾವ್ ಕುಲಕರ್ಣಿ

**38** ಮೀನು ಸಾಕಣೆ ಕೊಳಗಳ ನಿರ್ಮಾಣ
• ಗಣೇಶ್ ಪ್ರಸಾದ್ ಎಲ್ & ಡಾ. ವಿಜಯಕುಮಾರ್ ಎಸ್

**40** ಕೃಷಿಯಂತ್ರ
• ಪ. ರಾಮಕೃಷ್ಣ ಶಾಸ್ತ್ರಿ

**43** ಬರಡು ನೆಲದಲ್ಲಿ ಹಸಿರುಕ್ಕಿಸಿದ ರೈತ ಬಾಪುಸಾಬ್ ಗಡಾದ್
• ಪ್ರಾಣೇಶ ಪೂಜಾರ ಗಿಣಗೇರಾ

**45** ಒಂದು ಎಕರೆಯಲ್ಲೇ ಬಂಪರ್ ಟೊಮ್ಯಾಟೋ ಬೆಳೆದ ಮಾದರಿ ರೈತ
• ಜಿ. ಚಂದ್ರಕಾಂತ್

**46** ಮರಿಯಮ್ಮನಹಳ್ಳಿ ರಂಗಸಿರಿ ಡಾ॥ ಕೆ. ನಾಗರತ್ನಮ್ಮ
• ನಾಗರಾಜ್ ಹರಪನಹಳ್ಳಿ



**48** ಗಣೇಶೋತ್ಸವ **ಬಣ್ಣ ಬೇಡ; ಮಣ್ಣೇ ಸಾಕು**
ಗುರುರಾಜ ಪೋಶೆಟ್ಟಿಹಳ್ಳಿ

# ಓದುಗರಿಂದ...


ಸಂಚಿಕೆಯ ಎಲ್ಲ ಲೇಖನಗಳು ಬಹಳ ಮಾಹಿತಿಪೂರ್ಣವಾಗಿದ್ದು, ಇದೊಂದು ಸಂಗ್ರಹ ಯೋಗ್ಯ ಸಂಚಿಕೆ. ಸ್ವಾತಂತ್ರ್ಯೋತ್ಸವದ ಎಲ್ಲ ಲೇಖನಗಳು ಮೆಚ್ಚುಗೆಯಾದವು. ಶೌಚಾಲಯಕ್ಕಾಗಿ ಉಪವಾಸ ಕುಳಿತು, ಕಡೆಗೂ ಜಯಶಾಲಿಯಾದ ಕೊಪ್ಪಳ ಜಿಲ್ಲೆಯ ಬಾಲಕಿಯ ಧೈರ್ಯವನ್ನು ಎಲ್ಲರೂ ಮೆಚ್ಚಬೇಕಾದ್ದೆ.

**ಮಂಜುನಾಥ. ಬಿ,** ಗುಲ್ಬರ್ಗ

ವಿಧಾನಸೌಧದ ಮುಖಪುಟ ಚಿತ್ರ ಅತ್ಯಾಕರ್ಷಕವಾಗಿತ್ತು. ಮುಖಪುಟ ಲೇಖನ ಕನ್ನಡ ಕವಿಗಳು ಮತ್ತು ಭಾರತ ಸ್ವಾತಂತ್ರ್ಯೋದಯ ಲೇಖನದಲ್ಲಿ ಕವಿಗಳ ರಾಷ್ಟ್ರಪ್ರೇಮ ಚೆನ್ನಾಗಿ ಅನಾವರಣಗೊಂಡಿದೆ. ಗಾಂಧಿ, ನೆಹರು ಸುಭಾಷ್ ಚಂದ್ರ ಬೋಸ್ ಹಾಗೂ ಇನ್ನಿತರ ಸ್ವಾತಂತ್ರ್ಯ ಹೋರಾಟಗಾರರ ಕುರಿತು ನಮ್ಮ ಕವಿ ಮಾನ್ಯರು ರಚಿಸಿರುವ ಕವನಗಳನ್ನು ಓದಲು ಬಹಳ ಸಂತಸ ಹಾಗೂ ಹೆಮ್ಮೆ ಎನಿಸುತ್ತದೆ. 'ವಂದೇಮಾತರಂ' ಲೇಖನವೂ ಬಹಳ ಅರ್ಥಪೂರ್ಣವಾಗಿತ್ತು. ಜಲಿಯನ್ ವಾಲಾಭಾಗ್ ಲೇಖನದಿಂದ ಬಹಳಷ್ಟು ಮಾಹಿತಿಗಳು ತಿಳಿದವು. ತೋಟಗಾರಿಕಾ ಪಿತಾಮಹ ಡಾ. ಎಮ್ ಎಸ್ ಮರಿಗೌಡರು ತೋಟಗಾರಿಕಾ ಬೆಳೆಗಳ ಬೇಸಾಯವನ್ನು ವಿಸ್ತರಿಸಿ ಹಣ್ಣು, ತರಕಾರಿಗಳು ಜನಸಾಮಾನ್ಯರಿಗೆ ಸುಲಭವಾಗಿ ಕೈಗೆಟುಕುವಂತೆ ಮಾಡಿದರು. ಅವರ ನೆನಪಿನ ಲೇಖನ ಮೆಚ್ಚುಗೆ ಮೂಡಿಸಿತು.

**– ವಿ. ಹೇಮಂತ ಕುಮಾರ್,**
ಬೆಂಗಳೂರು

'ಜನಪದ' ಮಾಸಿಕ ಈಗ
**www.kanaja.in**ನಲ್ಲಿ ಲಭ್ಯ




ಸ್ವಾತಂತ್ರ್ಯದ ಲೇಖನಗಳನ್ನು ಹೊತ್ತು ತಂದ 'ಜನಪದ', ಬಹಳ ಸೊಗಸಾದ ಲೇಖನಗಳಿಂದ ಕೂಡಿತ್ತು. ಸ್ವಾತಂತ್ರ್ಯಗಾಥೆಗಳೊಂದಿಗೆ ಸ್ವಾತಂತ್ರ್ಯ ಮತ್ತು ಮಹಿಳಾ ಸಬಲೀಕರಣ ಲೇಖನ ಬಹಳ ಅರ್ಥವತ್ತಾಗಿ ಮೂಡಿಬಂದಿದೆ. ಪೆದ್ದೂರಿನಲ್ಲಿ ನಡೆದ ಜನಪದ ಸಂಭ್ರಮದ ಸಚಿತ್ರ ಮಾಹಿತಿ ಓದಿ ಬಹಳ ಸಂತೋಷವಾಯಿತು. ಗಡಿನಾಡ ಜಿಲ್ಲೆಗಳಲ್ಲಿ ನಮ್ಮ ಕಲೆ–ಸಂಸ್ಕೃತಿಗಳನ್ನು ಅನಾವರಣಗೊಳಿಸಲು ಇಂಥಹ ಆಚರಣೆಗಳು ಬಹಳಷ್ಟು ಸಹಕಾರಿ. ಗಡಿ ಜಿಲ್ಲೆಗಳಲ್ಲಿ ನಮ್ಮ ಭಾಷೆ–ಸಂಸ್ಕೃತಿಗಳನ್ನು ಉಳಿಸಿ ಬೆಳೆಸಲು ಕಲಾ ಉತ್ಸವಗಳನ್ನು ನಡೆಸಬೇಕು.

**– ಎಸ್. ರಮೇಶ್,** ಸಿರಾ

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

**ದೇಶಭಕ್ತಿಯ ವೀರಗಾಥೆ**

ಸ್ವಾತಂತ್ರ್ಯ ಗಾಥೆಯ ಕಥಾನಕಗಳನ್ನು ಹೊತ್ತು ತಂದ ಆಗಸ್ಟ್ ತಿಂಗಳ ಜನಪದ ಸಂಚಿಕೆ ಮೆಚ್ಚುಗೆ ಮೂಡಿಸಿತು. ಕವಿಗಳ ಲೇಖನಿಯಲ್ಲಿ ಮೂಡಿಬಂದ ದೇಶಭಕ್ತಿಯ ಸಾಹಿತ್ಯವನ್ನು ಓದುತ್ತಾ ಹೋದಂತೆ ನಮ್ಮ ನಾಡು–ಕವಿಗಳ ಬಗ್ಗೆ ಬಹಳ ಹೆಮ್ಮೆ ಎನಿಸಿತು. ಲೇಖಕರಿಗೆ ಧನ್ಯವಾದಗಳು.

ಜಿ. ಶ್ರೀನಿವಾಸಮೂರ್ತಿ, ತುಮಕೂರು;
ಜೆ ಎಸ್ ಗಾಂಜೇಕರ, ಕುಮಟಾ (ಉ.ಕ)

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜನಪದದಲ್ಲಿ ಮೂಡಿಬಂದಿರುವ ಲೇಖನಗಳು ಬಹಳ ವೈವಿಧ್ಯಮಯವಾಗಿವೆ. ಕನ್ನಡ ಕವಿಗಳು ನಮ್ಮ ತಾಯ್ನೆಲದ ಸ್ವಾತಂತ್ರ್ಯ ಹೋರಾಟವನ್ನು ಕವಿತೆಗಳಲ್ಲಿ ಮೂಡಿಸಿರುವ ಪರಿ ಅನನ್ಯ. ಒಂದಕ್ಕಿಂತ ಒಂದು ಚಂದದ ಕವಿತೆಗಳು. ಸ್ವಾತಂತ್ರ್ಯ ಪ್ರೇಮವನ್ನು ಬಡಿದೆಬ್ಬಿಸುವಂಥ ವೀರಗೀತೆಗಳು ಇವು. ಅಮೂಲ್ಯ ಕವಿತೆಗಳನ್ನು ಒಂದೇ ಲೇಖನದಲ್ಲಿ ಕಟ್ಟಿಕೊಟ್ಟಿರುವ ಲೇಖಕರಿಗೆ ತುಂಬು ಧನ್ಯವಾದಗಳು.

**–ಎನ್. ಗೌರೀಶ,** ಹಾಸನ

ಸ್ವಾತಂತ್ರ್ಯ ಮುಖಪುಟ ಅತ್ಯಂತ ಸುಂದರವಾಗಿದೆ. ಎಲ್ಲ ಲೇಖನಗಳು ಮಾಹಿತಿಪೂರ್ಣವಾಗಿವೆ. ವಂದೇಮಾತರಂ ಹಾಗೂ ಜಲಿಯನ್ ವಾಲಾಭಾಗ್ ಲೇಖನಗಳನ್ನು ಓದುತ್ತಿದ್ದಂತೆ ನಮ್ಮ ಹಿರಿಯರ ತ್ಯಾಗ–ಬಲಿದಾನಗಳ ಫಲವನ್ನಲ್ಲವೇ ನಾವು ಇಂದು ಅನುಭವಿಸುತ್ತಿರುವುದು ಎಂದೆನ್ನಿಸಿ ಮನಸ್ಸು ಭಾವುಕವಾಯಿತು. ಉತ್ತಮ ಲೇಖನಗಳಿಗೆ ಧನ್ಯವಾದಗಳು. ತೋಟಗಾರಿಕಾ ಪಿತಾಮಹ ಮರಿಗೌಡರ ಕುರಿತಾದ ಲೇಖನ ಸಕಾಲಿಕವಾಗಿದ್ದು, ಬಹಳಷ್ಟು ಮಾಹಿತಿಗಳನ್ನು ತಿಳಿಸಿಕೊಟ್ಟಿತು. ವಂದನೆಗಳು.

**– ಬಿ. ಜಯಕುಮಾರ್,** ಚಿಂಚೋಳಿ

ಜನಪದಕ್ಕೆ ಚಂದಾ ಹಣವನ್ನು ಡಿಡಿ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರಕಟಣಾ ಶಾಖೆ ವಿಭಾಗ
ವಾರ್ತಾಸೌಧ, 17, ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು–560 001



# "ನೆಲ- ಜಲ -ಭಾಷೆ ಸಂರಕ್ಷಣೆಗೆ ಮೊದಲ ಆದ್ಯತೆ"

**(ಮಾನ್ಯ ಮುಖ್ಯಮಂತ್ರಿಗಳ ಸ್ವಾತಂತ್ರ್ಯೋತ್ಸವ ಭಾಷಣ)**

**ಭಾ**ರತದ 70ನೇ ಸ್ವಾತಂತ್ರ್ಯ ದಿನಾಚರಣೆಯ ಈ ಸುಸಂದರ್ಭದಲ್ಲಿ ನಾಡಿನ ಎಲ್ಲಾ ಸೋದರ–ಸೋದರಿಯರಿಗೆ ತುಂಬು ಹೃದಯದ ಶುಭಕಾಮನೆಗಳು.

ಅರವತ್ತೊಂಬತ್ತು ವರ್ಷಗಳ ಹಿಂದೆ ಆಗಸ್ಟ್ 15 ರಂದು ಪರಕೀಯರ ಆಡಳಿತದ ಅಂಧಕಾರದಿಂದ ಸ್ವಾತಂತ್ರ್ಯದ ಹೊಸ ಬೆಳಕಿಗೆ ಭಾರತ ತನ್ನನ್ನು ತೆರೆದುಕೊಂಡಿತು. ಅದು ಶತಮಾನಗಳ ಕಾಲದ ವಸಾಹತುಷಾಹಿ ಪ್ರಭುತ್ವಕ್ಕೆ ಇತಿಶ್ರೀ ಹಾಡಿ ನಮ್ಮ ಬದುಕನ್ನು ನಾವೇ ಕಟ್ಟಿಕೊಳ್ಳುತ್ತೇವೆ ಎಂದು ಈ ದೇಶದ ಪ್ರಜೆಗಳು ಒಕ್ಕೊರಲ ದನಿಯಿಂದ ನಿರ್ಧರಿಸಿದ ಅಮೃತ ಘಳಿಗೆ.

ನಾವಿಂದು ಅನುಭವಿಸುತ್ತಾ ಆನಂದಿಸುತ್ತಿರುವ ಸ್ವಾತಂತ್ರ್ಯ ನಿರಾಯಾಸವಾಗಿ ಪ್ರಾಪ್ತಿಯಾದುದಲ್ಲ, ಇದು ಬ್ರಿಟಿಷರ ದಯಾಭಿಕ್ಷೆಯೂ ಆಗಿರಲಿಲ್ಲ, 1857 ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಹಿನ್ನಡೆ ಅನುಭವಿಸಿದ ನಂತರ ನಮ್ಮ ದೇಶಭಕ್ತ ನಾಯಕರು ಎಚ್ಚರಿಕೆಯಿಂದ ರೂಪಿಸಿ ಮುನ್ನಡೆಸಿದ ಹೋರಾಟದ ಪ್ರಯತ್ನದ ಫಲವೇ ನಮ್ಮ ಸ್ವಾತಂತ್ರ್ಯ. ಈ ಹೋರಾಟದ ಮುಂಚೂಣಿಯಲ್ಲಿ ಇದ್ದದ್ದು 1885 ರಲ್ಲಿ ಸ್ಥಾಪನೆಯಾದ ಭಾರತ ರಾಷ್ಟ್ರೀಯ ಕಾಂಗ್ರೆಸ್. ತನ್ನ ಮೊದಲ ಆರು ದಶಕಗಳನ್ನು ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಶ್ರಮಿಸಿದ ಕಾಂಗ್ರೆಸ್ ಪಕ್ಷ ನಂತರದ ದಿನಗಳಲ್ಲಿ ಬಲಿಷ್ಠ, ಸಮೃದ್ಧ ಭಾರತದ ನಿರ್ಮಾಣದಲ್ಲಿ ತೊಡಗಿಸಿಕೊಂಡಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ ಅವಿಸ್ಮರಣೀಯ. ಬ್ರಿಟಿಷರ ಕರಾಳ ಕಾನೂನುಗಳ ವಿರುದ್ಧ ಬಾಲಾಜಿ ನಿಂಬಾಳ್ಕರ್ ಹಾಗೂ ಜಡಗಬಾಲರ ನಾಯಕತ್ವದಲ್ಲಿ ಹೋರಾಡಿದ ಹಲಗಲಿಯ ಬೇಡವೀರರು, ಬೈಲಹೊಂಗಲದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಮೈಸೂರು ಹುಲಿ ಟಿಪ್ಪೂ ಸುಲ್ತಾನ್, ವೀರರಾಣಿ ಕಿತ್ತೂರು ಚೆನ್ನಮ್ಮ, ಬೂದಿ ಬಸಪ್ಪ ನಾಯಕ, ಸುರಪುರದ ವೆಂಕಟಪ್ಪ ನಾಯಕ, ಕೊಡಗಿನ ಸ್ವಾಮಿ ಅಪರಾಂಪರ ಮೊದಲಾದ ಧೀರ ಹೋರಾಟಗಾರರ ಬಲಿದಾನವನ್ನು ನಾವು ಈ ದಿನ ಸ್ಮರಿಸಬೇಕು.

ಅಂತೆಯೇ, ಗಾಂಧೀಜಿ ಅವರ ಕರೆಗೆ ಓಗೊಟ್ಟ, 'ಕರ್ನಾಟಕದ ಸಿಂಹ' ಗಂಗಾಧರ ರಾವ್ ದೇಶಪಾಂಡೆ, ಹರ್ಡೇಕರ್ ಮಂಜಪ್ಪ, ಆಲೂರು ವೆಂಕಟರಾವ್, ಮೈಲಾರ ಮಹಾದೇವಪ್ಪ ಅವರಂತಹ ದೇಶ ಪ್ರೇಮಿಗಳು, ದಂಡಿ ಸತ್ಯಾಗ್ರಹದ ಕರೆಗೆ ಓಗೊಟ್ಟು ಕರ ನಿರಾಕರಣೆ ಮಾಡಿದ ಅಂಕೋಲದ ಸತ್ಯಾಗ್ರಹಿಗಳು, 'ಏಸೂರು ಕೊಟ್ಟರೂ ಈಸೂರು ಬಿಡೆವು' ಎಂದು ಬ್ರಿಟಿಷರಿಗೆ ಸವಾಲು ಹಾಕಿ ಪ್ರಾಣತ್ಯಾಗ ಮಾಡಿದ ಈಸೂರಿನ ಸತ್ಯಾಗ್ರಹಿಗಳು, ಹೀಗೆ ಭಾರತೀಯರ ಉತ್ತಮ ಭವಿಷ್ಯಕ್ಕಾಗಿ ಅಂದು ಹೆಜ್ಜೆ ಹಾಕಿದ ಸಾವಿರ ಸಾವಿರ ಧೀರ ದೇಶ ಪ್ರೇಮಿ ಕನ್ನಡಿಗರಿಗೆ ನಾವು ಈ ದಿನ ತಲೆಬಗ್ಗಿಸಿ ಗೌರವ ಸಲ್ಲಿಸಬೇಕು.

ಇಂದು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವನ್ನು ಹೊಂದಿರುವ ದೇಶ ನಮ್ಮದು. ಹಿರಿಯರ ತ್ಯಾಗ–ಬಲಿದಾನಗಳ ಮೂಲಕ ಪಡೆದ ಸ್ವಾತಂತ್ರ್ಯದಿಂದ ನಾವು ಸಾಧಿಸಿರುವುದು ಕಡಿಮೆಯೇನಲ್ಲ. ಇಲ್ಲಿಯವರೆಗೆ ದೇಶ–ರಾಜ್ಯಗಳನ್ನು ಆಳಿದ ಎಲ್ಲಾ ಸರ್ಕಾರಗಳು ಈ ಸಾಧನೆಗೆ ಕೊಡುಗೆ ನೀಡಿರುವುದನ್ನು ನೆನಪುಮಾಡಿಕೊಂಡು ಕೃತಜ್ಞತೆ ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯ.

ಸ್ವಾತಂತ್ರ್ಯದ ಅರ್ಥ ಸಂಕುಚಿತವಾದುದಲ್ಲ, ವಿಶಾಲವಾದುದು. ಅದು ಕೇವಲ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾದುದಲ್ಲ. ನಮ್ಮ ಭಾಷೆ, ಸಂಸ್ಕೃತಿ, ಆಹಾರ, ಉಡುಗೆ ತೊಡುಗೆ ಎಲ್ಲವೂ ನಮ್ಮ ಸ್ವಾತಂತ್ರ್ಯ. ಮತ್ತೊಬ್ಬರ ಈ ಸ್ವಾತಂತ್ರ್ಯವನ್ನು ಗೌರವಿಸುವುದು ನಿಜವಾದ ದೇಶಪ್ರೇಮ. ದೇಶಭಕ್ತಿ ಎನ್ನುವುದು ರಾಜಕೀಯ ಘೋಷಣೆ ಅಲ್ಲ, ಆಗಬಾರದೂ ಕೂಡಾ. ಅದು ಪ್ರತಿಯೊಬ್ಬ ಭಾರತೀಯನ ಹೃದಯಂತರಾಳದಿಂದ ಪುಟಿದೆದ್ದು ಬರುವ ಜೀವಪರ ದನಿ. ದೇಶಭಕ್ತಿ ಎಂದರೆ ಭಾರತ ಮಾತೆಗೆ ಕೇವಲ ಜೈಕಾರ ಹಾಕುವುದಲ್ಲ. ಬಡವರ ಬಗ್ಗೆ ಕಾಳಜಿ, ಶೋಷಿತರ ಬಗ್ಗೆ ಅನುಕಂಪ. ಮಹಿಳೆಯರ ಬಗ್ಗೆ ಗೌರವ ತೋರುವುದೇ ನಿಜವಾದ ದೇಶಪ್ರೇಮ. ಸಮಾನತೆಯ ತಳಹದಿಯ ಮೇಲೆ ಸಮಾಜ ನಿರ್ಮಾಣದ ಮೂಲಕ ಸಂವಿಧಾನದ ಆಶಯಗಳನ್ನು ಪ್ರಾಮಾಣಿಕವಾಗಿ ಈಡೇರಿಸುವುದೇ ದೇಶಪ್ರೇಮ. ಈ ಪುಣ್ಯದ ಕಾಯಕವನ್ನೇ ನಮ್ಮ ಸರ್ಕಾರ ಕಳೆದ ಮೂರು ವರ್ಷಗಳಿಂದ ಮಾಡುತ್ತಾ ಬಂದಿದೆ.

ಈ ದೇಶವನ್ನು ಪರಸ್ಪರ ಪ್ರೀತಿ, ಸಹಕಾರ ಮತ್ತು ಸೌಹಾರ್ದತೆಯ ಮೂಲಕ ಕಟ್ಟಬೇಕಾಗಿದೆ. ದ್ವೇಷಾಸೂಯೆಗಳಿಂದ ಕೆಡವಿಹಾಕಬಹುದು, ಕಟ್ಟಲಾಗುವುದಿಲ್ಲ. ಸಾವು–ನೋವುಗಳು ಜಗತ್ತಿನ ಯಾವ ಮೂಲೆಯಲ್ಲಾದರೂ






ನಡೆಯಲಿ, ಅದಕ್ಕಾಗಿ ನಮ್ಮ ಮನ ಮರುಗಬೇಕು, ಸಂಭ್ರಮಪಡಬಾರದು. ಶಿಕ್ಷಣ ನಮಗೆ ವಿಶಾಲ ದೃಷ್ಟಿಕೋನ ನೀಡುತ್ತದೆ, ವೈಚಾರಿಕವಾಗಿ ಬೆಳೆಸುತ್ತದೆ, ವೈಜ್ಞಾನಿಕವಾಗಿ ಯೋಚಿಸುವಂತೆ ಮಾಡುತ್ತದೆ ಎಂದು ನಾವು ತಿಳಿದಿದ್ದೆವು. ಆದರೆ, ದೇಶದಲ್ಲಿ ಇತ್ತೀಚಿಗೆ ನಡೆಯುತ್ತಿರುವ ಕೆಲವು ಅಮಾನವೀಯ ಘಟನೆಗಳು ನಮ್ಮ ಅಭಿಪ್ರಾಯವನ್ನು ಬುಡಮೇಲು ಮಾಡುವಂತಿವೆ. ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಇನ್ನೂ ನಮ್ಮ ಸಮಾಜದಲ್ಲಿ ಸುರಕ್ಷಿತವಾಗಿ ಬಾಳುವ ಸ್ಥಿತಿಯಲ್ಲಿ ಇಲ್ಲ. ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ, ಮಹಿಳೆಯರ ಮೇಲಿನ ಅತ್ಯಾಚಾರದ ಪ್ರಕರಣಗಳು ನಮ್ಮ ಸಮಾಜಕ್ಕೆ ಅಂಟಿದ ಕಳಂಕ. ಇಂತಹ ಅಮಾನವೀಯ ನಡವಳಿಕೆಗಳ ವಿರುದ್ಧದ ಹೋರಾಟ ಸ್ವಾತಂತ್ರ್ಯ ಹೋರಾಟದ ಮಾದರಿಯಲ್ಲಿಯೇ ನಡೆಯಬೇಕಾಗಿದೆ. ಅದು ಬಡತನ, ಅನಕ್ಷರತೆ, ಮೂಢ ನಂಬಿಕೆ, ಜಾತೀಯತೆ ಕೋಮುವಾದದ ವಿರುದ್ಧದ ಹೋರಾಟ.

ಮೂರು ವರ್ಷಗಳ ಅವಧಿಯಲ್ಲಿ ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡಿದ ಪ್ರಯತ್ನದ ಫಲ ಜನತಾ ಜನಾರ್ಧನರಾದ ನಿಮ್ಮ ಮುಂದಿದೆ. ಚುನಾವಣಾ ಕಾಲದಲ್ಲಿ ಪಕ್ಷದ ಪ್ರಣಾಳಿಕೆ ಮೂಲಕ ನೀಡಿದ್ದ ಭರವಸೆಗಳ ಪೈಕಿ ಮುಕ್ಕಾಲು ಪಾಲನ್ನು ಕಳೆದ ನಾಲ್ಕು ಮುಂಗಡ ಪತ್ರಗಳ ಮೂಲಕ ನಾವು ಈಡೇರಿಸಿದ್ದೇವೆ ಎಂದು ಹೇಳಿಕೊಳ್ಳುವ ಹೆಮ್ಮೆ ನಮ್ಮದು.

ಸ್ವಾತಂತ್ರ್ಯೋತ್ಸವ ಆಚರಣೆಯ ಈ ಸಂದರ್ಭದಲ್ಲಿ ನಮ್ಮ ಪಾಲಿನ ಪ್ರಭುಗಳಾದ ನಾಡ ಪ್ರಜೆಗಳಿಗೆ ನಮ್ಮ ಸಾಧನೆಯ ಹಿನ್ನೋಟ ಮತ್ತು ಯೋಜನೆಗಳ ಮುನ್ನೋಟವನ್ನು ನೀಡುವುದು ನಮ್ಮ ಸರ್ಕಾರದ ಕರ್ತವ್ಯವೂ ಆಗಿದೆ. ಸಾಗಬೇಕಾದ ದಾರಿ ಇನ್ನೂ ಇದೆ. ಸಾಗಿ ಬಂದ ದಾರಿಯ ಬಗ್ಗೆ ತೃಪ್ತಿ ಇದೆ,  ಹೆಮ್ಮೆಯೂ ಇದೆ. ಮುಂದೆ ಸಾಗಬೇಕಾದ ದಾರಿಯನ್ನು ಕ್ರಮಿಸುವ ಆತ್ಮವಿಶ್ವಾಸವಿದೆ. ನಮ್ಮದು ರೈತಪರ ಸರ್ಕಾರ ಎನ್ನುವುದು ಕೇವಲ ಘೋಷಣೆಯಲ್ಲ. ನುಡಿದಂತೆ ನಡೆದು ತೋರಿಸಿದ್ದೇವೆ. ಆದರೆ ಪ್ರಕೃತಿ ಎದುರು ಮಾನವ ಅಸಹಾಯಕ. ಕಳೆದ ಐದು ವರ್ಷಗಳಿಂದ ರಾಜ್ಯ ನಿರಂತರವಾಗಿ ಬರಗಾಲಕ್ಕೆ ತುತ್ತಾಗಿರುವುದರಿಂದ ರಾಜ್ಯದ ರೈತರು ಕಷ್ಟದಲ್ಲಿದ್ದಾರೆ.

ಕಳೆದ ವರ್ಷದ ಮಳೆ ಅಭಾವದಿಂದಾಗಿ ರಾಜ್ಯದ 176 ತಾಲ್ಲೂಕುಗಳ ಪೈಕಿ 136 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಬೇಕಾಯಿತು. ಇಂತಹ ಕಷ್ಟದ ಕಾಲದಲ್ಲಿ ಎಂದಿನಂತೆ ನೊಂದ ಜನತೆಯ ಜೊತೆ ಸರ್ಕಾರ ದೃಢವಾಗಿ ನಿಂತು ಕೊಂಡಿತ್ತು.

ನಾನೇ ಖುದ್ದಾಗಿ ಬರಪೀಡಿತ 18 ಜಿಲ್ಲೆಗಳಿಗೆ ಭೇಟಿ ನೀಡಿ ಜನರ ಕಷ್ಟಗಳನ್ನು ಆಲಿಸಿದ್ದೇನೆ, ಜನರಿಗೆ ಕುಡಿಯುವ ನೀರು ಮತ್ತು ಉದ್ಯೋಗ, ಜಾನುವಾರುಗಳಿಗೆ ಗೋಶಾಲೆ, ಮೇವು ಮತ್ತು ಔಷಧಿ ಒದಗಿಸುವ ಪರಿಹಾರ ಕಾರ್ಯದ ಮೇಲ್ವಿಚಾರಣೆ ನಡೆಸಿದ್ದೇನೆ.

ಬರಗಾಲದ ಕಾರಣಕ್ಕಾಗಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಪಾವತಿಯನ್ನು ಒಂದು ವರ್ಷ ಮುಂದೂಡಲಾಗಿದೆ. ಅಲ್ಲದೆ, 2015 ರ ಸೆಪ್ಟೆಂಬರ್ 30ರ ವರೆಗೆ ಬಾಕಿ ಇರುವ ಸಹಕಾರಿ ಸಂಘಗಳ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ. ಇದರಿಂದ 2.07 ಲಕ್ಷ ರೈತರಿಗೆ 316.54 ಕೋಟಿ ರೂ. ನೆರವು ನೀಡಿದಂತಾಗಿದೆ.

ಕಳೆದೆರಡು ವರ್ಷಗಳಲ್ಲಿ ರೈತರಿಗೆ ಕೊಡುವಂತಹ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಪ್ರಮಾಣ ಶೇಕಡಾ 50 ಕ್ಕಿಂತಲೂ ಹೆಚ್ಚಾಗಿದೆ. ಸುಮಾರು 1800 ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಸರ್ಕಾರವೇ ಭರಿಸಿದೆ.

ರಾಜ್ಯದ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಪಡೆದ ಸಾಲದ ಮೊತ್ತ 29 ಸಾವಿರ ಕೋಟಿ ರೂಪಾಯಿಗಳಷ್ಟಿದೆ. ಈ ಮೊತ್ತದಲ್ಲಿ ಅರ್ಧದಷ್ಟನ್ನಾದರೂ ಕೇಂದ್ರ ಸರ್ಕಾರ ಮನ್ನಾ ಮಾಡಿದರೆ, ಸಹಕಾರಿ ಸಂಘಗಳ ಮೂಲಕ ರೈತರು ಪಡೆದ ಸಾಲದ ಅರ್ಧದಷ್ಟನ್ನು ಮನ್ನಾ ಮಾಡಲು ರಾಜ್ಯ ಸರ್ಕಾರ ಸಿದ್ಧವಿದೆ.

ರಾಜ್ಯದ ಯಾವ ವ್ಯಕ್ತಿಯೂ ಚಿಕಿತ್ಸೆಯ ಕೊರತೆಯಿಂದ ನರಳುವಂತಾಗಬಾರದು ಎಂಬುದು ನಮ್ಮ ಸರ್ಕಾರದ ಸದಾಶಯವಾಗಿದೆ. ಕಳೆದ ಮೂರು ವರ್ಷಗಳಿಂದ ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸಾಗಿದೆ. ಬಡತನದ ಕಾರಣಕ್ಕಾಗಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳಲಾಗದ 65 ಸಾವಿರ ರೋಗಿಗಳಿಗೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 200 ಕೋಟಿ ರೂ. ನೆರವು ನೀಡಲಾಗಿದೆ.

ಮುಖ್ಯಮಂತ್ರಿಯಾಗಿ ಮೊದಲ ಬಜೆಟ್ ಮಂಡಿಸಿದಾಗ ಶಿಶು ಮರಣ ಪ್ರಮಾಣವನ್ನು ಪ್ರತಿ ಸಾವಿರಕ್ಕೆ 24 ಕ್ಕೆ ಇಳಿಸುವುದು ನಮ್ಮ ಸಂಕಲ್ಪ ಎಂದು ಹೇಳಿದ್ದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಶಿಶು ಮರಣ ಪ್ರಮಾಣವನ್ನು ಸಾವಿರಕ್ಕೆ 38 ರಿಂದ 28 ಕ್ಕೆ ಇಳಿಸಿದ್ದೇವೆ. ಇದೇ ಅವಧಿಯಲ್ಲಿ ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು ಸಾವಿರಕ್ಕೆ 37 ಇಳಿಸುವ ಮೂಲಕ ಮಿಲೇನಿಯಂನ ಗುರಿಯನ್ನು ಸಾಧಿಸಿದ್ದೇವೆ.

ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ ಹಾಗೂ ಪ್ರತಿಯೊಂದು ಜಿಲ್ಲೆಯ ಒಂದು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಒಟ್ಟು 57 ಡಯಾಲಿಸಿಸ್ ಘಟಕ ಸ್ಥಾಪಿಸಲಾಗಿದೆ. ಮೂತ್ರ ಪಿಂಡ ರೋಗದಿಂದ ನರಳುತ್ತಿರುವ ರೋಗಿಗಳಿಗೆ ನಿಯತವಾಗಿ ವಾರಕ್ಕೆ ಎರಡು–ಮೂರು ಬಾರಿ ಡಯಾಲಿಸಿಸ್ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಆಯುಷ್ ಇಲಾಖೆಯನ್ನು ಮತ್ತಷ್ಟು ಜನ–ಸ್ನೇಹಿ ಮಾಡಲು ಯೋಜಿಸಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ಮಂಗಳೂರು, ಗದಗ, ಚಿಕ್ಕಬಳ್ಳಾಪುರ ಮತ್ತು  ದಾವಣಗೆರೆ ನಗರಗಳಲ್ಲಿ 50 ಹಾಸಿಗೆಗಳ ಆಯುಷ್ ಸಂಯುಕ್ತ ಆಸ್ಪತ್ರೆಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಅಂತೆಯೇ, ಮೈಸೂರು ನಗರದಲ್ಲಿ 100–ಹಾಸಿಗೆಗಳ ಹೈ–ಟೆಕ್ ಪಂಚಕರ್ಮ ಆಸ್ಪತ್ರೆ ಹಾಗೂ 100–ಹಾಸಿಗೆಗಳ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಆಸ್ಪತ್ರೆಯನ್ನು ಪ್ರಾರಂಭಿಸಲಾಗುವುದು.

ಅನ್ನಭಾಗ್ಯ ಯೋಜನೆಯಡಿ ಪ್ರತಿ ಫಲಾನುಭವಿಗೆ ಒಂದು ಕೆ ಜಿ ಅಕ್ಕಿಯನ್ನು ಹೆಚ್ಚುವರಿಯಾಗಿ ಕೊಡುವ ಹಾಗೂ ಬಡತನ ರೇಖೆಗಿಂತಲೂ ಕೆಳಗಿರುವ ಪಡಿತರ ಚೀಟಿ ಹೊಂದಿರುವವರಿಗೆ ರಿಯಾಯಿತಿ ದರದಲ್ಲಿ ಒಂದು ಕೆ ಜಿ ತೊಗರಿಬೇಳೆ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯ ಸರ್ಕಾರದ ಮತ್ತೊಂದು ಮಹತ್ವಾಕಾಂಕ್ಷೆಯ ಕ್ಷೀರ ಭಾಗ್ಯ ಯೋಜನೆ  ರಾಜ್ಯದ 1.08 ಕೋಟಿ ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ವರದಾನವಾಗಿದೆ. ವಾರಕ್ಕೆ ಮೂರು ದಿನ 150 ಮಿಲಿ ಲೀಟರ್ ಕೆನೆ–ಭರಿತ ಹಾಲು





ವಿತರಿಸುತ್ತಿರುವ ಈ ಯೋಜನೆಯನ್ನು ವಾರಕ್ಕೆ ಐದು ದಿನಗಳ ಅವಧಿಗೆ ವಿಸ್ತರಿಸಲಾಗುವುದು.

ಮಕ್ಕಳ ಮನಸ್ಸಿನಲ್ಲಿ ಅಸಮಾನತೆ ಹಾಗೂ ತಾರತಮ್ಯದ ನೋವು ನುಸುಳಬಾರದು ಎಂಬ ಸದುದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10 ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೆ ಸಮವಸ್ತ್ರ ನೀಡುವುದರ ಜೊತೆಗೆ ಬೂಟು (ಷೂ) ಮತ್ತು ಕಾಲು ಚೀಲ (ಸಾಕ್ಸ್) ವಿತರಿಸುವ 113 ಕೋಟಿ ರೂ. ಯೋಜನೆಗೆ  ಪ್ರಸಕ್ತ ಸಾಲಿನಲ್ಲಿ ಚಾಲನೆ ನೀಡಲಾಗಿದೆ.

ರಸ್ತೆಗಳು ಅಭಿವೃದ್ಧಿಯ ಪಥಗಳು. ಅತ್ಯುತ್ತಮ ರಸ್ತೆಗಳು ನಿರ್ಮಾಣವಾದಲ್ಲಿ ರಸ್ತೆಯ ಇಕ್ಕೆಲೆಗಳಲ್ಲಿರುವ ಗ್ರಾಮಗಳಲ್ಲಿ ಆರ್ಥಿಕ ಚಟುವಟಿಕೆಗಳು ಪ್ರಾರಂಭವಾಗಲಿವೆ ಎಂಬುದು ಸರ್ಕಾರದ ದೂರದೃಷ್ಟಿ.

ರಾಜ್ಯದಲ್ಲಿ 8,927 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 17,163 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ, ನವೀಕರಣವನ್ನು ಪೂರ್ಣಗೊಳಿಸಲಾಗಿದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳ ಅಡಿಯಲ್ಲಿ 2,778 ಕಿ.ಮೀ. ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗಿದೆ. ರಾಜ್ಯದಲ್ಲಿ 1,668 ಕಿ.ಮೀ. ಹೊಸ ರಾಷ್ಟ್ರೀಯ ಹೆದ್ದಾರಿಗಳ ಘೋಷಣೆಯಾಗಿದೆ. ಅಲ್ಲದೆ, 3800 ಕಿ.ಮೀ. 43 ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ. ರಾಜ್ಯದಲ್ಲಿ ಪ್ರಮುಖ ರಸ್ತೆಗಳನ್ನು ಜೋಡಿಸುವ ಸೇತುವೆಗಳನ್ನು ಅಭಿವೃದ್ಧಿಪಡಿಸಲು 1,000 ಕೋಟಿ ರೂ. ಮೊತ್ತದಲ್ಲಿ ಯೋಜನೆ ರೂಪಿಸಲಾಗುತ್ತಿದೆ.

ಗುಡಿಸಲು ಮುಕ್ತ ಕರ್ನಾಟಕದ ಕನಸು ನನಸುಗೊಳಿಸುವಲ್ಲಿ ನಮ್ಮ ಸರ್ಕಾರ ಯಶಸ್ಸಿನ ಹಾದಿಯಲ್ಲಿದೆ. ಐದು ವರ್ಷಗಳಲ್ಲಿ 15 ಲಕ್ಷ ಮನೆಗಳನ್ನು ನಿರ್ಮಿಸಬೇಕೆಂಬುದು ನಮ್ಮ ಗುರಿಯಾಗಿತ್ತು. ಮೂರು ವರ್ಷಗಳ ಅವಧಿಯಲ್ಲಿ ಸರ್ಕಾರ 8.5 ಲಕ್ಷ ಮನೆಗಳನ್ನು ನಿರ್ಮಿಸಿ ದಾಖಲೆ ಮಾಡಿದೆ. ಇದೇ ಅವಧಿಯಲ್ಲಿ 32 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಿದ್ದೇವೆ. ಇದಕ್ಕಾಗಿ ವೆಚ್ಚ ಮಾಡಿರುವ ಹಣ 7540 ಕೋಟಿ ರೂಪಾಯಿ.

ಆಶ್ರಯ ಯೋಜನೆಯಡಿ ಹಿಂದಿನ ವರ್ಷಗಳಲ್ಲಿ 10.84 ಲಕ್ಷ ಫಲಾನುಭವಿಗಳಿಗೆ ನೀಡಲಾಗಿದ್ದ 1458 ಕೋಟಿ ರೂ ಸಾಲ ಹಾಗೂ 1030 ಕೋಟಿ ರೂ ಬಡ್ಡಿ ಸೇರಿದಂತೆ 2488 ಕೋಟಿ ರೂ ಮನ್ನಾ ಮಾಡಲಾಗಿದೆ.

ಮುಂದಿನ ಎರಡು ವರ್ಷಗಳಲ್ಲಿ ಆರು ಲಕ್ಷ ಮನೆಗಳ ನಿರ್ಮಾಣ ಹಾಗೂ ನಲವತ್ತು ಸಾವಿರ ನಿವೇಶನಗಳನ್ನು ಹಂಚಲು ಗುರಿ ಹೊಂದಲಾಗಿದೆ. ಇದರಲ್ಲಿ ಡಾ ಬಿ. ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ 1,60,000 ಮನೆಗಳು ಹಾಗೂ ನಗರ ಪ್ರದೇಶದಲ್ಲಿ 90,000 ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿತರಿಸುವ ಗುರಿ ಹೊಂದಲಾಗಿದೆ. ವಿಶೇಷ ವಸತಿ ಯೋಜನೆಯನ್ನು ದೇವರಾಜ ಅರಸು ವಸತಿ ಯೋಜನೆ ಎಂದು ಮರು ನಾಮಕರಣ ಮಾಡಲಾಗಿದೆ. ಈ ಯೋಜನೆಯಡಿ 14



ವಿಶೇಷ ವರ್ಗದವರಿಗಾಗಿ 20,000 ಮನೆಗಳನ್ನು ನಿರ್ಮಿಸಿ ವಿತರಿಸುವ ಗುರಿ ನಿಗದಿಪಡಿಸಲಾಗಿದೆ.

ನಗರದ ಸ್ವಚ್ಛತೆಯನ್ನು ಕಾಯ್ದುಕೊಳ್ಳುವಲ್ಲಿ ಮಹತ್ತರ ಪಾತ್ರ ನಿರ್ವಹಿಸುವ ಪೌರ ಕಾರ್ಮಿಕರಿಗೆ ಮನೆ ಒದಗಿಸುವ ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಪ್ರತಿ ಮನೆಯ ನಿರ್ಮಾಣದ ಗರಿಷ್ಠ ಘಟಕ ವೆಚ್ಚ 7.5 ಲಕ್ಷ ರೂ. ನಿಗದಿಪಡಿಸಲಾಗಿದೆ. ಇದರಲ್ಲಿ ಫಲಾನುಭವಿಗೆ ಶೇಕಡಾ 80 ರಷ್ಟು ಅಂದರೆ 6 ಲಕ್ಷ ರೂ ಅನುದಾನ ನೀಡಲಾಗುವುದು. ಮುಂದಿನ ಎರಡು ವರ್ಷಗಳಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಪೌರ ಕಾರ್ಮಿಕರಿಗೆ ಈ ಯೋಜನೆಯ ಅಡಿಯಲ್ಲಿ 4500 ವಸತಿ ಗೃಹಗಳನ್ನು ನಿರ್ಮಿಸಿಕೊಡಲಾಗುವುದು.

ವಿದ್ಯುತ್ ಎಂಬುದು ಅಭಿವೃದ್ಧಿಯ ಜೀವ ನಾಡಿ ಎನಿಸಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ 1,333.85 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೆಚ್ಚಾಗಿದೆ. ಇದರಲ್ಲಿ ಪರಿಸರ–ಸ್ನೇಹಿ ಪರ್ಯಾಯ ಇಂಧನ ಮೂಲಗಳಿಂದ 365.85 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಸೇರ್ಪಡೆಯಾಗಿದೆ.

ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಯರಮರಸ್ ಘಟಕ–1 ಹಾಗೂ ಘಟಕ–2 ರಿಂದ ಒಟ್ಟಾರೆ 1600 ಮೆಗಾ ವ್ಯಾಟ್ ಸೇರ್ಪಡೆಯಾಗುವ ನಿರೀಕ್ಷೆ ಇದೆ.

ಯಲಹಂಕದಲ್ಲಿ 370 ಮೆಗಾ ವ್ಯಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಕೇಂದ್ರದ ಕಾಮಗಾರಿಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ. ಅಲ್ಲದೆ, ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ 12,000 ಎಕರೆ ಪ್ರದೇಶದಲ್ಲಿ 2000 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ಉದ್ಯಾನ (ಸೋಲಾರ್ ಪಾರ್ಕ್) ಸ್ಥಾಪಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಳೆದ ಮೂರು ವರ್ಷಗಳಿಂದ ಬಂಡವಾಳ ಹೂಡಿಕೆದಾರರಿಗೆ ಇಡೀ ರಾಷ್ಟ್ರದಲ್ಲೇ  ಕರ್ನಾಟಕ ರಾಜ್ಯವು ನೆಚ್ಚಿನ ತಾಣವಾಗಿದೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ.



ಕೇಂದ್ರ ಸರ್ಕಾರವೇ ಇತ್ತೀಚೆಗೆ ಬಿಡುಗಡೆಗೊಳಿಸಿರುವ ಅಂಕಿ–ಅಂಶಗಳ ಪ್ರಕಾರ ಪ್ರಸಕ್ತ ವರ್ಷದ ಜನವರಿ ತಿಂಗಳಿನಿಂದ ಜೂನ್ ವರೆಗಿನ ಅವಧಿಯಲ್ಲಿ 67,757 ಕೋಟಿ ರೂಪಾಯಿ ಬಂಡವಾಳವು ರಾಜ್ಯದಲ್ಲಿ ಹೂಡಿಕೆಯಾಗಿ, ಇಡೀ ದೇಶದಲ್ಲಿಯೇ ನಮ್ಮ ಕರ್ನಾಟಕವು ಮೊದಲ ಸ್ಥಾನ ಪಡೆದಿದೆ.

ಪ್ರಸಕ್ತ ಸಾಲಿನ ಫೆಬ್ರವರಿಯಲ್ಲಿ ಆಯೋಜಿಸಿದ್ದ "ಇನ್‌ವೆಸ್ಟ್ ಕರ್ನಾಟಕ 2016" ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ 1.77 ಲಕ್ಷ ಕೋಟಿ ರೂ ಬಂಡವಾಳ ಭರವಸೆಗಳ 1080 ಯೋಜನೆಗಳಿಗೆ ಅನುಮೋದನೆ ದೊರೆತಿದೆ. ಇದರಿಂದ 4.82 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಅಲ್ಲದೆ, ಈ ಕಾರ್ಯಕ್ರಮದಲ್ಲಿ 122 ಯೋಜನೆಗಳ ಒಡಂಬಡಿಕೆಗಳಿಗೆ ಸಹಿ ಮಾಡಲಾಗಿದೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು "ಇನ್‌ವೆಸ್ಟ್ ಕರ್ನಾಟಕ ಫೋರಂ" ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ರಾಜ್ಯದ ಪ್ರಮುಖ ನಗರಗಳಲ್ಲಿ ಉಚಿತ ವೈ–ಫೈ ಹಾಟ್‌ಸ್ಪಾಟ್‌ಗಳನ್ನು ಹಾಗೂ ಎಲ್ಲಾ ಪಂಚಾಯತ್‌ಗಳಲ್ಲಿ ಉಚಿತ ವೈ–ಫೈ ಸೌಲಭ್ಯವನ್ನು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಶೀಘ್ರವೇ ಜಾರಿಗೆ ತರಲಾಗುವುದು.

ಕಾವೇರಿ ಹಾಗೂ ಕೃಷ್ಣಾ ಕೊಳ್ಳದ ಎಲ್ಲಾ ನೀರಾವರಿ ಯೋಜನೆಗಳಿಗಾಗಿ ಮುಂದಿನ ಐದು ವರ್ಷಗಳಲ್ಲಿ ವರ್ಷಕ್ಕೆ 10,000 ಕೋಟಿ ರೂ ನಂತೆ 50,000 ಕೋಟಿ ರೂ ವೆಚ್ಚ ಮಾಡಬೇಕೆಂಬ ನಿರ್ಧಾರ ಕೈಗೊಂಡಿದ್ದೆವು. ಇದೀಗ ಐದು ವರ್ಷಗಳಲ್ಲಿ  ರಾಜ್ಯ ಸರ್ಕಾರವು ನೀರಾವರಿ ಯೋಜನೆಗಳಿಗೆ ಮಾಡುವ ವೆಚ್ಚ 50,000 ಕೋಟಿ ರೂ ಅಲ್ಲ, 60,000 ಕೋಟಿ ರೂ ತಲುಪುವ ನಿರೀಕ್ಷೆ ಇದೆ. ಇದು ರೈತರ ಬಗೆಗಿನ ನಮ್ಮ ಸರ್ಕಾರದ ಕಾಳಜಿ ಮತ್ತು ಬದ್ಧತೆಯನ್ನು ಬಿಂಬಿಸುತ್ತದೆ.

ನಾಡಿನ ಜಲ–ನೆಲ–ಭಾಷೆಯ ವಿಚಾರದಲ್ಲಿ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು ಪಕ್ಷಭೇದ ಮರೆತು ಒಗ್ಗಟ್ಟಿನ ಪ್ರದರ್ಶನ ಮಾಡಿಕೊಂಡು ಬಂದ ಆರೋಗ್ಯಕರ ಪರಂಪರೆ ನಮ್ಮದು.ಕೃಷ್ಣಾ ಮತ್ತು ಕಾವೇರಿ ನದಿ ನೀರು ಹಂಚಿಕೆ ವಿವಾದವನ್ನು ಇದೇ ರೀತಿಯಲ್ಲಿ ನಾವು ಎದುರಿಸಿದ್ದೇವೆ.

ಮಹದಾಯಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದ ಸರ್ವಪಕ್ಷಗಳ ಸಭೆಯಲ್ಲಿ ರಾಜಕೀಯ ಪಕ್ಷಗಳ ನಾಯಕರು ವ್ಯಕ್ತಪಡಿಸಿದ ಒಮ್ಮತದ ಸಹಕಾರಕ್ಕೆ ನಾನು ಅಭಾರಿಯಾಗಿದ್ದೇನೆ. ನೆಲ–ಜಲ–ಭಾಷೆಯ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಯ ಸಂಪೂರ್ಣ ರಕ್ಷಣೆ ಮಾಡಲಾಗುವುದು. ಇದರಲ್ಲಿ ನಮ್ಮ ಸರ್ಕಾರ ಯಾವುದೇ ರೀತಿಯ ರಾಜಿಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಈ ವಿಷಯದಲ್ಲಿ ಅನಗತ್ಯ ಪ್ರಚೋದನೆ ಇಲ್ಲವೆ ಭಾವೋದ್ವೇಗಕ್ಕೆ ಒಳಗಾಗದೆ ಸರ್ಕಾರದ ಮೇಲೆ  ಭರವಸೆ ಇಟ್ಟು ಸಹಕರಿಸಬೇಕೆಂಬುದೇ ರಾಜ್ಯದ ಜನತೆಯಲ್ಲಿ ನನ್ನ ಕಳಕಳಿಯ ಪ್ರಾರ್ಥನೆ.



ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೆ ಹಂತದ ಅನುಷ್ಠಾನಕ್ಕೆ ಸರ್ಕಾರ ಆದ್ಯತೆ ನೀಡಿದೆ. ಈ ಯೋಜನೆಯ ಉಪ ಯೋಜನೆಗಳಾದ ಮುಳವಾಡ, ಕೊಪ್ಪಳ, ಮಲ್ಲಾಬಾದ್, ರಾಂಪುರ, ಚಿಮ್ಮಲಗಿ, ಇಂಡಿ, ಏತ ನೀರಾವರಿ ಯೋಜನೆಗಳು, ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಮತ್ತು ಹೆರ್ಕಲ್ ಏತ ನೀರಾವರಿ ಯೋಜನೆಗಳು ಅನುಷ್ಠಾನದ ಹಾದಿಯಲ್ಲಿವೆ. ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವ ಲ್ಲೆಗಳಿಗೆ ಕುಡಿಯುವ ನೀರು ಒದಗಿಸಲು 13 ಸಾವಿರ ಕೋಟಿ ರೂ. ವೆಚ್ಚದ ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಕಾಮಗಾರಿ ಭರದಿಂದ ಸಾಗಿದೆ. ಸಿಂಗಟಾಲೂರು ಏತ ನೀರಾವರಿ ಯೋಜನೆಯ ಅಂದಾಜು ಮೊತ್ತವನ್ನು 5768 ಕೋಟಿ ರೂ. ಗಳಿಗೆ ಪರಿಷ್ಕರಿಸಿ ಒಟ್ಟು 2.65 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ.

ಆಲಮಟ್ಟಿ ಆಣೆಕಟ್ಟನ್ನು 524.25 ಮೀಟರ್‌ಗೆ ಏರಿಸುವ ಉದ್ದೇಶಕ್ಕಾಗಿ ಮುಳುಗಡೆ ಪ್ರದೇಶದ ಭೂ ಸ್ವಾಧೀನ ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಮಗಾರಿಗಳನ್ನು ಚುರುಕುಗೊಳಿಸಲು ಉನ್ನತಮಟ್ಟದ ಸಮಿತಿ ಮತ್ತು ಕ್ರಿಯಾ ಯೋಜನೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

ಮಳೆಗಾಲದಲ್ಲಿ ಹೆಚ್ಚುವರಿಯಾಗಿ ಹರಿದು ಸಮುದ್ರ ಸೇರುವ ಕಾವೇರಿ ನದಿಯ ಹೆಚ್ಚುವರಿ ನೀರನ್ನು ಬಳಸಿಕೊಂಡು ಮೇಕೆದಾಟು ಸಮೀಪ ಕಾವೇರಿ ನದಿಗೆ ಸಮತೋಲನ ಜಲಾಶಯವನ್ನು ನಿರ್ಮಿಸಲು 5912 ಕೋಟಿಗಳಿಗೆ ರೂ. ಸಂಕ್ಷಿಪ್ತ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಮೇಕೆದಾಟು ಯೋಜನೆಯಿಂದ 400 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯ ಜೊತೆಗೆ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸಲು ಅನುಕೂಲವಾಗುತ್ತದೆ.

ಕಾವೇರಿ ನೀರಾವರಿ ನಿಗಮವು ಕೆರೆ ತುಂಬಿಸುವ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಮುಂದಿನ ಎರಡು ವರ್ಷಗಳಲ್ಲಿ 1002 ಕೋಟಿ ರೂ. ಅಂದಾಜು ಮೊತ್ತದ 12 ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಇದರಲ್ಲಿ ತುಮಕೂರು ಜಿಲ್ಲೆಯಲ್ಲಿ ಐದು ಕೆರೆಗಳು, ಚಾಮರಾಜನಗರ ಜಿಲ್ಲೆಯ 24 ಕೆರೆಗಳು, ರಾಮನಗರ ಜಿಲ್ಲೆಯ 167 ಕೆರೆಗಳು, ಹಾಸನ ಜಿಲ್ಲೆಯ 53 ಕೆರೆಗಳು, ಮೈಸೂರು ಜಿಲ್ಲೆಯ 181 ಕೆರೆಗಳೂ ಸೇರಿದಂತೆ ಒಟ್ಟಾರೆ 430 ಕೆರೆಗಳಿಗೆ ನೀರನ್ನು ತುಂಬಿಸಿ 341 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಯೋಜಿಸಲಾಗಿದೆ.

ಸಣ್ಣ ನೀರಾವರಿ ಯೋಜನೆಗಳ ಮೂಲಕ ಕಳೆದ ಮೂರು ವರ್ಷಗಳಲ್ಲಿ 99,540 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ನೀರಾವರಿ ಸೌಲಭ್ಯವನ್ನು ಸೃಜಿಸಲಾಗಿದೆ.. "ಕೆರೆ ಅಭಿವೃದ್ಧಿ–ನಾಡಿನ ಶ್ರೇಯೋಭಿವೃದ್ಧಿ" ಕಾರ್ಯಕ್ರಮದಡಿ ಗುರುತಿಸಲಾಗಿದ್ದ 104 ಕೆರೆಗಳ ಪೈಕಿ 92 ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ.

ಬೆಂಗಳೂರು ನಗರದ ಕೋರಮಂಗಲ–ಚಲ್ಲಘಟ್ಟ ಕಣಿವೆಯಿಂದ ಹರಿಯುವ ಕೊಳಚೆ ನೀರನ್ನು ಸಂಸ್ಕರಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಐದು ಕೆರೆಗಳು ಹಾಗೂ ಕೋಲಾರ ಜಿಲ್ಲೆಯ 121 ಕೆರೆಗಳು ಒಳಗೊಂಡಂತೆ ಒಟ್ಟು 126 ಕೆರೆಗಳಿಗೆ ನೀರು ತುಂಬಿಸುವ 1280 ಕೋಟಿ ರೂ ವೆಚ್ಚದ ಏತ ನೀರಾವರಿ ಯೋಜನೆಗೆ ಈಗಾಗಲೇ ಚಾಲನೆ ನೀಡಲಾಗಿದೆ.

ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಸುಮಾರು 60 ಕೆರೆಗಳಿಗೆ ದಕ್ಷಿಣ ಪಿನಾಕಿನಿ ನದಿಗೆ ಹರಿಯುತ್ತಿರುವ ಬೆಂಗಳೂರು ನಗರದ ಸಂಸ್ಕರಿಸಿದ ಕೊಳಚೆ ನೀರನ್ನು ತುಂಬಿಸಲು ಮುತ್ತಸಂದ್ರ ಗ್ರಾಮದ ಸಮೀಪ 240 ಕೋಟಿ ರೂ. ವೆಚ್ಚದಲ್ಲಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಆಯ್ದ ಕೆರೆಗಳಿಗೆ ಹೆಬ್ಬಾಳ ಕಣಿವೆಯಿಂದ ಹರಿಯುವ ಕೊಳಚೆ ನೀರನ್ನು ಸಂಸ್ಕರಿಸಿ ತುಂಬಿಸುವ 883.54 ಕೋಟಿ ರೂ ವೆಚ್ಚದ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದರಿಂದ ಅಂತರ್ಜಲ ಮಟ್ಟವು ಅಭಿವೃದ್ಧಿ ಹೊಂದುವುದರೊಂದಿಗೆ ಜಲಮೂಲಗಳ ಲಭ್ಯತೆಗೆ ಅನುಕೂಲಕರವಾಗುತ್ತದೆ.

ರಾಜ್ಯದ ಪಶ್ಚಿಮ ವಾಹಿನಿ ಯೋಜನೆಯ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ. ಈ ಯೋಜನೆಯಡಿಯಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಿಂಡಿ ಆಣೆಕಟ್ಟುಗಳನ್ನು ನಿರ್ಮಾಣ ಮಾಡುವುದು ಮತ್ತು ಉಪ್ಪು ನೀರಿನ ತಡೆಗೊಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ಅಗತ್ಯ ಶುದ್ಧ ಕುಡಿಯುವ ನೀರು ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ. ಇದಕ್ಕಾಗಿ ನಮ್ಮ ಸರ್ಕಾರ ಎಲ್ಲಾ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಘಟಕಗಳ ಸ್ಥಾಪಿಸುವ ಕ್ರಾಂತಿಕಾರಕ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ.

ಶುದ್ಧ ಕುಡಿಯುವ ನೀರನ್ನು ಗ್ರಾಮೀಣ ಜನರಿಗೆ ತಲುಪಿಸಲು ಕಳೆದ ಮೂರು ವರ್ಷಗಳಲ್ಲಿ 6260 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ಹೆಚ್ಚುವರಿಯಾಗಿ 5,000 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ಅಗತ್ಯ ಕ್ರಮ ವಹಿಸಲಾಗುವುದು.

ರಾಜ್ಯದ ಗ್ರಾಮೀಣ ಪ್ರದೇಶದ 60,220 ಜನವಸತಿಗಳಲ್ಲಿನ 401.10 ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಕಳೆದ ಮೂರು ವರ್ಷಗಳಲ್ಲಿ 9189 ಕಿರು ನೀರು ಸರಬರಾಜು ಯೋಜನೆ, 6994 ಸಂಖ್ಯೆ ಕೊಳವೆ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ.

ಶಾಶ್ವತ ಶುದ್ಧ ಕುಡಿಯುವ ನೀರು ಒದಗಿಸಲು 118 ಬಹು ಗ್ರಾಮ ಕುಡಿಯುವ ನೀರು ಯೋಜನೆಗಳನ್ನು ಪೂರ್ಣಗೊಳಿಸಿ 21.45 ಲಕ್ಷ ಜನಸಂಖ್ಯೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ 150 ಬಹು ಗ್ರಾಮ ಕುಡಿಯುವ ನೀರು ಯೋಜನೆಗಳನ್ನು ಪೂರ್ಣಗೊಳಿಸಿ 40 ಲಕ್ಷ ಜನಸಂಖ್ಯೆಗೆ ಶಾಶ್ವತ ಶುದ್ಧ ಕುಡಿಯುವ ನೀರು ಒದಗಿಸಲಾಗುವುದು.

ಮನೆಗೊಂದು ಶೌಚಾಲಯ ರಾಜ್ಯ ಸರ್ಕಾರದ ಧ್ಯೇಯವಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಸುಮಾರು 21 ಲಕ್ಷ ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ 21 ಲಕ್ಷಕ್ಕೂ ಹೆಚ್ಚು ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣಗೊಳಿಸಲಾಗುವುದು. ಅಕ್ಟೋಬರ್ 2, 2018 ರ ವೇಳೆಗೆ ರಾಜ್ಯದ ಗ್ರಾಮೀಣ ಪ್ರದೇಶವನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಮಾಡುವ ಗುರಿಗೆ ಸರ್ಕಾರ ಕಟಿಬದ್ಧವಾಗಿದೆ.

ಪ್ರಸಕ್ತ ಸಾಲಿನಲ್ಲಿ ಪಂಚಾಯತ್–100 ಯೋಜನೆಯಡಿ ರಾಜ್ಯದ ಆಯ್ದ 2000 ಗ್ರಾಮ ಪಂಚಾಯಿತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರಗಳನ್ನು ಸ್ಥಾಪಿಸಿ ಗ್ರಾಮೀಣ ಜನರಿಗೆ ದಿನನಿತ್ಯ ಅಗತ್ಯವಿರುವ 100 ಸೇವೆಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿಯೇ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಹಂತ ಹಂತವಾಗಿ ಉಳಿದ ಗ್ರಾಮ ಪಂಚಾಯತ್‌ಗಳಿಗೂ ಈ ಸೇವೆಗಳನ್ನು ವಿಸ್ತರಿಸಲು ಅಗತ್ಯ ಕ್ರಮವಹಿಸಲಾಗಿದೆ.

ಸಂವಿಧಾನ ಶಿಲ್ಪಿ ಡಾ ಬಿ. ಆರ್. ಅಂಬೇಡ್ಕರ್ ಅವರ 125 ನೇ ಜನ್ಮ ದಿನಾಚರಣೆಯ ಸಂಸ್ಮರಣೆಯಲ್ಲಿ ವರ್ಷವಿಡೀ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಮ್ಮ ಸರ್ಕಾರದ ಪ್ರಮುಖ ಯೋಜನೆಗಳಿಗೆ ಭಾರತರತ್ನ ಡಾ ಅಂಬೇಡ್ಕರ್ ಅವರ ಚಿಂತನೆಗಳು ಹಾಗೂ ಆಶಯಗಳೇ ಸ್ಫೂರ್ತಿಯಾಗಿವೆ. ಈ ಹಿನ್ನೆಲೆಯಲ್ಲಿ ಡಾ ಅಂಬೇಡ್ಕರ್ ಅವರ ವಿಚಾರಧಾರೆ ಕುರಿತ ಅಂತಾರಾಷ್ಟ್ರೀಯ ಮಟ್ಟದ ವಿಚಾರಣ ಸಂಕಿರಣವನ್ನು ಅರ್ಥಪೂರ್ಣವಾಗಿ ಆಚರಿಸಲು ಉದ್ದೇಶಿಸಲಾಗಿದೆ.

ಅವಕಾಶ ವಂಚಿತ ಸಮುದಾಯಗಳಿಗೆ ಸಂಪತ್ತು ಮತ್ತು ಅವಕಾಶಗಳಲ್ಲಿ ಸಮಪಾಲು ನೀಡುವ ಉದ್ದೇಶದಿಂದ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯಿದೆ 2013 ರ ಜಾರಿ ನಮ್ಮ ಸರ್ಕಾರದ ಸಾಧನೆಯ ಪ್ರಮುಖ ಮೈಲಿಗಲ್ಲು.

ಈ ಕಾಯ್ದೆಯಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡುವ ಹಣ ದುಪ್ಪಟ್ಟಾಗಿದೆ. 2013–14 ರ ಬಜೆಟ್‌ನಲ್ಲಿ 8616 ಕೋಟಿ ರೂ. ನಿಗದಿಯಾಗಿದ್ದರೆ 2014–15 ನೇ ಸಾಲಿನಲ್ಲಿ ಇದು 15,834 ಕೋಟಿ ರೂಪಾಯಿಯಾಗಿತ್ತು.



2015–16 ನೇ ಸಾಲಿಗಾಗಿ 16,356 ಕೋಟಿ ರೂ ಗಳನ್ನು ಬಜೆಟ್‌ನಲ್ಲಿ ನಿಗದಿ ಮಾಡಿದೆ.
ಒಟ್ಟಾರೆಯಾಗಿ ಕಳೆದ ಮೂರು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳಡಿ ಎಲ್ಲಾ ಅಭಿವೃದ್ಧಿ ಇಲಾಖೆಗಳಿಗೆ 40,800 ಕೋಟಿ ರೂ. ಗಳನ್ನು ಸರ್ಕಾರ ಒದಗಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ 145 ವಸತಿ ಶಾಲೆಗಳನ್ನು ಮತ್ತು 100 ಹಾಸ್ಟೆಲ್‌ಗಳನ್ನು ತೆರೆಯಲಾಗಿದೆ. ಇದರಿಂದಾಗಿ 35 ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ.

ಭೂ ಒಡೆತನ ಯೋಜನೆಯಡಿ 2261 ಎಕರೆ ಜಮೀನನ್ನು ಖರೀದಿಸಿ ಕೊಡಲಾಗಿದೆ. ಕಳೆದ 3 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 24 ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 225 ಕೋಟಿ ರೂ. ಶಿಷ್ಯವೇತನ ನೀಡಲಾಗಿದೆ

ರಾಜ್ಯದ ಅಭಿವೃದ್ಧಿ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನಾಂಗದವರ ಒಳಿತಿಗಾಗಿ ಕೊಡುಗೆ ನೀಡಿದ ದಲಿತ ಮುಖಂಡರಾದ ದಿವಂಗತ ಬಿ. ರಾಚಯ್ಯ, ಎನ್. ರಾಚಯ್ಯ, ಬಿ. ಬಸವಲಿಂಗಪ್ಪ ಇವರುಗಳ ಹೆಸರಿನಲ್ಲಿ ಸ್ಮಾರಕಗಳನ್ನು ಮೂರು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು. ಕೊಪ್ಪಳದ ಬಹದ್ದೂರ್ ಬಂಡಿ ಕ್ಷೇತ್ರದ ಅಭಿವೃದ್ಧಿಯೂ ಸೇರಿದಂತೆ ಬಂಜಾರ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ 75 ಕೋಟಿ ರೂ.ಗಳನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ನೀಡಲಾಗಿದೆ.

ವಿದ್ಯಾಸಿರಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಈ ವರ್ಷ ಒಂದು ಲಕ್ಷ ದಾಟಲಿದೆ. ಮುಂದಿನ ಎರಡು ವರ್ಷಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ 100 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ.

ಡಿ. ದೇವರಾಜ ಅರಸು ಅವರ ಜನ್ಮ ಶತಮಾನೋತ್ಸವದ ಅಂಗವಾಗಿ 'ಡಿ. ದೇವರಾಜ ಅರಸು' ಅವರ ಹೆಸರಿನಲ್ಲಿ 100 ಸಂಖ್ಯಾಬಲದ 100 ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳನ್ನು ಪ್ರಾರಂಭಿಸಲು ಚಾಲನೆ ನೀಡಲಾಗಿದೆ.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಛಿಸಿದ 95 ವಿದ್ಯಾರ್ಥಿಗಳಿಗೆ ತಲಾ 10 ಲಕ್ಷ ರೂ.ಗಳಂತೆ 'ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ' ನೀಡಿದೆ.

ಅಲ್ಪಸಂಖ್ಯಾತ ಸಮುದಾಯದವರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಸರ್ಕಾರ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ಮತ್ತು ಮೆರಿಟ್–ಕಂ–ಮೀನ್ಸ್ ಶಿಷ್ಯವೇತನ, ಶುಲ್ಕ ಮರುಪಾವತಿ ಯೋಜನೆ ಮತ್ತು ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನ ಯೋಜನೆಗಳ ವ್ಯಾಪ್ತಿಯಲ್ಲಿ ಬಾರದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ನೀಡುತ್ತಿರುವ ಶಿಷ್ಯವೇತನ ಪಡೆಯುತ್ತಿರುವವರೂ ಸೇರಿದಂತೆ 32 ಲಕ್ಷ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ 600 ಕೋಟಿ ರೂ. ಶಿಷ್ಯವೇತನವನ್ನು ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ವಿತರಿಸಿದೆ.

ವಿದೇಶದಲ್ಲಿ ಉನ್ನತ ವ್ಯಾಸಂಗ ಪಡೆಯುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ 10 ಲಕ್ಷ ರೂ. ಗಳಿಂದ 20 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗಿದೆ. ಈವರೆಗೆ ಸುಮಾರು 360 ವಿದ್ಯಾರ್ಥಿಗಳು ಇದರ



ಪ್ರಯೋಜನವನ್ನು ಪಡೆದು ಕೊಂಡಿದ್ದಾರೆ.

ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಅವಕಾಶಗಳ ತವರೂರು. ಈ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿಗೆ ನಮ್ಮ ಸರ್ಕಾರ ಆದ್ಯತೆ ನೀಡಿದೆ. ನಮ್ಮ ಮೆಟ್ರೋದ ಮೊದಲ ಹಂತದ ಎಲ್ಲಾ ಕಾಮಗಾರಿಗಳೂ ಇದೇ ವರ್ಷದ ನವೆಂಬರ್ ವೇಳೆಗೆ ಪೂರ್ಣಗೊಳ್ಳಲಿವೆ.

ಬೆಂಗಳೂರಿನಲ್ಲಿ ಸ್ವಂತ ಮನೆ ಹೊಂದಬೇಕು ಎಂಬ ಹಲವರ ಕನಸು ನನಸು ಮಾಡಲು ಮುಂದಾಗಿರುವ ನಮ್ಮ ಸರ್ಕಾರ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೊದಲನೇ ಹಂತದಲ್ಲಿ 5000 ನಿವೇಶನಗಳನ್ನು ಹಂಚಿಕೆ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಅಂತೆಯೇ, ಎರಡನೇ ಹಂತದಲ್ಲೂ 5000 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಹೊರವರ್ತುಲ ರಸ್ತೆಯ ಸಂಚಾರವನ್ನು ಸುಗಮಗೊಳಿಸಿ ಉತ್ತಮ ಸಂಪರ್ಕ ಕಲ್ಪಿಸಲು ಬಸವೇಶ್ವರ ವೃತ್ತದಿಂದ ಹೆಬ್ಬಾಳ ವೃತ್ತದವರೆಗೆ 1350 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಹಾಗೂ ಅಲಿಸ್ಕಾದಿಂದ ಬಿ. ಇ. ಎಲ್ ವೃತ್ತದವರೆಗೆ 191.45 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡಲು ಯೋಜಿಸಲಾಗಿದೆ.

ಒತ್ತುವರಿ ಸೃಷ್ಟಿಸಿರುವ ಸಮಸ್ಯೆಗಳಿಂದಾಗಿ ನಗರದ ಜನ ಮಳೆಗೆ ಭೀತಿ ಪಡುವಂತಾಗಿದೆ. ನಗರದ ಹಿತದೃಷ್ಟಿಯಿಂದ ಕೆರೆ ಹಾಗೂ ರಾಜಕಾಲುವೆಗಳಲ್ಲಿ ಅಕ್ರಮವಾಗಿ ನಿರ್ಮಿಸಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ದಿಟ್ಟ ಕ್ರಮ ಜರುಗಿಸಲಾಗಿದೆ. ಇಂತಹ ಅಕ್ರಮಗಳಲ್ಲಿ ಭಾಗಿಯಾಗಿರುವ ನಿರ್ಮಾಣಗಾರರೂ ಹಾಗೂ ಅವರಿಗೆ ಸಹಕರಿಸಿರುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ 52,000 ಕೋಟಿ ರೂ ಮೌಲ್ಯದ 4950 ಎಕರೆ ಭೂಮಿಯನ್ನು ಒತ್ತುವರಿದಾರರಿಂದ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ.

ಬೆಂಗಳೂರು ನಗರದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಕಳೆದ ಎರಡು ವರ್ಷಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಅಡಿಯಲ್ಲಿ ನಗರಾಭಿವೃದ್ಧಿಗಾಗಿ ಒಟ್ಟು 2000 ಕೋಟಿ ರೂ. ಅನುದಾನ ನೀಡಿದೆ. ನಗರಾದ್ಯಂತ 574 ಕಾಮಗಾರಿಗಳು ಅನುಷ್ಠಾನಗೊಳ್ಳುತ್ತಿವೆ.

ಹೊರವರ್ತುಲ ರಸ್ತೆಯ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ಮತ್ತು ಓಕಳಿಪುರಂ ಜಂಕ್ಷನ್‌ನಿಂದ ಫೌಂಟೆನ್ ವೃತ್ತದವರೆಗೆ ಅಷ್ಟ–ಪಥದ ಕಾರಿಡಾರ್ ಯೋಜನೆಗಳುಅನುಷ್ಠಾನ ಈ ಯೋಜನೆಯಲ್ಲಿ ಸೇರಿದೆ.

ಬೃಹತ್ ಬೆಂಗಳೂರು ಮಹಾನರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ತರ–ದಕ್ಷಿಣ ಮತ್ತು ಪೂರ್ವ–ಪಶ್ಚಿಮ ಎಲಿವೇಟೆಡ್ ಕಾರಿಡಾರ್ ಯೋಜನೆ ಅನುಷ್ಠಾನಕ್ಕೆ ಸರಕಾರವು ಬದ್ಧವಾಗಿದೆ. ಅಲ್ಲದೆ ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಉಕ್ಕಿನ ಮೇಲುಸೇತುವೆ ನಿರ್ಮಾಣ ಯೋಜನೆಗೆ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದೆ. ನಗರದ ಆಯ್ದ ಪ್ರಮುಖ ರಸ್ತೆಗಳನ್ನು 800 ಕೋಟಿ ರೂಪಾಯಿ ವೆಚ್ಚದಲ್ಲಿ ವೈಟ್ ಟಾಪಿಂಗ್‌ಗೆ ಪರಿವರ್ತಿಸಲಾಗುವುದು.

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕೆರೆಗಳ ಪುನಶ್ಚೇತನ ಮತ್ತು ಅಭಿವೃದ್ಧಿಗಾಗಿ 156 ಕೋಟಿ ರೂ ಹಾಗೂ ಪಾಲಿಕೆ ವ್ಯಾಪ್ತಿಯ ಬೃಹತ್ ನೀರುಗಾಲುವೆಗಳ ಅಭಿವೃದ್ಧಿಗಾಗಿ 800 ಕೋಟಿ ರೂ ವೆಚ್ಚದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.

ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಸುಮಾರು 3500 ಮೆಟ್ರಿಕ್ ಟನ್‌ಗಳಷ್ಟು ಘನತ್ಯಾಜ್ಯ ಸೃಷ್ಟಿಯಾಗುತ್ತಿದೆ. ಈ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 300 ಕೋಟಿ ರೂ ಹಾಗೂ ಮುಂದಿನ ಸಾಲಿನಲ್ಲಿ 300 ಕೋಟಿ ರೂ ಅನುದಾನ ನೀಡಲಾಗುವುದು.

ಬೆಂಗಳೂರು ಮಹಾನಗರ ಕಳೆದ ಒಂದು ದಶಕದಲ್ಲಿ ತೀವ್ರತರ ಬೆಳವಣಿಗೆ ಕಂಡಿದೆ. ಮಹಾನಗರಕ್ಕೆ ಸೇರ್ಪಡೆಯಾಗಿರುವ 110 ಗ್ರಾಮಗಳಿಗೆ ಪ್ರತಿದಿನ 775 ದಶಲಕ್ಷ ಲೀಟರ್ ಕುಡಿಯುವ ನೀರು ಪೂರೈಸುವ ಕಾವೇರಿ ಐದನೇ ಹಂತದ ಯೋಜನೆಯನ್ನು ಜಾರಿಗೊಳಿಸಲು 5018 ಕೋಟಿ ರೂ. ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆ.

ನಮ್ಮ ಮೆಟ್ರೋ ಮೂರನೇ ಹಂತದ ಯೋಜನೆಯನ್ನು ರೂಪಿಸುವ ಕಾರ್ಯ ಪ್ರಾರಂಭವಾಗಿರುವುದನ್ನು ತಿಳಿಸಲು ಹರ್ಷಿಸುತ್ತೇನೆ. ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್‌ನಿಂದ ಕೃಷ್ಣರಾಜಪುರದ ವರೆಗೆ ಹಾಗೂ ನಾಗವಾರದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಮಾರ್ಗ ನಿರ್ಮಿಸಲು ಉದ್ದೇಶಿಸಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ ಪರಿಚ್ಛೇಧ 371 ಜೆ ಅನ್ವಯ ವಿಶೇಷ ಸ್ಥಾನಮಾನ ದೊರಕಿಸಿಕೊಡುವಲ್ಲಿ ನಮ್ಮ ಸರ್ಕಾರದ ಪಾತ್ರ ಸ್ಮರಣಾರ್ಹ. ಈ ಪ್ರದೇಶಕ್ಕೆ ಸಂವಿಧಾನಬದ್ಧವಾಗಿ ದೊರಕಿಸಿಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸುವಲ್ಲಿ ನಮ್ಮ ಸರ್ಕಾರ ಸ್ಪಂದಿಸುತ್ತಿದೆ. ಮುಂದಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳ ವೇಗ ಮತ್ತಷ್ಟು ಚುರುಕಾಗಲಿದೆ ಎಂಬುದು ನನ್ನ ವಿಶ್ವಾಸ.

ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜನತೆಗೆ ತಲುಪಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರ ಬಗ್ಗೆ ನಮ್ಮ ಸರ್ಕಾರಕ್ಕೆ ಸಹಜ ಕಾಳಜಿ ಇದೆ. ಸರ್ಕಾರಿ ನೌಕರರ ನೈಜ ಬೇಡಿಕೆಗಳನ್ನು ನಮ್ಮ ಸರ್ಕಾರವು ಸಹಾನುಭೂತಿಯಿಂದ ಪರಿಗಣಿಸಲಿದೆ.

ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಪೊಲೀಸರಿಗೆ ನಾವೆಲ್ಲರೂ ಕೃತಜ್ಞರು. ಅವರ ಸೇವೆಗೆ ಬೆಲೆ ಕಟ್ಟಲಾಗದು. ಪೊಲೀಸರ ಸಮಸ್ಯೆಗಳ ಅರಿವು ಕೂಡಾ ಸರ್ಕಾರಕ್ಕಿದೆ. ಅವರು ಮೇಲಿನ ಕೆಲಸದ ಒತ್ತಡವನ್ನು ಕಡಿಮೆ ಮಾಡುವುದು ನಮ್ಮ ಆದ್ಯತೆಗಳಲ್ಲೊಂದು.

ಇನ್ನೆರಡು ವರ್ಷಗಳಲ್ಲಿ 15,000 ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ. ಕಳೆದ ಮೂರು ವರ್ಷಗಳಲ್ಲಿ 364 ಸಬ್ ಇನ್ಸ್‌ಪೆಕ್ಟರ್‌ಗಳ ನೇಮಕಾತಿಯಾಗಿದೆ. ಅಲ್ಲದೆ, 215 ಸಬ್ ಇನ್ಸ್‌ಪೆಕ್ಟರ್‌ಗಳು ತರಬೇತಿಯಲ್ಲಿದ್ದಾರೆ. ಜೊತೆಗೆ, 7,642 ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕಗೊಂಡಿದ್ದಾರೆ. 6,389 ಕಾನ್ಸ್‌ಟೇಬಲ್‌ಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎಲ್ಲಾ ನೇಮಕಾತಿ ಪ್ರಕ್ರಿಯೆಗಳು ಪೂರ್ಣಗೊಂಡಾಗ ಕೆಳಸ್ತರದ ಪೊಲೀಸರ ಮೇಲಿನ ಒತ್ತಡ ಸಂಪೂರ್ಣ ಕಡಿಮೆಯಾಗಲಿದೆ.

ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ರಾಜ್ಯ ಪೊಲೀಸ್ ಸಿಬ್ಬಂದಿಗೆ ವೇತನ ಕಡಿಮೆ ಇದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ರಾಜ್ಯಗಳಲ್ಲಿ ವೇತನ ಪರಿಷ್ಕರಣೆಯಾಗಿದೆ. ನಮ್ಮ ರಾಜ್ಯದಲ್ಲಿ ವೇತನ ಪರಿಷ್ಕರಣಾ ಹಂತದಲ್ಲಿದೆ. ಪರಿಷ್ಕರಣೆಯ ಸಂದರ್ಭದಲ್ಲಿ ಎಲ್ಲಾ ತಾರತಮ್ಯಗಳನ್ನು ನಿವಾರಣೆ ಮಾಡಲಾಗುವುದು

ಪೊಲೀಸ್ ಸಿಬ್ಬಂದಿಗೆ ಉತ್ತಮ ವಸತಿ ಸೌಲಭ್ಯ ಕಲ್ಪಿಸಲು ತಲಾ 15 ಲಕ್ಷ ರೂ ವೆಚ್ಚದಲ್ಲಿ ರಾಜ್ಯ ಸರ್ಕಾರ ಈವರೆಗೆ 659 ಕೋಟಿ ರೂ ವೆಚ್ಚದಲ್ಲಿ 4,316 ಮನೆಗಳನ್ನು ನಿರ್ಮಿಸಿದೆ. ಒಟ್ಟು 11,000 ಮನೆಗಳನ್ನು ನಿರ್ಮಿಸಲು 1,818 ಕೋಟಿ ರೂ. ಅನುದಾನ ನೀಡಲಾಗಿದೆ. ಮುಂದಿನ ಹತ್ತು ತಿಂಗಳಲ್ಲಿ ಪೊಲೀಸರ ಮನೆಗಳ ನಿರ್ಮಾಣ ಪೂರ್ಣಗೊಳ್ಳಲಿದೆ.

ಭಾರತ ಹಾಗೂ ಪಾಕಿಸ್ತಾನ ಗಡಿಯ ಸಿಯಾಚಿನ್ ಪ್ರದೇಶದಲ್ಲಿ ವೀರಮರಣವನ್ನಪ್ಪಿ ಹುತಾತ್ಮರಾದ ಕುಟುಂಬಗಳಿಗೆ ವೀರ ಯೋಧರ ಪಾರ್ಥಿವ ಶರೀರದ ಸಮ್ಮುಖದಲ್ಲೇ ನಮ್ಮ ಸರ್ಕಾರ ಪರಿಹಾರದ ಚೆಕ್‌ಗಳನ್ನು ವಿತರಿಸಿ ಯೋಧರ ಬಗ್ಗೆ ಗೌರವವನ್ನು ಪ್ರದರ್ಶಿಸಿದೆ.

ಮೊದಲ ದಿನದಿಂದಲೇ ಬಡತನದ ವಿರುದ್ಧದ ಸಮರ ಸಾರಿರುವ ನಮ್ಮ ಸರ್ಕಾರ ಈ ಬದ್ಧತೆಯನ್ನು ಸ್ವಾತಂತ್ರ್ಯೋತ್ಸವದ ಶುಭ ದಿನವಾದ ಇಂದು ದೃಢೀಕರಿಸುತ್ತದೆ ಎಂಬುದನ್ನು ಪುನರುಚ್ಚರಿಸುತ್ತಾ, ತಮ್ಮೆಲ್ಲರಿಗೂ ಮತ್ತೊಮ್ಮೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳನ್ನು ತಿಳಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜೈ ಹಿಂದ್ – ಜೈ ಕರ್ನಾಟಕ

# ಟಿ.ಎಸ್.ವೆಂಕಣ್ಣಯ್ಯ

## ಒಂದು ನೆನಪು

**'ನಡೆ–ನುಡಿಗಳಿಗೆ ಸಂಬಂಧವಿಲ್ಲದ ಈ ಕಾಲದಲ್ಲಿ ವೆಂಕಣ್ಣಯ್ಯನವರಂತ ಶಿಕ್ಷಕರ ಬದುಕು ಅಪರೂಪವಾದದ್ದು. ಅವರೊಬ್ಬ ಅಸಾಮಾನ್ಯ ಗುರುವಾಗಿದ್ದರೆಂದು ಅವರ ಶಿಷ್ಯರು ನೆನೆಪಿಸಿಕೊಳ್ಳುತ್ತಾರೆ.' 'ಸರ್ವಪಲ್ಲಿ ರಾಧಾಕೃಷ್ಣ ಅವರ ಸ್ಮರಣೆಯನ್ನು 'ಶಿಕ್ಷಕರ ದಿನಾಚರಣೆ' ಆಚರಿಸುತ್ತಿರುವ ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳುತ್ತಿರುವಂತೆ ವೆಂಕಣ್ಣಯ್ಯನವರಂತ ಅಸಾಮಾನ್ಯ ಗುರುಗಳನ್ನು ಚೇತನಸ್ವರೂಪಿ ವ್ಯಕ್ತಿತ್ವವನ್ನು ಸ್ಮರಿಸಿಕೊಳ್ಳುವುದು ಇಂದಿನ ಅಗತ್ಯ**



▪ *ಡಾ. ಹೆಚ್. ವೀರಭದ್ರಪ್ಪ*

**ಕ**ನ್ನಡದ ಮೊದಲ ಪ್ರಾಧ್ಯಾಪಕರು, ಹೊಸಗನ್ನಡ ಸಾಹಿತ್ಯದ ಅಶ್ವಿನಿದೇವತೆಗಳಲ್ಲಿ ಒಬ್ಬರು ಎಂದೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪ್ರಖ್ಯಾತರಾದ ತಳುಕಿನ ವೆಂಕಣ್ಣಯ್ಯನವರು ಕನ್ನಡ ನಾಡು ನುಡಿ ಕಂಡ ಅಪರೂಪದ ವ್ಯಕ್ತಿ. ತಳುಕನ್ನು ಹೆಸರಿನಲ್ಲಷ್ಟೇ ಇಟ್ಟುಕೊಂಡಿದ್ದ ವೆಂಕಣ್ಣಯ್ಯನವರು ಥಳಕು ಬಳಕು ನಡವಳಿಕೆಯಿಂದ ದೂರವಾಗಿದ್ದವರು. ಸರಳತೆ, ನಿರಾಡಂಬರತೆ, ಮುಕ್ತ ಹಾಗೂ ತೆರೆದ ಮನಸ್ಸುಳ್ಳ ಸದಾ ಇನ್ನೊಬ್ಬರಿಗೆ ಸಹಾಯ ಮಾಡಲೆಂದೇ ಜನ್ಮ ತಳೆದಂತಿದ್ದ ವೆಂಕಣ್ಣಯ್ಯನವರದು ಶಬರಿಯ ಮನಸ್ಸು ಹಾಗು ಕರ್ಣನ ಮನೋಧರ್ಮ.

ಹೊಸಗನ್ನಡ ಅರುಣೋದಯ ಕಾಲದ ಎತ್ತರದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಇವರು ಭೌತಿಕವಾದ ತಮ್ಮ ಎತ್ತರದಿಂದಲೂ ಪ್ರಸಿದ್ಧರು. ಅವರನ್ನು ಹತ್ತಿರದಿಂದ ಕಂಡ ಎಂ.ವೀ. ಸೀತಾರಾಮಯ್ಯನವರು ಚಿತ್ರಿಸಿದ್ದಂತೆ –'ಎತ್ತರದ ನಿಲುವು, ಉನ್ನತ ವ್ಯಕ್ತಿತ್ವ, ಆರಡಿ ಅಥವಾ ಅದಕ್ಕೂ ಮೀರಿದ ಎತ್ತರ, ಎತ್ತರಕ್ಕೆ ತಕ್ಕ ಮೈಕಟ್ಟು ಇಲ್ಲದಿದ್ದುದರಿಂದ ಸಣಕಲು ಅಲ್ಲದಿದ್ದರೂ ನೀಡು ನಿಲುವಾದ ತೆಳ್ಳನೆಯ ದೇಹ. ದೇಹ ಉನ್ನತವಾದರೂ ಸದಾನತ ಶಿರಸ್ಸು. ಶಿರಸ್ಸನಲಂಕರಿಸಿದ್ದ ಎರಡು ಬೆರಳಂಚಿನ ಜರಿಯ ರುಮಾಲು, ರುಮಾಲಿನ ತ್ರಿಕೋಣಕ್ಕೆ ಕಲಾಚತುರಸ್ರದಂತೆ ಕಾಣುತ್ತಿದ್ದ ಚೌಕಮುಖ, ಚೌಕಮುಖವನ್ನು ಚಚ್ಚೌಕ ಮಾಡಿದ್ದ ಇಕ್ಕೆಡೆಯ ಕೆನ್ನೆಮೂಳೆ . . . ಪುರುಷ ಲಕ್ಷಣದ ಮುಖಕ್ಕೆ ಒಪ್ಪುವಂತಹ ಹೆಚ್ಚು ಅಲ್ಲದ ಕಡಿಮೆಯೂ ಅಲ್ಲದ ಸಮನಿರುತ್ತಿದ್ದ ಮೀಸೆ, ಎಣ್ಣೆಗೆಂಪು ಎನ್ನಬಹುದಾದ ಮುಖವರ್ಣ, . . . ಯಾವಾಗಲೂ ಗಾಢ ಚಿಂತನೆಯಲ್ಲಿರುವಂತಹ ಮುಖಭಾವ. ಆದರೆ ಸಂದರ್ಭೋಚಿತವಾಗಿ ಸೂಸುತ್ತಿದ್ದ ಅವರ ಸ್ನಿಗ್ಧ, ಮಧುರ ಮೃದುಹಾಸವನ್ನು ಮರೆಯುವುದು ಸಾಧ್ಯವೇ ಇಲ್ಲ. . ಕಪ್ಪುಬಣ್ಣದ ಸರ್ಚ್‌ಕೋಟು. ಅವರು ಸಾಧಾರಣವಾಗಿ ಉಡುತ್ತಿದ್ದುದು ಮೇಲುಕೋಟೆ ಅಂಚಿನ ಪಂಚೆ.' ಹೀಗೆ ವೆಂಕಣ್ಣಯ್ಯನವರ ವ್ಯಕ್ತಿತ್ವವನ್ನು ಎಂ.ವೀ.ಸೀ.ಯವರು ಚಿತ್ರಿಸಿದ್ದಾರೆ.

ಮೈಸೂರು ಮಲ್ಲಿಗೆಯ ಪ್ರಸಿದ್ಧ ಕವಿ ಕೆ.ಎಸ್.ನರಸಿಂಹಸ್ವಾಮಿಯವರು – 'ಒಬ್ಬರಿದ್ದರು ಕಲ್ಪವೃಕ್ಷದಂತೆ ಎತ್ತರವಾಗಿ, ತಂಪಾಗಿ, ಕಣ್ತುಂಬ ಪ್ರೀತಿ, ಮನಸ್ಸು ಎತ್ತರದಲ್ಲಿ ಜಯಶಾಲಿಯಾಗಿ ಕೆಲಸ ಮಾಡುತ್ತಿತ್ತು. . .' ಎಂದು ಚಿತ್ರಿಸಿದ್ದಾರೆ. ತಮ್ಮ ಸಮಕಾಲೀನ ಹಿರಿಕಿರಿಯ ಸಾಹಿತಿಗಳ ಒಡನಾಟದಲ್ಲಿ ಇರುತ್ತಿದ್ದ ವೆಂಕಣ್ಣಯ್ಯನವರನ್ನು ಅವರ ಒಡನಾಡಿಯಾಗಿದ್ದ ಟಿ.ಪಿ.ಕೈಲಾಸಂ ಅವರು ಒಮ್ಮೆ ಇವರ ಮನೆಗೆ ಬಂದರಂತೆ. ಬಾಗಿಲಲ್ಲಿಯೇ ಎತ್ತರವಾಗಿ ನಿಂತಿದ್ದ ಇವರನ್ನು ಕಂಡು – 'ಸ್ವರ್ಗದಲ್ಲಿ ಎಲ್ಲರೂ ಸುಕ್ಷೇಮವೇ?' ಎಂದು ಕೇಳಿದರಂತೆ. ಆಗ ವೆಂಕಣ್ಣಯ್ಯನವರು ಕುಳ್ಳರಾಗಿದ್ದ ಕೈಲಾಸಂ ಅವರನ್ನು 'ಪಾತಾಳದಿಂದ ಯಾವಾಗ ಬಂದಿರಿ? ಅಲ್ಲೇನು ವಿಶೇಷ' ಎಂದು ಪ್ರತಿಹಾಸ್ಯ ಮಾಡಿದರಂತೆ. ಪ್ರೊ.ವಿ.ಸೀ.ಯವರು ಒಮ್ಮೆ ಇವರ ಜೊತೆ ವಾಕಿಂಗ್ ಹೋಗುತ್ತಿದ್ದಾಗ ಇಬ್ಬರ ಜೋಡಿಯನ್ನು ನೋಡಿದ ಅವರ ಗೆಳೆಯರೊಬ್ಬರು ವಿ.ಸೀ. ಅವರನ್ನು ಪಕ್ಕಕ್ಕೆ ಕರೆದು ಕಿವಿಯಲ್ಲಿ – 'ನೋಡು, ನೀನು ಇನ್ನೆನಾದರು ಮಾಡು. ಆದರೆ ವೆಂಕಣ್ಣಯ್ಯನ ಜೊತೆಯಲ್ಲಿ ಮಾತ್ರ ನಡೆದು ಹೋಗಬೇಡ, ಕಾಂಟ್ರಾಸ್ಟ್ ಅತಿ' ಎಂದು ಉಸುರಿದರಂತೆ.

ಹೀಗೆ ಭೌತಿಕವಾಗಿ, ಮಾನಸಿಕವಾಗಿ ಅತಿ ಎತ್ತರದ ವ್ಯಕ್ತಿತ್ವವುಳ್ಳ ಟಿ.ಎಸ್.ವೆಂಕಣ್ಣಯ್ಯನವರು ಜನಿಸಿದ್ದು ಅಕ್ಟೋಬರ್ ೧–೧೮೮೫ರಂದು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ತಳುಕಿನ ಸುಸಂಸ್ಕೃತ ಕುಟುಂಬದ ತಂದೆ ಸುಬ್ಬಣ್ಣ ಹಾಗು ತಾಯಿ ಲಕ್ಷ್ಮೀದೇವಮ್ಮ ತುಂಬು ಕುಟುಂಬದಲ್ಲಿ ಹುಟ್ಟಿ ಬೆಳೆದ ಇವರು ತಂದೆಯಂತೆಯೇ ಸಾಹಿತ್ಯ ಪ್ರೇಮಿಗಳು, ಕೊಡುಗೈ ದಾನಿಗಳು, ಆಧ್ಯಾತ್ಮಿಕ ಮನೋಧರ್ಮ ಇವೆಲ್ಲವನ್ನು ಬಾಲ್ಯದಲ್ಲಿಯೇ ರೂಪಿಸಿಕೊಂಡಿದ್ದರು. ಚಳ್ಳಕೆರೆ, ಚಿತ್ರದುರ್ಗ, ಮೈಸೂರು, ಮುಂಬೈ, ಬಳ್ಳಾರಿ ಮುಂತಾದ ಕಡೆಗಳಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿ ಖಾಸಗಿಯಾಗಿ ಕನ್ನಡದಲ್ಲಿ ಎಂ.ಎ.ಪದವಿಯನ್ನು ಪಡೆದವರು. ಧಾರವಾಡ, ಬೆಂಗಳೂರಿನ ಸಂತ ಜೋಸೆಫರ ಕಾಲೇಜು, ದೊಡ್ಡಬಳ್ಳಾಪುರದ ಕೊಲಿಜಿಯೇಟ್ ಪ್ರೌಢಶಾಲೆ ಹಾಗು ಬೆಂಗಳೂರಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ವೆಂಕಣ್ಣಯ್ಯನವರು ೧೯೧೮–೧೯೨೭ರವರೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಟ್ಯೂಟರ್ ಆಗಿ ಸೇವೆ ಸಲ್ಲಿಸಿದರು.

**ಅಧ್ಯಾಪನ ವೃತ್ತಿಯಲ್ಲಿ**: ಬೆಂಗಳೂರಿನ ಕೊಲಿಜಿಯೇಟ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆಯಲ್ಲಿದ್ದಾಗ ನಡೆದ ಪ್ರಸಂಗವೊಂದನ್ನು ಕನ್ನಡದ ಹಾಸ್ಯ ಸಾಹಿತಿ ರಾ.ಶಿ.ಯವರು – 'ಆ ದಿನ ತರಗತಿಯಲ್ಲಿ ಗಲಭೆಯೋ ಗಲಭೆ ನಡೆಯುತ್ತಿತ್ತು. ಆಗ ಕೊಠಡಿಯ ಬಾಗಿಲಲ್ಲಿ ಹಠಾತ್ತನೆ ಆಜಾನುಬಾಹುವೊಬ್ಬರು ಕಾಣಿಸಿಕೊಂಡರು. ರುಮಾಲನ್ನು ಕಂಡಾಗ ಇವರು ಹೊಸ ಮೇಷ್ಟ್ರು ಅಂತ ಅರ್ಥವಾಯಿತು. ಇಂಗ್ಲೀಷ್ ಪೊಯಟ್ರಿಯ ಆ ಪಿರಿಯಡ್ಡಿನಲ್ಲಿ... ಇಂಗ್ಲೀಷ್‌ನಲ್ಲಿಯೇ ಪಾಠ, ಇಂಗ್ಲೀಷ್‌ನಲ್ಲಿಯೇ ವಿವರಣೆ, ಹುಡುಗರ ಮನಸ್ಸನ್ನು ಸೆರೆಹಿಡಿಯುವ ಕಲೆ, ಪಾಠ ಶುರುವಾದ ಕೆಲವೇ ನಿಮಿಷಗಳಲ್ಲಿ ಕ್ಲಾಸು ನಿಶ್ಶಬ್ಧವಾಗಿತ್ತು' ಎಂದು ವಿವರಿಸುತ್ತಾರೆ. ಒಮ್ಮೆ ನೂರಾರು ವಿದ್ಯಾರ್ಥಿಗಳಿದ್ದ ಬಿ.ಎಸ್ಸಿ ತರಗತಿಗೆ ಇವರು ಪಾಠ ಮಾಡುತ್ತಿದ್ದಾರೆ. ಹಿಂದಿನ ಬೆಂಚಿನ ಯಾರೋ ಒಬ್ಬ Can't hear Sir, Can't hear Sir ಸ್ವಲ್ಪ ಗಟ್ಟಿಯಾಗಿ ಹೇಳಬೇಕು ಎಂದನಂತೆ.

ವೆಂಕಣ್ಣಯ್ಯನವರು ಒಮ್ಮೆ ತಲೆಯೆತ್ತಿ ವಿದ್ಯಾರ್ಥಿ ಸಮೂಹವನ್ನು ದಿಟ್ಟಿಸಿದರು. 'If I hear less, you will hear more ಎಂದು ಹೇಳಿ ನಾನು ಇದೇ ಧ್ವನಿಯಲ್ಲಿ ಸಾವಿರಾರು ಜನ ಇದ್ದಂತಹ ಸಭೆಯಲ್ಲಿ ಮಾತನಾಡಿದ್ದೇನೆ. ಕೇಳಲಿಲ್ಲ ಎಂದವರಿಲ್ಲ. ಕೇಳುವ ಅಭಿಲಾಷೆಯಿದ್ದರೆ ಕೇಳಿಸಿಯೇ ತೀರುತ್ತದೆ' ಎಂದು ಪಾಠ ಮುಂದುವರಿಸಿದರಂತೆ.

**ಪ್ರಾಧ್ಯಾಪಕ ವೃತ್ತಿಯಲ್ಲಿ**.. ಟಿ.ಎಸ್.ವೆಂಕಣ್ಣಯ್ಯನವರಿಗೆ ಕನ್ನಡದ ಮೊದಲ ಪ್ರಾಧ್ಯಾಪಕರಾಗುವ ಅದೃಷ್ಟ ಅವರ ವಿದ್ವತ್ತು ಹಾಗು ಪ್ರತಿಭೆಯನ್ನು ಅನುಲಕ್ಷಿಸಿಯೇ ಹುಡುಕಿಕೊಂಡು ಬಂದಿತ್ತು. ಆದರೆ ಇವರು ತಮಗಿಂತಲೂ ಹಿರಿಯರಾದ ಶ್ರೀ ಎ.ಆರ್.ಕೃಷ್ಣಶಾಸ್ತ್ರಿಯವರಿಗೆ ಈ ಗೌರವ ಸಿಗಬೇಕೆಂದು ಅವರೇ ಈ ಸ್ಥಾನಕ್ಕೆ ಅರ್ಹರೆಂದು ನಿರ್ಲಿಪ್ತರಾಗಿದ್ದರು. ಆದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಲ್ಲರ ಅಭಿಪ್ರಾಯವು ಟಿ.ಎಸ್.ವೆಂಕಣ್ಣಯ್ಯನವರೇ ಇದಕ್ಕೆ ಸೂಕ್ತ ಎಂಬ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದರು. ಬಿ.ಎಂ.ಶ್ರೀಯವರು, ಇನ್ನು ಅನೇಕ ಹಿರಿಯರು ಇವರಿಗೆ ಅರ್ಜಿ ಸಲ್ಲಿಸುವಂತೆ ಒತ್ತಾಯ ಮಾಡಿದಾಗಲೂ ಇವರು ಒಪ್ಪಲಿಲ್ಲ. ಕೊನೆಗೆ ಪ್ರಾಶುಂಪಾಲರ ಬಲವಂತಕ್ಕೆ ಕಟ್ಟುಬಿದ್ದು ಪ್ರಾಶುಂಪಾಲರ ಕಚೇರಿಯಲ್ಲಿಯೇ ಈ ಮೊದಲೇ ಬೆರಳಚ್ಚಿನಿಂದ ತಯಾರಿಸಿಟ್ಟಿದ್ದ ಅರ್ಜಿಯ ಮೇಲೆ ರುಜು ಹಾಕಿಸಿಕೊಂಡರಂತೆ. ಆ ದಿನವೇ ಆ ಅರ್ಜಿ ಮೈಸೂರಿಗೆ ತಲುಪಿ ಅಂತಿಮವಾಗಿ ಟಿ.ಎಸ್.ವೆಂಕಣ್ಣಯ್ಯನವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡದ ಮೊದಲ ಪ್ರಾಧ್ಯಾಪಕರಾದರು. ವಿದ್ಯಾರ್ಥಿಗಳ ಲಾಲನೆ ಪಾಲನೆಯಲ್ಲಿ ಸದಾ ಆಸಕ್ತಿ. ಅವರ ಹಿತಚಿಂತನೆಯ ಕಡೆಯೇ ಸದಾ ಮಗ್ನ. ಇವರ ಮೊದಲ ಬ್ಯಾಚಿನ ವಿದ್ಯಾರ್ಥಿಯಾಗಿದ್ದ ಎಸ್.ವಿ.ಪರಮೇಶ್ವರಭಟ್ಟರು –'ತರಗತಿಗೆ ಬಂದೊಡನೆಯೇ ತಮ್ಮ ಕಷ್ಟನಿಷ್ಠುರಗಳನ್ನು ಮರೆತು ವಿದ್ಯಾರ್ಥಿಯ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಕ್ಯಾಂಟಿನಿಂದ ಕಾಫಿ ತಿಂಡಿ ತರಿಸಿ ವಿದ್ಯಾರ್ಥಿಯನ್ನು ತಂಪು ಮಾಡಿದ ಮೇಲೆಯೇ ಪಾಠ.ವಿದ್ಯಾರ್ಥಿಯಿಂದ ರಚನಾತ್ಮಕ ಕೆಲಸಗಳನ್ನು ಮಾಡಿಸುತ್ತಿದ್ದರು.ಅವರು ನೀಡಿದ ಸಲಹೆ ಸಹಕಾರ, ಪ್ರೋತ್ಸಾಹಗಳ ಫಲವಾಗಿಯೇ ನಾನು ಇಷ್ಟರಮಟ್ಟಿಗೆ ಬೆಳೆದಿದ್ದೇನೆ' ಎಂದಿದ್ದಾರೆ.

ಕುವೆಂಪು ವೆಂಕಣ್ಣಯ್ಯನವರ ಅತ್ಯಂತ ಪ್ರೀತಿಯ ಶಿಷ್ಯರಲ್ಲೊಬ್ಬರು. ತಮ್ಮ ಗುರುಗಳನ್ನು ಕುರಿತು –'ಇವರ ವ್ಯಕ್ತಿತ್ವ ಪ್ರಖರವಾದುದಲ್ಲ, ಸೌಮ್ಯವಾದುದು. . . . ನಮ್ಮಿಬ್ಬರ ಸಂಬಂಧದಲ್ಲಿ ಅಕ್ಕರೆಯ ಸ್ವರೂಪವಿತ್ತು. ಅವರೊಡನೆ ತುಂಬಾ ಸಲುಗೆಯಿಂದ ಇರುತ್ತಿದ್ದೆ. ನನಗೆ ಅವರಲ್ಲಿ ಯಾವಾಗಲು ಒಂದು ವಿಶ್ವಾಸಪೂರ್ವಕವಾದ ಪೂಜ್ಯಭಾವವೇ ಇತ್ತು. ಅದು ಅಹೇತುಕವಾಗಿ ದೈವಿಕವಾಗಿತ್ತು' ಎಂದಿದ್ದಾರೆ. ಅವರು ತರಗತಿಗೆ ಬರುವಾಗಲೇ ಪ್ರವೇಶಭಂಗಿಯೇ ಸಂತೋಷಾಗಮನದಂತಿರುತ್ತಿತ್ತು. ಉದ್ದವಾಗಿ ತೋರುತ್ತಿದ್ದ ಅವರು ತಮ್ಮ ಎತ್ತರವನ್ನು ತೋರಗೊಡಬಾರದೆಂಬ ವಿನಯದ ದಾಕ್ಷಿಣ್ಯಭಾರಕ್ಕೆಂಬಂತೆ ತುಸುಬಾಗಿ ನಡೆದು ಬರುತ್ತಿದ್ದರು. . . . ಅವರಲ್ಲಿ ಉಪನ್ಯಾಸದ ಪ್ರತಿಷ್ಠೆಯಾಗಲಿ, ಭಾಷಣದ ವಾಗ್ಮಿತಾಧೋರಣೆಯಾಗಲಿ ಇರದೆ ವಿದ್ಯಾರ್ಥಿಯ ಮನಸ್ಸಿಗೆ ಹೋಗುವ ಸಂವಾದದಂತಿರುತ್ತಿತ್ತು. ಕುವೆಂಪು ಅಂತು ಟಿ.ಎಸ್.ವೆಂಕಣ್ಣಯ್ಯನವರನ್ನು ಸ್ಮರಿಸದ ದಿನವೇ ಇರುತ್ತಿರಲಿಲ್ಲ. ತಮ್ಮನ್ನು ಮಹಾಕವಿಯಾಗಿ ಬೆಳೆಸಿದವರೇ ಇವರು ಎಂದು ಟಿ.ಎಸ್.ವೆಂಕಣ್ಣಯ್ಯನವರನ್ನು ಸ್ಮರಿಸುತ್ತಿದ್ದರು. ನನ್ನನ್ನು, ನನ್ನ ಬರವಣಿಗೆಯನ್ನು ತಿದ್ದಿದವರು, ಪ್ರೋತ್ಸಾಹಿಸಿದವರು, ರೂಪಿಸಿದವರು ಎಂಬ ಪೂಜನೀಯ ಗೌರವಾದರಗಳನ್ನು ಹೊಂದಿದ್ದರು. ಅವರು ಬರೆದುದು ಕಡಿಮೆ. ಆದರೆ ಬರಹಕ್ಕಿಂತಲೂ ಬದುಕು ದೊಡ್ಡದು ಎಂದು ಭಾವಿಸಿದ್ದರು. ಈ ಎಲ್ಲ ಅನುಭವಗಳನ್ನು ಪುಟ್ಟಪ್ಪನವರು ತಮ್ಮ ನೆನಪಿನ ದೋಣಿಯಲ್ಲಿ ದಾಖಲು ಮಾಡಿದ್ದಾರೆ. ಒಮ್ಮೆ ಟಿ.ಎಸ್.ವೆಂಕಣ್ಣಯ್ಯನವರು ರೊಮೇರೊಲಾ, ಟಾಲ್‌ಸ್ಟಾಯ್, ಥಾಮಸ್‌ಹಾರ್ಡಿ, ಗಾಲ್ಸ್‌ವರ್ದಿ ಮೊದಲಾದವರ ಮಹಾಕಾದಂಬರಿಗಳನ್ನು ಓದಿದ ಮೇಲೆ ಕನ್ನಡದಲ್ಲಿ ಅಂತಹ ಕಾದಂಬರಿಗಳು ಎಂದು ಹುಟ್ಟುತ್ತವೆಯೋ ಎಂದು ಹಂಬಲಿಸುತ್ತಾ 'ನೀವೇ ಏಕೆ ಬರೆಯಬಾರದು' ಎಂದು ಪುಟ್ಟಪ್ಪನವರನ್ನು ಕೇಳಿದರಂತೆ. 'ಕಾದಂಬರಿಗೆ ಅವಶ್ಯಕವಾದ ಕೆಲವು ಶಕ್ತಿಗಳು ನಿಮ್ಮಲ್ಲಿವೆ. ಸಣ್ಣಕತೆ, ನಾಟಕ, ಮಲೆನಾಡಿನ ಚಿತ್ರಗಳಲ್ಲಿ ಈಗಾಗಲೇ ನೀವು ನಿಮ್ಮ ಸಾಮರ್ಥ್ಯವನ್ನು ತೋರಿಸಿದ್ದೀರಿ. ನೀವೇ ಒಂದು ಕೈ ನೋಡಿಬಿಡಿ' ಎಂದು ಒತ್ತಾಯಿಸಿ, ಪ್ರೋತ್ಸಾಹಿಸಿದ್ದರ ಫಲವಾಗಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಬರಲು ಕಾರಣವಾಯಿತು.

ಟಿ.ಎಸ್.ವೆಂಕಣ್ಣಯ್ಯನವರ ಮನೆಯೆಂದರೆ ಅದೊಂದು ಮಾನವಜೀವಿಗಳ ಮ್ಯೂಸಿಯಂನಂತೆ ಎಂದು ತ.ಸು.ಶಾಮರಾಯರ ಅಭಿಪ್ರಾಯ. –'ಆ ಮನೆಯಲ್ಲಿ ಗಿಳಿಯಂತೆ ಮಾತನಾಡುವವರಿಂದ ಹಿಡಿದು ಹಾವಿನಂತೆ ಬುಸುಗುಟ್ಟುವವರು, ಕೋತಿಯಂತೆ ಚಂಚಲ ಮನಸ್ಸುಳ್ಳವರು, ನರಿಯಂತೆ ಉಪಾಯಗಾರರು, ನಾಯಿಯಂತೆ ಸ್ವಾಮಿನಿಷ್ಠರು, ಆನೆಯಂತೆ ಗಂಭೀರವಾಗಿರುವವರು, ಹುಲಿಯಂತೆ ಆರ್ಭಟಿಸುವವರು ಇವರೆಲ್ಲರಿಂದ ಕೂಡಿದ್ದು ಇಂತಹ ಭಿನ್ನ ಸ್ವಭಾವದವರು ಏಕತ್ರರಾದಾಗ ತಿಕ್ಕಾಟ, ಗೋಳಾಟಗಳು ಸ್ವಾಭಾವಿಕ. ಆದರೆ ಇವು ಯಾವುವು ಟಿ.ಎಸ್.ವೆಂಕಣ್ಣಯ್ಯನವರ ಕಿವಿಯ ತನಕ ಹೋಗುತ್ತಿರಲಿಲ್ಲ. ಅವರ ಬಗ್ಗೆ ಎಲ್ಲರಿಗೂ ಭಕ್ತಿ, ಏನೋ ಒಂದು ಬಗೆಯ ಭಯ. ಇದೇ ಅವರ ಬ್ರಹ್ಮಾಸ್ತ್ರ. ಈ ಬ್ರಹ್ಮಾಸ್ತ್ರದ ಪ್ರಭಾವಲಯದ ಮಧ್ಯದಲ್ಲಿ ಅವರು ಪದ್ಮಪತ್ರಮಿವಾಂಭಸರಂತೆ ಇದ್ದರು.

ಒಮ್ಮೆ ಕುವೆಂಪು ಅವರು ಉಪನಿಷತ್ತುಗಳನ್ನು ಕುರಿತು ಬರೆದಿದ್ದ ಪುಸ್ತಕವೊಂದನ್ನು ಇವರ ಮನೆಯಲ್ಲಿದ್ದ ಸಂಬಂಧದಲ್ಲಿ

ದೊಡ್ಡಪ್ಪನಾಗಬೇಕಿದ್ದ ಹಿರಿಯ ವ್ಯಕ್ತಿಯೊಬ್ಬರು ಓದಿ ಇವರು ಯಾರು ಎಂದು ಶಾಮರಾಯರನ್ನು ಕೇಳಿದರಂತೆ. ಅದಕ್ಕೆ ಶಾಮರಾಯರು 'ನಮ್ಮ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ಬಹುದೊಡ್ಡ ಕವಿ' ಎಂದರಂತೆ. ಅದಕ್ಕೆ ಆ ಹಿರಿಯವ್ಯಕ್ತಿ ಅವರೇನು ಸ್ಮಾರ್ತರೋ, ವೈಷ್ಣವರೋ ಎಂಬ ಅವರ ಪ್ರಶ್ನೆಗೆ ಅವರು 'ಎರಡೂ ಅಲ್ಲ. ಅವರು ಒಕ್ಕಲಿಗರು ಎಂಬ ನನ್ನ ಉತ್ತರಕ್ಕೆ ರೇಗಿದ ಹಿರಿಯರು ನಿನ್ನ ತಲೆ ನಿನಗೇನು ಗೊತ್ತು? ಶಂಕರಾಚಾರ್ಯ, ಅದ್ವೈತವೇದಾಂತವನ್ನೆಲ್ಲ ಓದಿರಬೇಕು, ಆತ ಸ್ಮಾರ್ತ ಬ್ರಾಹ್ಮಣನೇ ಸರಿ' ಎಂದು ಬೈದರಂತೆ. ಅದೇ ದಿನ ಮಧ್ಯಾಹ್ನ ಊಟದ ಸಮಯದಲ್ಲಿ ಈ ವಿಚಾರ ಪ್ರಸ್ತಾಪ ಬಂದಾಗ ಟಿ.ಎಸ್.ವೆಂಕಣ್ಣಯ್ಯನವರು ಸಹೋದರ ಶಾಮರಾಯರ ಮಾತನ್ನು ಅಲ್ಲಗಳೆದು 'ದೊಡ್ಡಪ್ಪ ನಿಮ್ಮ ಮಾತು ನಿಜ. ಪುಟ್ಟಪ್ಪ ಬ್ರಾಹ್ಮಣ, ಹದಿನಾರಾಣೆ ಬ್ರಾಹ್ಮಣ, ಬ್ರಾಹ್ಮಣರಲ್ಲಿ ಬ್ರಾಹ್ಮಣ'ಎಂದರಂತೆ. ಸಂಜೆ ವೆಂಕಣ್ಣಯ್ಯನವರಲ್ಲಿ ಮತ್ತೆ ಶಾಮರಾಯರು ಸತ್ಯಕ್ಕೆ ಅಪಚಾರ ಮಾಡಿದಿರಿ ಎಂದು ಪ್ರಸ್ತಾಪಿಸಿದಾಗ 'ಸತ್ಯಕ್ಕೆ ಎಲ್ಲಿ ಅಪಚಾರವಯ್ಯ? ಪುಟ್ಟಪ್ಪನನ್ನು ಬ್ರಾಹ್ಮಣನೆಂದು ಕರೆದರೆ ಸತ್ಯಕ್ಕೆ ಅಪಚಾರವೇ? ಬ್ರಾಹ್ಮಣನೆಂದರೆ ಏನೆಂದು ತಿಳಿದುಕೊಂಡೆ. ಗೀತೆಯಲ್ಲಿ ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ ಎಂದು ಹೇಳಿದ್ದಾರೆ. ವರ್ಣಭೇದವಿರುವುದು ಹುಟ್ಟಿನಲ್ಲಿ ಅಲ್ಲ. ಗುಣಕರ್ಮಗಳಲ್ಲಿ. ಬ್ರಾಹ್ಮಣನ ಗುಣಕರ್ಮಗಳು ಪುಟ್ಟಪ್ಪನಲ್ಲಿವೆ. ಆದುದರಿಂದ ಆತ ಬ್ರಾಹ್ಮಣ. . . ವಾಲ್ಮೀಕಿ ವ್ಯಾಸರನ್ನು ನಾವು ಬ್ರಾಹ್ಮಣರೆಂದು ಪೂಜಿಸುತ್ತಿಲ್ಲವೇ?' ಎಂದು ಉತ್ತರಿಸಿದರು.

**ಸೆಂಟ್ರಲ್ ಕಾಲೇಜಿನ ಕನ್ನಡ ಸಂಘ** : ಟಿ.ಎಸ್.ವೆಂಕಣ್ಣಯ್ಯ ಹಾಗು ಕೃಷ್ಣಶಾಸ್ತ್ರಿಗಳು ಪ್ರಾರಂಭಿಸಿದ ಕರ್ನಾಟಕ ಸಂಘವು ಕರ್ನಾಟಕದಲ್ಲಿ ಹುಟ್ಟಿಕೊಂಡ ಕರ್ನಾಟಕ ಸಂಘಗಳಲ್ಲಿ ಮೊಟ್ಟಮೊದಲನೆಯದು. ಕನ್ನಡಾಭಿಮಾನ, ಸಾಹಿತ್ಯಾಭಿಮಾನಗಳನ್ನು ಬೆಳೆಸುವುದರ ಜೊತೆಗೆ ಹೊಸದೊಂದು ಸಾಹಿತ್ಯಾಭಿರುಚಿಯನ್ನು, ಹೊಸ ವಿಮರ್ಶನಾ ದೃಷ್ಟಿಯನ್ನು ಮೂಡಿಸಿತು. ವೆಂಕಣ್ಣಯ್ಯನವರು ಬೆಂಗಳೂರಿನಲ್ಲಿರುವಷ್ಟು ಕಾಲ ಕಾಲೇಜನ್ನು ಬಿಟ್ಟರೆ ಕರ್ನಾಟಕಸಂಘ ಅಥವಾ ಕನ್ನಡ ಸಾಹಿತ್ಯ ಪರಿಷತ್ತು ಅವರ ಜೀವನದ ಪ್ರಮುಖ ಕಾರ್ಯರಂಗಗಳಾಗಿದ್ದವು. ಹೊಸ ಯುವಕರ ಒಂದು ಪಡೆಯನ್ನೇ ನಿರ್ಮಾಣ ಮಾಡಿದ್ದ ವೆಂಕಣ್ಣಯ್ಯನವರು ಕರ್ನಾಟಕದಲ್ಲಿ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಸಲ್ಲಿಸಿದ ಕೊಡುಗೆ ಅಪಾರ. ಈ ಸಂಘದ ಮಹತ್ಕಾರ್ಯವೆಂದರೆ 'ಪ್ರಬುದ್ಧ ಕರ್ನಾಟಕ'ವೆಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದ್ದು. ಹಲವು ವರ್ಷಗಳ ಕಾಲ ಇವರಿಬ್ಬರಿಂದ ನಡೆಯಿತು. ಎ.ಆರ್.ಕೃ ಅವರು ಮೈಸೂರಿಗೆ ವರ್ಗವಾಗಿ ಹೋದ ಮೇಲೆ ಪ್ರಬುದ್ಧ ಕರ್ನಾಟಕದ ಜವಾಬ್ದಾರಿಯೆಲ್ಲ ವೆಂಕಣ್ಣಯ್ಯನವರ ಮೇಲೆ ಬಿತ್ತು. ಈ ಎಲ್ಲ ಕೆಲಸವನ್ನು ತಮ್ಮ ಶಿಷ್ಯರ ಮೂಲಕ ಮುಂದುವರೆಸಿದರು. 'ಶಂಕರಪುರದ ಅವರ ಮನೆ ಪ್ರಬುದ್ಧ ಕರ್ನಾಟಕದ ಕಚೇರಿಯಾಗಿ ಮಾರ್ಪಟ್ಟಿತ್ತು' ಎಂದು ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳಿದ್ದಾರೆ. ಶಂಕರಪುರದ ಹತ್ತಿರವೇ ಡಿ.ವಿ.ಜಿಯವರ ಮನೆ. ಇವರಿಬ್ಬರನ್ನು ಎಲ್ಲ ಬಗೆಯಲ್ಲಿ ಹತ್ತಿರಕ್ಕೆ ತಂದಿತ್ತು. ತಮ್ಮಿಬ್ಬರ ಸ್ನೇಹದ ಬಗ್ಗೆ ಡಿ.ವಿ.ಜಿ.ಯವರು 'ಮನುಷ್ಯ ಜೀವನದಲ್ಲಿ ಎಷ್ಟೋ ಸ್ನೇಹಗಳು ಶರಟು ಕೋಟುಗಳಂತೆ ನಮ್ಮ ಮೈಗೆ ಅಂಟಿಕೊಂಡಿರುತ್ತವೆ. ಒಂದೋ ಎರಡೋ ಸ್ನೇಹಗಳು ಮಾತ್ರ ಮೈಚರ್ಮವಾಗಿ ಮಾಂಸ ಮೂಳೆಗಳಾಗಿ ಜೀವನದ ಆಶ್ರಯ ವಸ್ತುಗಳಾಗುತ್ತವೆ' ಎಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಯಾವುದೇ ಅಧಿಕಾರಸೂತ್ರ ಹಿಡಿಯದಿದ್ದರೂ ಅಲ್ಲಿನ ಪ್ರಾಚೀನ ಕಾವ್ಯಗಳ ಪರಿಷ್ಕರಣಕಾರ್ಯದಲ್ಲಿ ಇವರ ಪಾತ್ರ ಮಹತ್ತರವಾದುದಾಗಿತ್ತು. ಪಂಪಭಾರತವನ್ನು ಪುನರ್ ಮುದ್ರಣಕ್ಕಾಗಿ ಪರಿಷ್ಕಾರ ಮಾಡುತ್ತಿದ್ದಾಗ ಅವರು ಪ್ರತಿರಾತ್ರಿಯು ತಪ್ಪದೇ ಬರುತ್ತಿದ್ದರು. ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ಬಸವರಾಜದೇವರಗಳೆಯನ್ನು ಮೊದಲಬಾರಿಗೆ ಅಚ್ಚುಕಟ್ಟಾಗಿ ಸಂಪಾದಿಸಿ ವಿದ್ವತ್ಪೂರ್ಣವಾದ ಪೀಠಿಕೆ, ಶಬ್ದಕೋಶಗಳೊಂದಿಗೆ ಪ್ರಕಟಿಸಿದರು. ಇವರು ಬರೆದ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು, ಅನುವಾದಿಸಿದ ಟಾಗೂರರ ಪ್ರಾಚೀನ ಸಾಹಿತ್ಯ, ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ, ಶ್ರೀರಾಮಕೃಷ್ಣ ಲೀಲಾಪ್ರಸಂಗ ಶ್ರೇಷ್ಠ ಅನುವಾದಿತ ಕೃತಿಗಳು. ಕರ್ನಾಟಕ ಕಾದಂಬರಿಯ ಸಂಗ್ರಹ, ಹರಿಶ್ಚಂದ್ರಕಾವ್ಯ ಸಂಗ್ರಹ, ಸಿದ್ಧರಾಮಪುರಾಣ ಇವು ಶ್ರೇಷ್ಠ ಸಂಗ್ರಹಗಳಾಗಿವೆ. ಕನ್ನಡ ಕೈಪಿಡಿಯಲ್ಲಿ ಅವರು ಬರೆದಿರುವ ವ್ಯಾಕರಣ ಹಾಗು ಭಾಷಾಚರಿತ್ರೆಯ ಭಾಗಗಳು ನೀರಸ ಶಾಸ್ತ್ರವನ್ನು ಎಷ್ಟು ಆಕರ್ಷಕವಾಗಿ ಹೇಳಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿವೆ.

ಬಹುಮುಖ ಪ್ರತಿಭೆಯ ವೆಂಕಣ್ಣನವರು ಕಲ್ಪವೃಕ್ಷ, ಕಾಮಧೇನು ಎಂಬ ಮಾತಿಗೆ ಅನ್ವರ್ಥವಾಗಿದ್ದರು. ಮಾಸ್ತಿಯವರು 'ಹೊಸಗನ್ನಡ ಸಾಹಿತ್ಯದ ಅಶ್ವಿನಿ ದೇವತೆಗಳು' ಎಂದು ಕರೆದರು. ಬಿ.ಎಂ.ಶ್ರೀಯವರು ಅವರೊಂದು ಹೆಮ್ಮೆ, ಬೆಳಕು, ಕಾವಲು ಆಗಿದ್ದರು ಎಂದಿದ್ದಾರೆ. ಎನ್.ಎಸ್.ಸುಬ್ಬರಾಯರ ದೃಷ್ಟಿಯಲ್ಲಿ ಪಾಶ್ಚಾತ್ಯ ವಿಶ್ವವಿದ್ಯಾಲಯಗಳ ಪ್ರೊಫೆಸರಂತೆ, ಶಿವರಾಮಕಾರಂತರ ಮಾತಿನಲ್ಲಿ ಅವರ ರೂಪವೇ ಶೀಲ, ಶೀಲವೇ ರೂಪವಾಗಿತ್ತು.

ಟಿ.ಎಸ್.ವೆಂಕಣ್ಣಯ್ಯನವರು ಕೀರ್ತಿ ಪ್ರತಿಷ್ಠೆ ಸನ್ಮಾನಗಳಿಗೆ ಎಂದೂ ಆಸೆಪಟ್ಟವರಲ್ಲ. ಅವರೊಬ್ಬ ನೇಪಥ್ಯ ಸಾಧಕರಾಗಿದ್ದರು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಗೆ ಅವರ ಹೆಸರು ಮೂರು ನಾಲ್ಕು ಸಲ ಸೂಚಿಸಲ್ಪಟ್ಟರು ಅವರದು ಪ್ರತಿಸಲವು ಒಂದೇ ಮಾತು. 'ನನಗಿಂತ ಹೆಚ್ಚು ಅರ್ಹರಾದವರು, ಹಿರಿಯರು ಇದ್ದಾರೆ. ನನ್ನ ಸರದಿ ನಿಧಾನವಾಗಿ ಬರಲಿ' ಎಂದು ಸದಾ ಕೀರ್ತಿ ಅಧಿಕಾರಗಳಿಂದ ದೂರವಿದ್ದವರು. ಸದಾ ಆರ್ಥಿಕ ಸಂಕಷ್ಟಗಳಲ್ಲಿರುತ್ತಿದ್ದ ವೆಂಕಣ್ಣಯ್ಯನವರು ಶಾಮರಾಯರ ಮಾತಿನಂತೆ He used to have always overdraft in his account only to help others.ತಮ್ಮ ಸಂಬಳವನ್ನೆಲ್ಲ ತಮ್ಮಂದಿರ ಬಂಧುಬಳಗದವರ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದರು. ಸ್ವಂತ ಹಣವಿಲ್ಲದಿದ್ದರೆ ಸಾಲ ಮಾಡಿ ಸಹಾಯ ಮಾಡುತ್ತಿದ್ದರು.

ಹಾ.ಮಾ.ನಾಯಕರ ಅಭಿಪ್ರಾಯದಂತೆ 'ನಡೆನುಡಿಗಳಿಗೆ ಸಂಬಂಧವಿಲ್ಲದ ಈ ಕಾಲದಲ್ಲಿ ವೆಂಕಣ್ಣಯ್ಯನವರಂತ ಬದುಕು ಅಪರೂಪವಾದದ್ದು. ಅವರೊಬ್ಬ ಅಸಾಮಾನ್ಯ ಗುರುವಾಗಿದ್ದರೆಂದು ಅವರ ಶಿಷ್ಯರು ನೆನೆಪಿಸಿಕೊಳ್ಳುತ್ತಾರೆ.' ಸರ್ವಪಲ್ಲಿ ರಾಧಾಕೃಷ್ಣ ಅವರ ಸ್ಮರಣೆಯನ್ನು 'ಶಿಕ್ಷಕರ ದಿನಾಚರಣೆ' ಆಚರಿಸುತ್ತಿರುವ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಿರುವಂತೆ ವೆಂಕಣ್ಣಯ್ಯನವರಂತ ಅಸಾಮಾನ್ಯ ಗುರುಗಳನ್ನು ಚೇತನಸ್ವರೂಪಿ ವ್ಯಕ್ತಿತ್ವವನ್ನು ಸ್ಮರಿಸಿಕೊಳ್ಳುವುದು ಇಂದು ಅಗತ್ಯವಾಗಿದೆ. ■



ಶಿಕ್ಷಕರ ಸಾಧನೆ

# ನಾವೇನು ಕಮ್ಮಿ ಇಲ್ಲ ಸರಕಾರಿ ಶಾಲೆಗಳು



**ಸೆಪ್ಟೆಂಬರ್ 5, ಶಿಕ್ಷಕರ ದಿನಾಚರಣೆ. ಶಿಕ್ಷಕರಾಗಿದ್ದು ದೇಶದ ಅತ್ಯುನ್ನತ ರಾಷ್ಟ್ರಪತಿ ಪದವಿಗೇರಿದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನವಿದು. ಈ ಸಂದರ್ಭದಲ್ಲಿ ನಾಡು ಕಂಡ ಅತ್ಯುತ್ತಮ ಬೋಧಕರಾದ ಟಿ ಎಸ್ ವೆಂಕಣಯ್ಯ ಹಾಗೂ ಡಾ. ಎಚ್ ನರಸಿಂಹಯ್ಯ ಅವರ ನೆನಪಿನೊಂದಿಗೆ, ನಾಡಿನ ಅತ್ಯುತ್ತಮ ಸರ್ಕಾರಿ ಶಾಲೆಗಳು, ಶಿಕ್ಷಕರು ಹಾಗೂ ದಾನಿಗಳ ಕುರಿತು 'ಜನಪದ'ದ ಈ ಸಂಚಿಕೆ ಬೆಳಕು ಚೆಲ್ಲಿದೆ.**

■ ಪರಮೇಶ್ವರಯ್ಯ ಸೊಪ್ಪಿಮಠ

ಸರಕಾರಿ ಶಾಲೆಗಳೆಂದರೆ ಮೂಗು ಮುರಿಯುವವರೆ ಹೆಚ್ಚು. ಅದಕ್ಕೆ ಪ್ರಮುಖ ಕಾರಣ ಖಾಸಗಿ ಶಾಲೆಗಳ ಅಬ್ಬರ. ಕಣ್ಣು ಕುಕ್ಕುವಂತೆ ಮಾಡುವ ಪ್ರಚಾರ, ಟೈ-ಬೂಟ್- ಸಮವಸ್ತ್ರದ ಆಕರ್ಷಣೆ, ಕೆಲವೇ ಕೆಲ ಇಂಗ್ಲೀಷ್‌ನ ಗಿಳಿಪಾಠ, ಕಣ್ ಸೆಳೆವ ಶಾಲಾ ಕಟ್ಟಡಗಳಿಗೆ ಮರಳಾಗುವ ಪೋಷಕರು ಸರಕಾರಿ ಶಾಲೆಗಳನ್ನು ಕೀಳಾಗಿ ಕಾಣುತ್ತಾರೆ. ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಎಲ್ಲಾ ಖಾಸಗಿ ಶಾಲೆಗಳು ಸಕಲ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಅದಕ್ಕೆ ಪೂರಕವಾಗಿ ನಾಡಿನಾದ್ಯಂತ ಇರುವ ಸಾವಿರಾರು ಸರಕಾರಿ ಶಾಲೆಗಳಿಗೆ ಸೌಲಭ್ಯ ಒದಗಿಸುವುದು ಸುಲಭವಲ್ಲ. ಅದರಲ್ಲೂ ಎಲ್ಲ ಶಾಲೆಗಳಿಗೂ ಸರ್ವರೀತಿಯ ವ್ಯವಸ್ಥೆ ಕಲ್ಪಿಸುತ್ತಿರುವುದು ಶ್ಲಾಘನೀಯ ಹಾಗೂ ಸರಕಾರದ ಬಹು ದೊಡ್ಡ ಸಾಧನೆಯೇ ಸರಿ.

ನಾಡಿನೆಲ್ಲೆಡೆ ಇರುವ ಸರಕಾರಿ ಶಾಲೆಗಳು ಸಲ್ಲಿಸಿರುವ ಸೇವೆ, ಕೊಟ್ಟಿರುವ ಕೊಡುಗೆಗಳನ್ನು ಲೆಕ್ಕ ಹಾಕಲು ಸಾಧ್ಯವೇ ಇಲ್ಲ. ಕಡು ಬಡತನದಲ್ಲಿ ಸರಕಾರಿ ಶಾಲೆಯ ಮೆಟ್ಟಿಲುಗಳನ್ನತ್ತಿ, ಶಿಕ್ಷಕರ ಸ್ಫೂರ್ತಿಯಿಂದ ಓದಿ ಬದುಕನ್ನು ಅರಳಿಸಿಕೊಂಡ ಲಕ್ಷಾಂತರ ವಿದ್ಯಾರ್ಥಿಗಳು ಅಧಿಕಾರಿಗಳು, ಡಾಕ್ಟರ್, ರೈತರು, ಶಿಕ್ಷಕರು, ನಾಯಕರು ಆಗಿ ತಮ್ಮ ಶಾಲೆಗಳ ಬಗ್ಗೆ ಅಭಿಮಾನದಿಂದಲೆ ಹೆಮ್ಮೆ ಪಡುತ್ತಾರೆ.

ಖಾಸಗಿ ಶಾಲೆಗಳ ಪೈಪೋಟಿಯನ್ನು ಮೆಟ್ಟಿನಿಂತು ತಮ್ಮ ವಿಶಿಷ್ಟ ಛಾಪನ್ನು ಒತ್ತುತ್ತಿರುವ ಸರಕಾರಿ ಶಾಲೆಗಳ ಸಂಖ್ಯೆ ಇಂದಿಗೂ ಕಡಿಮೆ ಇಲ್ಲ. ಸರಕಾರ, ಶಿಕ್ಷಣ ಇಲಾಖೆ ಹಾಗೂ ಸಮುದಾಯದ ನೆರವನ್ನು ಪಡೆಯುತ್ತಾ ಸರಕಾರಿ ಶಾಲೆಗಳನ್ನು ಉನ್ನತಿಗೇರಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು. ಅಂತಹ

ಶಿಕ್ಷಕರಿಗೆಲ್ಲ ಈ ಸಾಲಿನ ಶಿಕ್ಷಕ ದಿನಾಚರಣೆಯ ಸಮಯದಲ್ಲಿ ಒಂದು ನಮನ..

**ಬದುಕು ಕಟ್ಟಿ ಕೊಡುತ್ತವೆ..**


ಶಿಕ್ಷಣವು ಮಗುವಿನಲ್ಲಿ ಸಾಂಸ್ಕೃತಿಕವಾಗಿ, ಭೌತಿಕವಾಗಿ, ಭಾವನಾತ್ಮಕವಾಗಿ ಅಡಗಿರುವ ಶಕ್ತಿಯನ್ನು ಅರಳಿಸಬೇಕು. ಈ ಕಾರ್ಯ ಅರ್ಥಪೂರ್ಣವಾಗಿ ನಡೆಯುತ್ತಿರುವುದು ಸರಕಾರಿ ಶಾಲೆಯಲ್ಲಿ ಎಂದರೆ ಅತಿಶಯೋಕ್ತಿಯೇನಲ್ಲ. ಸರಕಾರಿ ಶಾಲೆಯಲ್ಲಿ ರಾಷ್ಟ್ರೀಯತೆ, ನಾಡಪ್ರೇಮ, ಮಾತೃಭಾಷಾಭಿಮಾನಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿರುತ್ತದೆ. ಮಗುವು ಬದುಕಿಗೆ ಬೇಕಾದ ಎಲ್ಲ ಕಲೆಗಳನ್ನು ಅರಿತುಕೊಳ್ಳಲು ಹಾಗೂ ರೂಢಿಸಿಕೊಳ್ಳಲು ಪ್ರಶಸ್ತವಾದ ಸ್ಥಳ ಸರಕಾರಿ ಶಾಲೆ.

ಸರಕಾರವು ಶಿಕ್ಷಣ ಹಾಗೂ ಶಾಲೆಗಳಿಗಾಗಿ ನಾನಾ ಯೋಜನೆಗಳ ಮುಖಾಂತರ ಕೋಟ್ಯಾಂತರ ರೂಪಾಯಿಗಳ ಅನುದಾನವನ್ನು ನೀಡುತ್ತಿದೆ. ಬಹುತೇಕ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ ಎಂಬ ಮಾತು ಬರದಂತಾಗಿದೆ. ನಾನಾ ಸೌಕರ್ಯಗಳು ಸರಕಾರಿ ಶಾಲೆ ಮತ್ತು ಅಲ್ಲಿನ ಮಕ್ಕಳಿಗಾಗಿ ಹರಿದು ಬಂದಿವೆ. ಸರಕಾರದ ಈ ಎಲ್ಲ ಸೌಲಭ್ಯಗಳನ್ನು ಅರ್ಥಪೂರ್ಣವಾಗಿ ಬಳಸಿಕೊಂಡು, ಸಮುದಾಯದ ಸಹಕಾರದೊಂದಿಗೆ ಹಲವು ಸರಕಾರಿ ಶಾಲೆಗಳು ಮಾದರಿ ಎಂಬಂತೆ ಬೆಳೆದು ನಿಂತಿವೆ. ಅವುಗಳ ಬೆಳವಣಿಗೆಯಲ್ಲಿ ಶಿಕ್ಷಕರ ಕೊಡುಗೆ ಶ್ಲಾಘನೀಯ.

ಸರಕಾರದ ಈ ಶಾಲೆಗಳಲ್ಲಿ ಲಾಭದ ದೃಷ್ಟಿಕೋನವಿಲ್ಲ. ಅಲ್ಲಿ ಸೇವಾ ಮನೋಭಾವವೇ ಎದ್ದು ಕಾಣುತ್ತದೆ. ಸರ್ವರಿಗೂ ಸಮಪಾಲು–ಸಮಬಾಳು ಎಂಬಂತೆ ಸರಕಾರಿ ಶಾಲೆಯ ಸರ್ವ ಮಕ್ಕಳಿಗೂ ಸಕಲ ಸೌಲಭ್ಯಗಳನ್ನು ತಲುಪಿಸಲಾಗುತ್ತಿದೆ. ನಗರದ ಪ್ರತಿಷ್ಠಿತ ಶಾಲೆಗಳಂತೆ ಥಳಕು–ಬಳಕು ಸರಕಾರಿ ಶಾಲೆಗಳಲ್ಲಿರುವುದಿಲ್ಲ. ಹಾಗಾಗಿ ಪೋಷಕರು ಗಮನಿಸಬೇಕಾದುದು ಬಹು ದೊಡ್ಡ ಕಟ್ಟಡಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ ಎಂಬುದನ್ನು ಯಾವ ಶಿಕ್ಷಣತಜ್ಞರು ಅಥವಾ ಮನಶಾಸ್ತ್ರಜ್ಞರು ಇದುವರೆಗೂ ಪ್ರತಿಪಾದಿಸಿಲ್ಲ. ಒಳ ಹೊಕ್ಕು ನೋಡಿದಲ್ಲಿ ಮಗುವಿನ ಸರ್ವತೋಮುಖ ಬೆಳವಣಿಗೆ ಸರಕಾರಿ ಶಾಲೆ ಕೊಟ್ಟಷ್ಟು ಪ್ರಾತಿನಿಧ್ಯ ಬೇರೆಡೆ ಕಾಣ ಸಿಗುವುದಿಲ್ಲ.

ಶಿಕ್ಷಕರು ಮನಸ್ಸು ಮಾಡಿದರೆ ಎಂಥಹ ಕಗ್ಗಲ್ಲನ್ನಾದರೂ





ಸುಂದರ ಮೂರ್ತಿ ಮಾಡಬಹುದು ಎಂಬುದಕ್ಕೆ ನಮ್ಮ ನಡುವೆ ಇಂದು ಅನೇಕ ಶಾಲೆಗಳು ಅನುಕರಣೀಯವಾಗಿವೆ. ಬಡಮಕ್ಕಳ ವಿದ್ಯಾದೇಗುಲಗಳನ್ನು ಅರಸುತ್ತಾ ಹೋದರೆ ಅವು ಲೆಕ್ಕವಿಲ್ಲದಷ್ಟಿವೆ. ಹಾಗಾಗಿಯೇ ಖಾಸಗಿ ಶಾಲೆಗಳ ಅಬ್ಬರದ ನಡುವೆ ಸರಕಾರಿ ಶಾಲೆಗಳು ಜೀವಂತವಾಗಿರಲು ಸಾಧ್ಯವಾಗಿದೆ. ಅಂತಹ ಕೆಲವು ಶಾಲೆಗಳತ್ತ ನಮ್ಮ ಗಮನ ಹರಿಸುವುದಾದರೆ. .

**ಮಕ್ಕಳ ಮನೆ ನೂತನ ಪ್ರಯೋಗ**

ಹಾಸನ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ದಾಖಲೆಯ ಪ್ರಮಾಣದಲ್ಲಿ ಮಕ್ಕಳು ಸೇರ್ಪಡೆಯಾಗುತ್ತಿದ್ದಾರೆ. ಖಾಸಗಿ ಎಲ್.ಕೆ.ಜಿ., ಯು.ಕೆ.ಜಿ. ತರಗತಿಗಳಿಗೆ ಸ್ಪರ್ಧೆ ನೀಡುವಂತೆ ಸರ್ಕಾರದ ಎಲ್.ಕೆ.ಜಿ., ಯು.ಕೆ.ಜಿ., ಪ್ರಿ–ಸ್ಕೂಲ್ ಎಂದೇ ಬಿಂಬಿತವಾಗಿರುವ 'ಮಕ್ಕಳ ಮನೆ' ಹಳ್ಳಿ ಹಳ್ಳಿಗಳಲ್ಲಿ ಜಯಭೇರಿ ಬಾರಿಸಿದೆ. 55 ಕನ್ನಡ / ಇಂಗ್ಲಿಷ್ ಮಕ್ಕಳ ಮನೆಗಳ ಜೊತೆ 3 ಉರ್ದು ಮಕ್ಕಳ ಮನೆಗಳೂ ಆರಂಭಗೊಂಡಿರುವುದು ಇಲ್ಲಿನ ದಾಖಲೆ!

ಶಾಲಾ ಬಲವರ್ಧನೆ ಯೋಜನೆಯ ಅಡಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ, ಖಾಸಗಿ ಶಾಲೆಗಳ ಮಾದರಿಯಲ್ಲಿ ಎಲ್.ಕೆ.ಜಿ. / ಯು.ಕೆ.ಜಿ ತರಗತಿಗಳನ್ನು ನಡೆಸುವ ಸಲುವಾಗಿ ಸರ್ಕಾರಿ ಕಾನ್ವೆಂಟ್ "ಮಕ್ಕಳಮನೆ" ಯೋಜನೆ 2011–12 ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರಾರಂಭವಾಗಿದ್ದವು. ಅದರ ಪರಿಣಾಮ ಜೊತೆಗೆ ಸಾರ್ವಜನಿಕರ ಪ್ರೋತ್ಸಾಹ, ಉತ್ಸಾಹ ಹಳ್ಳಿ ಹಳ್ಳಿಗಳಲ್ಲಿ ಸರ್ಕಾರಿ ಕಾನ್ವೆಂಟ್ ಮಾದರಿಯ ಮಕ್ಕಳ ಮನೆ ತೆರೆಯುವತ್ತ ಸಾಗಿದೆ!

ಹಾಸನ ಜಿಲ್ಲೆಯ ಮಕ್ಕಳ ಮನೆಗಳ ಯಶಸ್ಸನ್ನು ಗಮನಿಸಿದಾಗ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಖಾತ್ರಿಪಡಿಸಿಕೊಳ್ಳಲಿಕ್ಕೆ, ಗುಣಾತ್ಮಕ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಮಕ್ಕಳೆಲ್ಲರಿಗೂ ಶಾಲಾ ವಾತಾವರಣಕ್ಕೆ ಕರೆತರಲಿಕ್ಕೆ ಈ ಮಕ್ಕಳ ಮನೆಗಳು ಸಾಧನವಾಗಿವೆ.






ಪ್ರತಿದಿನ ಬೆಳಗ್ಗೆ 9.15 ರಿಂದ ಸಂಜೆ 4.00 ರವರೆಗೆ ಸಾಮಾನ್ಯ ಶಾಲೆಯಂತೆಯೇ 40 ನಿಮಿಷಗಳ ಪೀರಿಯಡ್ಡುಗಳಲ್ಲಿ ನಡೆಯುವ ಮಕ್ಕಳ ಮನೆಯಲ್ಲಿ ಧ್ಯಾನ – ಯೋಗ, ಕನ್ನಡ ಭಾಷಾ ಚಟುವಟಿಕೆ, ಕಥೆ ಕೇಳುವ ಅಜ್ಜಿ ಮನೆ, ಗಣಿತ ಚಟುವಟಿಕೆ, ಒಳಾಂಗಣ ಆಟಗಳು, ಆಂಗ್ಲ ಭಾಷಾ ಚಟುವಟಿಕೆ, ಹಾಡು, ಹೊರಾಂಗಣ ಆಟಗಳು, ನೃತ್ಯ, ಚಿತ್ರಕಲೆ, ಕಂಪ್ಯೂಟರ್ ತರಬೇತಿ ಇತ್ಯಾದಿ ಚಟುವಟಿಕೆಗಳು ನಿಯಮಿತವಾಗಿ ನಡೆಯುತ್ತವೆ.

ಪ್ರತಿಯೊಂದು ಮಕ್ಕಳ ಮನೆಯಲ್ಲಿ ಕನಿಷ್ಠ 30 ರಿಂದ ಗರಿಷ್ಠ 80 ರವರೆಗೆ ಮಕ್ಕಳು ದಾಖಲಾಗಬಹುದು. ಮಕ್ಕಳಿಗೆ ಬೇಕಾದ ಕಲಿಕೆಯ ವಾತಾವರಣ ನಿರ್ಮಾಣಗೊಂಡಿದ್ದು ಪ್ರತಿ ಗ್ರಾಮ ಪಂಚಾಯತಿಯಲ್ಲಿಯೂ ಒಂದೊಂದು ಮಕ್ಕಳ ಮನೆ ಇರಬೇಕು ಅನ್ನಿಸುವಂತೆ ಮಾಡುವಲ್ಲಿ ಈ ಪ್ರಯೋಗ ಯಶಸ್ವಿಯಾಗಿದೆ.

ಮಕ್ಕಳ ಮನೆಯ ಮಕ್ಕಳಿಗೆ ಸಮವಸ್ತ್ರ, ಟೈ, ಶೂ, ಸಾಕ್ಸ್, ನೋಟ್ ಬುಕ್, ಪೆನ್ಸಿಲ್, ಕ್ರೇಯಾನ್ಸ್, ಪೇಯಿಂಟ್, ಡೆಸ್ಕ್, ಕುರ್ಚಿ, ಟೇಬಲ್, ಚಾಪೆ, ಜಮಖಾನ, ಆಟದ ಸಾಮಗ್ರಿಗಳು ಇತ್ಯಾದಿ ಮಕ್ಕಳ ಸ್ನೇಹಿ ವಸ್ತುಗಳೊಂದಿಗೆ ಶಿಕ್ಷಕರ ಗೌರವಧನ ಎಲ್ಲಾ ಮೊತ್ತವನ್ನು ಸಾರ್ವಜನಿಕರ ದೇಣಿಗೆಯಿಂದಲೇ ಭರಿಸಲಾಗುತ್ತಿದೆ. ಸರಕಾರ ಸ್ವಲ್ಪ ಅನುದಾನ ನೀಡುತ್ತದೆ.

ಕಾನ್ವೆಂಟ್ ಶಾಲೆಗಳಿಗೆ, ಇಂಗ್ಲಿಷ್ ಮೀಡಿಯಂ ಖಾಸಗೀ ಶಾಲೆಗಳಿಗೆ ಡೊನೇಷನ್, ಫೀಸ್, ಪುಸ್ತಕ ಎಂದು ಸಾವಿರಗಟ್ಟಲೇ ಸುರಿಯುವ ಬದಲು ಪೋಷಕರೇ 50 ರಿಂದ 100 ರೂಪಾಯಿಗಳಷ್ಟು ಶುಲ್ಕವೆಂದು ನೀಡಲು ಮುಂದೆ ಬಂದಿದ್ದು ಹಾಗೆ ಸಂಗ್ರಹಿಸಲಾದ ಮೊತ್ತಕ್ಕೆ ಉಳಿಕೆ ಮೊತ್ತವನ್ನು ಇತರೆ ಮೂಲಗಳಿಂದ ಭರಿಸಿ ಖರ್ಚು–ವೆಚ್ಚ ನಿಭಾಯಿಸಬಹುದಾಗಿದೆ. ಮುಂಬರುವ ದಿನಗಳಲ್ಲಿ ಇದಕ್ಕೊಂದು ನಿರ್ದಿಷ್ಟ ರೂಪ ದೊರೆತು, ರಾಜ್ಯದಾದ್ಯಂತ ಮಕ್ಕಳೆಲ್ಲಾ ಹಳ್ಳಿ ಕಾನ್ವೆಂಟ್ ಎಂಬ ಈ ಮಕ್ಕಳ ಮನೆಗಳಲ್ಲಿ ನಲಿಯುತ್ತಾ ಕಲಿಯುವ ದಿನ ದೂರವಿಲ್ಲ!

**ಅರ್ಜಿ ಸಲ್ಲಿಸಲು ಕ್ಯೂ**

ಬಳ್ಳಾರಿ ಜಿಲ್ಲೆಯ ಸಿರುಗುಪ್ಪದ ಹೊಸ ದೇವಲಾಪುರ ಸ.ಕಿ.ಪ್ರಾ.ಶಾಲೆಯ ಸಾಧನೆ ಸರಕಾರಿ ಶಾಲೆಗಳಿಗೂ ಅತ್ಯುತ್ತಮ ಭವಿಷ್ಯವಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ಶಾಲೆಯಲ್ಲಿ ವರ್ಷದಿಂದ ವರ್ಷಕ್ಕೆ ಪ್ರವೇಶ ಪಡೆಯಲು ಪೈಪೋಟಿಯುಂಟಾಗಿ ಸಿರಿವಂತರು ಅರ್ಜಿ ತುಂಬುತ್ತಿದ್ದಾರೆ.





ಗ್ರಾಮದ ಮಕ್ಕಳಲ್ಲದೇ ಅಕ್ಕ ಪಕ್ಕದ ಹಳ್ಳಿ ಮಕ್ಕಳು, ನೆರೆಯ ಆಂಧ್ರಪ್ರದೇಶದ ಮಕ್ಕಳು ಇಲ್ಲಿ ಪ್ರವೇಶ ಪಡೆದಿದ್ದಾರೆ ಎಂಬುದು ಈ ಶಾಲೆಯ ಪ್ರಭಾವಕ್ಕೆ ಸಾಕ್ಷಿ.

ಶಾಲೆಯ ಇತಿಹಾಸವೂ ವಿಭಿನ್ನವಾಗಿದೆ. ವಲಸೆ ಬರುವ ಕೃಷಿಕರ ಮಕ್ಕಳಿಗಾಗಿ 2002ರಲ್ಲಿ ಆಶ್ರಯ ಮನೆಯೊಂದರಲ್ಲಿ ಶಾಲೆ ಪ್ರಾರಂಭಿಸಲಾಯಿತು. ವಲಸೆ ಮಕ್ಕಳು ಮರಳಿದ ಮೇಲೆ ಶಾಲೆ ಮುಚ್ಚಬೇಕಾದಾಗ, ಊರಿನವರೆಲ್ಲರೂ ಸೇರಿ 15 ಸೆಂಟ್ಸ್ ಭೂಮಿಯನ್ನು ಶಾಲೆಗೆ ದಾನ ನೀಡಿದರು. ಗ್ರಾಮಸ್ಥರ ನೆರವು ಪಡೆಯುತ್ತಾ ಮುಂದೆ ಸಾಗಿದ ಶಿಕ್ಷಕರು ಇಟ್ಟ ದಿಟ್ಟ ಹೆಜ್ಜೆಗಳು ಒಂದೆರಡಲ್ಲ. ಕೇವಲ 25 ಮಕ್ಕಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಇಂದು 135 ಮಕ್ಕಳಿದ್ದಾರೆ.

ಸಮುದಾಯ ಸ್ಪಂದಿಸಿದಲ್ಲಿ ಎಂತಹ ಕ್ರಾಂತಿ ಮಾಡಬಹುದು ಎಂಬುದಕ್ಕೆ ಹೊಸ ದೇವಲಾಪುರ ಶಾಲೆ ಮಾದರಿಯಾಗಿದೆ. ನಾಲ್ಕು ಶಿಕ್ಷಕರಿಗೆ ಜೊತೆಯಾಗಿ ಒಬ್ಬ ಸ್ವಯಂಸೇವಕ, ಕೊಠಡಿ ನಿರ್ಮಾಣಕ್ಕೆ ಜಾಗ, ಮುಖ್ಯದ್ವಾರ, ಕಾಂಪೌಂಡ್, ಸರಸ್ವತಿ ವಿಗ್ರಹ, ಕೊಠಡಿಯೊಳಗಡೆ ಟೈಲ್ಸ್, ಶುದ್ಧ ನೀರು, ಕಂಪ್ಯೂಟರ್, ತಟ್ಟೆಗಳು, ಟೈ, ಬೆಲ್ಟ್, ಶೂ, ಬ್ಯಾಡ್ಜ್, ವಿಶೇಷ ಸಮವಸ್ತ್ರ, ಪಾಠೋಪಕರಣ–ಪೀಠೋಪಕರಣಗಳು, ಡೊಳ್ಳು ಮತ್ತಿತರ ಪರಿಕರಗಳನ್ನು ಗ್ರಾಮಸ್ಥರು ಶಾಲೆ ಮೇಲಿನ ಪ್ರೀತಿಯಿಂದ ಧಾರೆ ಎರೆದಿದ್ದಾರೆ. ಶಾಲಾ ವಾರ್ಷಿಕೋತ್ಸವದಲ್ಲಿ ಪೋಷಕರಿಗೂ ಕ್ರೀಡಾಸ್ಪರ್ಧೆಗಳು ನಡೆಯುತ್ತವೆ. ಶಾಲೆಯ ಏಳಿಗೆ ಕಂಡು ಸಂತಸಗೊಂಡ ಸಿರುಗುಪ್ಪ ವರದಾಂಜನೇಯ ಸ್ವಾಮಿ ಅರ್ಚಕರು ದೇವಸ್ಥಾನಕ್ಕೆ ಬರುವ ಎಲ್ಲ ತೆಂಗಿನ ಕಾಯಿಗಳನ್ನು ಬಿಸಿಊಟಕ್ಕೆ ನೀಡುತ್ತಿದ್ದಾರೆ. ಸವಿತಾ ಸಮಾಜದ ಅಧ್ಯಕ್ಷರು ಪ್ರತಿ ತಿಂಗಳು ಶಾಲೆಗೆ ಬಂದು ಮಕ್ಕಳಿಗೆ ಉಚಿತ ಕ್ಷೌರ ಮಾಡುತ್ತಿರುವುದು ಹೆಮ್ಮೆ ಪಡುವ ಅಂಶವಲ್ಲವೇ!.

ಮಕ್ಕಳಿಗೆ ಪಠ್ಯೇತರ ಕಡ್ಡಾಯ ಮಾಡಲಾಗಿದೆ. ಪರಿಸರ ಸ್ವಚ್ಛತೆ, ಗಿಡಗಳಿಗೆ ನೀರು ಹಾಕುವುದು. ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳು ತಪ್ಪದೇ ಪಾಲ್ಗೊಳ್ಳುತ್ತಾರೆ. ಅದರಿಂದ ಮಕ್ಕಳು ಒಂದು ದಿನವೂ ಶಾಲೆ ಬಿಡದೆ ಹಾಜರಾಗುತ್ತಿದ್ದಾರೆ. ಕಲಿಕೆಯಲ್ಲೂ ಈ ಶಾಲಾ ಮಕ್ಕಳು ಸದಾ ಮುಂದು. ಇತ್ತೀಚೆಗೆ ನಡೆದ ಮೊರಾರ್ಜಿ ಶಾಲೆಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 35 ಮಕ್ಕಳು ಈ ಶಾಲೆಯಿಂದ ಪರೀಕ್ಷೆ ಬರೆದು, ಅದರಲ್ಲಿ 21 ಮಕ್ಕಳು ಆಯ್ಕೆಯಾಗಿದ್ದಾರೆ. ಆ ಶಿಕ್ಷಕರ ಕಲಿಸುವಿಕೆಗೆ ನಮ್ಮದೊಂದು ಸಲಾಂ.

**ಕುಗ್ರಾಮದಲ್ಲೊಬ್ಬ ಆದರ್ಶ ಶಿಕ್ಷಕ**

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕುಗ್ರಾಮ ಗೋಣ್ಣಿಗನೂರು. ಅಲ್ಲಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 300 ಕ್ಕೂ ಹೆಚ್ಚಿನ ಮರಗಳು ಫಲ ಮತ್ತು ನೆರಳು ನೀಡಲು ಸಜ್ಜಾಗಿವೆ. ಇದಕ್ಕಿಂತ ಮುಖ್ಯವಾಗಿ ಇಡೀ ಗ್ರಾಮವೀಗ ಬಯಲು ಶೌಚಮುಕ್ತ, ಹೊಗೆ ರಹಿತ ಗ್ರಾಮ ಹಾಗೂ



ಸಂಪೂರ್ಣ ಸೋಲಾರ್ ಗ್ರಾಮವಾಗಿದೆ. ಇದೆಲ್ಲಾ ಆಗಿದ್ದು ಒಬ್ಬ ಶಿಕ್ಷಕನಿಂದ!

ಆರಂಭದಲ್ಲಿ ಶಾಲೆಯ ಸುತ್ತಮುತ್ತ ಇದ್ದ ಮೇವಿನ ಬಣವೆ, ತಿಪ್ಪೆಗಳನ್ನು ತೆರವುಗೊಳಿಸುವುದು ಸವಾಲಾಗಿತ್ತು. 2006ರಲ್ಲಿ ಶಾಲಾ ಆವರಣಕ್ಕೊಂದು ನಿಶ್ಚಿತ ಎಲ್ಲೆ ಹಾಗೂ ಭದ್ರತೆ ದೊರೆತ ಮೇಲೆ ಗಿಡಗಳನ್ನು ನೆಡಲು ಪ್ರಾರಂಭಿಸಿದರು. ಗ್ರಾಮಸ್ಥರ ಸಹಕಾರದಿಂದ 2008ರಲ್ಲಿ ಪೈಪ್‌ಲೈನ್ ವ್ಯವಸ್ಥೆ ಮಾಡಿದರು. ಮಕ್ಕಳಿಗೆ ಬಿಸಿಯೂಟಕ್ಕಾಗಿ ತಟ್ಟೆಲೋಟ ಸಂಗ್ರಹಿಸಿದರು. ಎಲ್ಲಾ ಮಕ್ಕಳಿಗೂ ಶಾಲಾ ಬ್ಯಾಗ್, ನೋಟ್ ಪುಸ್ತಕ, ಕಲರ್ ಪೆನ್ಸ್, ಟೈ–ಬೆಲ್ಟ್, ಕಂಪ್ಯೂಟರ್, ಟಿ.ವಿ, ಡೆಸ್ಕ್, ಪರೀಕ್ಷೆ ಬರೆಯಲು ಪ್ಯಾಡ್‌ಗಳನ್ನೂ ದಾನಿಗಳಿಂದ ಸಂಗ್ರಹಿಸಿದರು.

ಇಂದು ಇಡೀ ರಾಜ್ಯದಲ್ಲಿಯೇ ಅತ್ಯುತ್ತಮ ಮಾದರಿ ಗ್ರಾಮವಾಗಲು ಸಜ್ಜಾಗುತ್ತಿದೆ. ಪ್ರಸ್ತುತ ಗ್ರಾಮದಲ್ಲಿ 92 ಮನೆಗಳಿದ್ದು, ಬಯಲು ಶೌಚಮುಕ್ತ ಗ್ರಾಮವಾಗಿ ಘೋಷಣೆಯಾಗಿದೆ. ಈ ಘೋಷಣೆ ಕೇವಲ ದಾಖಲೆಯಲ್ಲಿ ಅಲ್ಲ. ಪ್ರತಿ ಕುಟುಂಬಗಳು ಶೌಚಾಲಯ ಬಳಸುತ್ತಿದ್ದಾರೆ. ಅಂತೆಯೇ ಸಿಂಧನೂರಿನ ಸೆಲ್ಕೋ ಸೋಲಾರ್ ನೆರವಿನೊಂದಿಗೆ ಪ್ರತೀ ಮನೆಗೂ ಸೋಲಾರ್ ವಿದ್ಯುತ್ ವ್ಯವಸ್ಥೆ ಪೂರ್ಣಗೊಂಡಿದೆ. ಅಲ್ಲದೇ ಸಿಂಧನೂರಿನ ಶ್ರೀಸಿದ್ದಲಿಂಗೇಶ್ವರ ಗ್ಯಾಸ್ ಏಜೆನ್ಸೀಸ್ ಇವರ ಸಹಕಾರದಿಂದ ಇಡೀ ಗ್ರಾಮ ಹೊಗೆ ಮುಕ್ತ ಗ್ರಾಮವಾಗಿದೆ. ಇದೆಲ್ಲಾ ಸಾಧ್ಯವಾಗಿದ್ದು ಕೊಟ್ರೇಶ್ ಹಿರೇಮಠ ಶಿಕ್ಷಕರಿಂದ ಎಂಬುದು ಗ್ರಾಮಸ್ಥರ ಅಭಿಮತ.

ಕೊಟ್ರೇಶ್ ಅವರು ಕೇವಲ ಸಾಮಾನ್ಯ ಶಿಕ್ಷಕರಲ್ಲ. ಅವರೊಬ್ಬ ಪಬ್ಲಿಕ್ ಹೀರೋ ಆಗಿ ರೂಪುಗೊಂಡಿದ್ದಾರೆ. ಬಡ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಉದಾರ ಸಹಾಯ ಮಾಡಿದ್ದಾರೆ. ಎಂ.ಎ, ಬಿ.ಇಡಿ ಪದವಿ ಪಡೆದ ಅವರು ಈಗಲೂ ಗ್ರಾಮದ ಉನ್ನತ ವ್ಯಾಸಂಗದಲ್ಲಿ ತೊಡಗಿದ ಮಕ್ಕಳಿಗೆ ಉಚಿತ ಮನೆಪಾಠ ಮಾಡುವ ಮೂಲಕ ಅವರ ಭವಿಷ್ಯದ ಶಿಕ್ಷಣಕ್ಕೆ ಮಾರ್ಗದರ್ಶಿಯಾಗಿದ್ದಾರೆ. ಗುಡಿಸಲು ಮುಕ್ತ ಗ್ರಾಮವನ್ನಾಗಿಸುವ ಭವಿಷ್ಯದ ಯೋಜನೆ ಕೊಟ್ರೇಶ್ ಹಿರೇಮಠ ಅವರದು. ಅದರಲ್ಲೂ ಅವರು ಯಶಸ್ವಿಯಾಗಲಿ.

**ತಂತ್ರಜ್ಞಾನದ ಕೊಡಚಿ ಶಾಲೆ**

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯ ಕೊಡಚಿ ಚಿಕ್ಕ ಗ್ರಾಮ. ಆ ಊರಿಗೆ ಬಸ್ ಸೌಕರ್ಯವೇ ಇರಲಿಲ್ಲ. ಆರೋಗ್ಯ ಹದಗೆಟ್ಟರೆ ದೇವರೇ ಗತಿ. ಸಂಕಷ್ಟಗಳ ನಡುವೆ ಅಲ್ಲಿನ ಸ.ಹಿ.ಪ್ರಾ.ಶಾಲೆ ತನ್ನ ಕಾರ್ಯಕ್ರಮಗಳಿಂದ ವಿಶ್ವದೆಲ್ಲೆಡೆ ಪರಿಚಯವಾಗಿದೆ. ಶಾಲೆಗೆ ಬರುವ ಮಕ್ಕಳನ್ನು ಸ್ವಚ್ಛಗೊಳಿಸುವುದು ಮೊದಲಿನ ಸಮಸ್ಯೆಯಾಗಿತ್ತು. ಆನಂತರ ಶಿಕ್ಷಕರು ಕಲಿಕೆಯತ್ತ ಸಾಗಿದರು. 'ಓದುವೆ ನಾನು' ಯೋಜನೆಯಿಂದ ಸಾಕಷ್ಟು ಬದಲಾವಣೆ ಪ್ರಾರಂಭವಾಯಿತು. ಕಲಿಕೆ ನಿಧಾನವಾಗಿ ಏರಿಕೆ ಕಂಡಿತು.

ಹೊರ ಜಗತ್ತಿನ ಪರಿಚಯವೇ ಇಲ್ಲದ ಆ ಗ್ರಾಮಕ್ಕೆ ಶಿಕ್ಷಕರು ಕಂಪ್ಯೂಟರ್ ತಂದರು. ಅದಕ್ಕೆ ಅಂತರ್ಜಾಲದ ಮುಖಾಂತರ ಹೊಸ ಜಗತ್ತನ್ನು ತೆರೆದಿಟ್ಟರು. ಹೊಸ ವಿಧಾನಗಳ ಬಳಕೆಯಿಂದ ಮಕ್ಕಳು ಉತ್ಸಾಹದಿಂದ ಶಾಲೆಯತ್ತ ಹೆಜ್ಜೆ ಹಾಕಿದರು. ಹೆಣ್ಣುಮಕ್ಕಳ ಶಿಕ್ಷಣ, ಮೀನಾ ಮುಂತಾದ ಕಾರ್ಯಕ್ರಮಗಳಿಂದ ಬಾಲಕಿಯರೂ ಶಾಲೆಯತ್ತ ಮುಖ ಮಾಡಿದರು. ಜನವರಿ 8, 2011ರಂದು ಶಾಲೆಯ ಶಿಕ್ಷಕ ಸಚಿನ್ 'ನಮ್ಮ ಕೊಡಚಿ ಶಾಲೆ' ಎಂಬ ಬ್ಲಾಗನ್ನು ಆರಂಭಿಸಿದರು. ಅದರಲ್ಲಿ ತಮ್ಮ ಶಾಲೆಯ ಎಲ್ಲ ವಿವರಣೆ, ಕಾರ್ಯಕ್ರಮಗಳನ್ನು ಹಾಕುತ್ತಾ ವಿಶ್ವಕ್ಕೆ ಪರಿಚಿತರಾಗುತ್ತಿರುವುದು ಹೆಮ್ಮೆ ಪಡುವ ವಿಚಾರವಲ್ಲದೇ ಮತ್ತೇನು?

**ಸಮಾಜಮುಖಿ ಶಿಕ್ಷಕ**

ಬರಿ ಕಲ್ಲುಗಳಿಂದ ತುಂಬಿದ ಬೀದರ್ ಜಿಲ್ಲೆಯ ಯನಗುಂದಾ ಶಾಲಾ ಆವರಣವು ಇಂದು ಒಂದು ಚಿಕ್ಕ ಕಲ್ಲು ಸಿಗದಂತೆ ಆಗಿದೆ. ಐವತ್ತಕ್ಕೂ ಅಧಿಕ ಗಿಡಮರಗಳು ಬೆಳೆದು ನಿಂತಿವೆ. ಮಕ್ಕಳಿಗೆ ಸದಾ ಸ್ಫೂರ್ತಿಯ ನುಡಿಗಳು ಹೇಳುವ ಈ ಶಾಲಾ ಮಕ್ಕಳು ಕ್ರೀಡಾ ಮತ್ತು ಶೈಕ್ಷಣಿಕ ಪ್ರಗತಿಯಲ್ಲಿ ಜಿಲ್ಲಾ ಹಂತದಲ್ಲಿ ಉತ್ತಮ ಸಾಧನೆ ಮಾಡಿದ್ದರೆ, ಪ್ರತಿಭಾ ಕಾರಂಜಿಯಲ್ಲಿ ರಾಜ್ಯ ಮಟ್ಟದವರೆಗೂ ಹೋಗಿರುತ್ತಾರೆ. ಮತ್ತು ಎಸ್.ಎಸ್.ಎಲ್.ಸಿ ಫಲಿತಾಂಶ ಶಾಲೆಯ 100% ಫಲಿತಾಂಶದಲ್ಲಿ ವಿಶೇಷ ಕೊಡುಗೆ ನೀಡುವಲ್ಲಿ ಮಲ್ಲಿಕಾರ್ಜುನ ಟಂಕಸಾಲೆ ಶಿಕ್ಷಕರ ಕೊಡುಗೆ ಅಪಾರ. ಸ್ಕೌಟ್ಸ್ ಗೈಡ್ಸ್ ಘಟಕವನ್ನು ಪ್ರಾರಂಭಿಸಿ ಉತ್ತಮ ಸ್ಕೌಟ್ಸ್ ಮಾಸ್ಟರ್ ಎಂಬ ಪ್ರಖ್ಯಾತಿ ಪಡೆದುಕೊಂಡಿದ್ದಾರೆ. ಇಷ್ಟೇ ಆಗಿದ್ದರೆ ವಿಶೇಷತೆ ಇರುತ್ತಿರಲಿಲ್ಲ.

'ಮರಳಿ ಗ್ರಾಮಕ್ಕೆ' ಕಾರ್ಯಕ್ರಮದ ಮುಖಾಂತರ ಹುಟ್ಟೂರಿನ ಋಣ ತೀರಿಸಲು ಸರಕಾರಿ ಸೇವೆಯಲ್ಲಿರುವ ನೌಕರರು ವರ್ಷಕ್ಕೆ ಒಮ್ಮೆಯಾದರು ಗ್ರಾಮಕ್ಕೆ ಬಂದು ಶೈಕ್ಷಣಿಕ ಅಭಿವೃದ್ಧಿಗೆ ಕೈಜೋಡಿಸಲು ಪ್ರತಿವರ್ಷ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪ್ರತಿಭಾವಂತ ಮಕ್ಕಳಿಗೆ "ಪ್ರತಿಭಾ ಪುರಸ್ಕಾರ" ಮತ್ತು ಗ್ರಾಮದಲ್ಲಿ ಸೇವೆ ಸಲ್ಲಿಸುವ ಶಿಕ್ಷಕರಿಗೆ "ಗುರು ವಂದನಾ" ಕಾರ್ಯಕ್ರಮಗಳನ್ನು ಪ್ರತಿವರ್ಷ ಹಮ್ಮಿಕೊಳ್ಳುತ್ತಿದ್ದಾರೆ.

ಟಂಕಸಾಲೆ ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ತಾಲೂಕು ಅಧ್ಯಕ್ಷರಾಗಿ ಮಕ್ಕಳ ಸಾಹಿತ್ಯ ಸಂಜೀವಿನಿ, ಮಕ್ಕಳ ಕವಿಗೋಷ್ಠಿ, ಸಾಧಕ ಸರಕಾರಿ ನೌಕರರಿಗೆ ಸನ್ಮಾನ, ಸಾಧಕ ಶಿಕ್ಷಕರಿಗೆ ಸನ್ಮಾನ, ಇಲಾಖೆಗಳ ನಡುವೆ ಬಾಂಧವ್ಯ ಬೆಸೆಯಲು ಸರಕಾರಿ ನೌಕರರಲ್ಲಿ "ಜ್ಯೋತಿಬಾ ಫುಲೆ ಟ್ರೋಫಿ" ಶಿಕ್ಷಕ



ದಂಪತಿಗಳಿಗಾಗಿ "ಬಾಂಧವ್ಯ ಬೆಸುಗೆ", ವನಭೋಜನ. ಮತ್ತು ಶಿಕ್ಷಕರ ದಿನಾಚಾರಣೆಯ ನಿಮಿತ್ಯ 10 ಜನ ಉತ್ತಮ ಶಿಕ್ಷಕರಿಗೆ ಜ್ಯೋತಿ ಬಾ ಪುಲೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡುತ್ತಾ ಶಿಕ್ಷಕರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಮಲ್ಲಿಕಾರ್ಜುನ ಅವರು ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಕಥೆ, ಕವನ, ಲೇಖನಗಳನ್ನು ಬರೆಯುತ್ತಿದ್ದಾರೆ. ಈಗಾಗಲೇ ಭ್ರಷ್ಟಾಚಾರ ವಿರೋಧಿ ಶರಣರು ಮತ್ತು ದೈಹಿಕ ಶಿಕ್ಷಣ ದಿಕ್ಸೂಚಿ ಮತ್ತು 14 ಕ್ರೀಡೆಗಳ ಚಾರ್ಟ್ ಪ್ರಕಟಿಸಿ ರಾಜ್ಯದ ದೈಹಿಕ ಶಿಕ್ಷಣ ಶಿಕ್ಷಕರ ಪ್ರೀತಿಗೆ ಪಾತ್ರರಾಗಿದ್ದಾರೆ. ನಾಡಿನಾದ್ಯಂತ ಹಾಸ್ಯ, ಮಿಮಿಕ್ರಿ, ಜಾದೂ ಕಾರ್ಯಕ್ರಮದ ಮೂಲಕ ಜನಸಾಮಾನ್ಯರನ್ನು ಮನೋರಂಜಿಸುತ್ತಿದ್ದಾರೆ. ಜನಸಾಮಾನ್ಯರಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಪ್ರಜ್ಞೆ ಬೆಳೆಸುವುದಕ್ಕಾಗಿ, ಭಾರತ ಜ್ಞಾನ ವಿಜ್ಞಾನ ಸಮಿತಿಯ ತಾಲೂಕ ಅಧ್ಯಕ್ಷರಾಗಿ ಪವಾಡ ಬಯಲು ಮತ್ತು ವೈಜ್ಞಾನಿಕ ಜಾಗೃತಿ ಕಾರ್ಯಕ್ರಮದ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

ಶಿಕ್ಷಣ ಇಲಾಖೆಯ ರಾಜ್ಯ ಸಂಪನ್ಮೂಲ ಶಿಕ್ಷಕರಾಗಿ, ಹಲವಾರು ತರಬೇತಿಯಲ್ಲಿ ಸೇವೆ ಸಲ್ಲಿಸಿರುವುದು ಮತ್ತು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬುವುದಕ್ಕಾಗಿ ಪ್ರೇರಣ ಎಂಬ ಕಿರುಚಿತ್ರ ಸಂಯೋಜನೆ ಗೊಳಿಸಿದ್ದಾರೆ. ವಸತಿ ಶಾಲೆಗೊಂದು "ಚಿಗುರು ಚೈತನ್ಯ" ಕಾರ್ಯಕ್ರಮ ಗ್ರಾಮೀಣ ಭಾಗದ ಮಕ್ಕಳಿಗಾಗಿ "ವ್ಯಕ್ತಿತ್ವ ವಿಕಸನ" ಶಿಬಿರ, ಸಂಘಟನೆ ಎಸ್.ಎಸ್.ಎಲ್.ಸಿ ಅನುತ್ತೀರ್ಣ ಮಕ್ಕಳಿಗಾಗಿ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, ಹೀಗೆ ಹಲವಾರು ಕಾರ್ಯಕ್ರಮಗಳು ಉಚಿತವಾಗಿ ಸಂಘಟಿಸುತ್ತಾ ಇಲಾಖೆಯ ಗೌರವವನ್ನು ಹೆಚ್ಚಿಸಿದ್ದಾರೆ.

**ಪರಿಸರ ಮಿತ್ರ ಶಾಲೆ:–**

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕನ್ನನಾಯಕನ ಕಟ್ಟೆಯ ಹಳ್ಳಿಯಲ್ಲಿರುವ ಸ.ಹಿ.ಪ್ರಾ.ಶಾಲೆ ಗ್ರಾಮದ ಹೆಸರನ್ನು ದಶ ದಿಕ್ಕುಗಳಿಗೂ ಪಸರಿಸುತ್ತಿದೆ. ಶಿಕ್ಷಕರು ಮನಸ್ಸು ಮಾಡಿದರೆ ಏನು ಬೇಕಾದರು ಸಾಧಿಸಬಹುದು ಎಂಬುದನ್ನು ಈ ಶಾಲೆಯ ಶಿಕ್ಷಕರ ಪಡೆ ನಿರೂಪಿಸಿದೆ. ಗ್ರಾಮಸ್ಥರ ಬೆಂಬಲ ಪಡೆಯುತ್ತಾ ಮುಂದೆ ಸಾಗಿದಂತೆ ಒಂದೊಂದೆ ಗರಿಗಳು ಈ ಶಾಲೆಯ ಮುಡಿಗೇರಿದವು. ಇಂದು ರಾಜ್ಯದಲ್ಲಿಯೇ ಉತ್ತಮ ಪರಿಸರ ಮಿತ್ರ ಶಾಲೆ ಎಂಬ ಪ್ರಶಸ್ತಿಗೆ ಇದು ಭಾಜನವಾಗಿದೆ.

ಖಾಸಗಿ ಶಾಲೆಯನ್ನು ಮೀರಿಸುವಂತ ಅತ್ಯುತ್ತಮ ಸೌಲಭ್ಯ ಹಾಗೂ ಬೋಧನಾ ವ್ಯವಸ್ಥೆ. ಸರಕಾರದ ಸಮವಸ್ತ್ರದ ಜೊತೆಗೆ ಮತ್ತೊಂದು ಸಮವಸ್ತ್ರವನ್ನು ಶಾಲೆಯಲ್ಲಿ ಜಾರಿ ತರಲಾಗಿದೆ. ಅದಕ್ಕೆ ಸ್ಪಂದಿಸಿರುವ ಪೋಷಕರು ಟೈ–ಬೆಲ್ಟ್‌ಗಳನ್ನು ಕೊಡಿಸಿದ್ದಾರೆ. ವಿದ್ಯಾರ್ಥಿಗಳ ಪಠ್ಯೇತರ ಕಲಿಕೆಗೆ ಶಿಕ್ಷಕರ ಒತ್ತು ಮೆಚ್ಚಬೇಕಾದದ್ದೇ. ಕ್ರೀಡಾಕೂಟ, ಪ್ರತಿಭಾ ಕಾರಂಜಿ, ಸೇವಾದಳ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಈ ಶಾಲಾ ಮಕ್ಕಳು ಸದಾ ಮುಂದಿದ್ದಾರೆ.

ಶಾಲಾ ಕಾಂಪೌಂಡ್, ಶೌಚಾಲಯ ಮುಂತಾದ ವ್ಯವಸ್ಥೆಯನ್ನು ಲಕ್ಷಾಂತರ ರೂಪಾಯಿಗಳ ಸೌಲಭ್ಯ ಪಡೆದು ಸುಂದರಗೊಳಿಸಿಕೊಂಡಿದ್ದಾರೆ. ಶಾಲಾ ಮೈದಾನ, ಮಕ್ಕಳಲ್ಲಿನ ಶಿಸ್ತು ನೋಡಿದರೆ ಯಾರಿಗಾದರೂ ಇದು ಸರಕಾರಿ ಶಾಲೆಯೇ ಎಂದು ಆಶ್ಚರ್ಯ ಪಡುವಂತಿದೆ. ಅತ್ಯುತ್ತಮವಾದ ಶೌಚಾಲಯಗಳು, ಹೊರಾಂಗಣದಲ್ಲಿ ಮಕ್ಕಳು ಓದಲು ಆಸನದ ವ್ಯವಸ್ಥೆ, ಕಸ ಕಡ್ಡಿ ಇತ್ಯಾದಿಗಳಿಂದ ಗೊಬ್ಬರ ತಯಾರಿಕೆ, ಸುಸಜ್ಜಿತವಾದ ಭೋಜನಾಲಯ, ಸರಸ್ವತಿ ದೇವಾಲಯ, ಮಾದರಿಯಾದ ಅಡುಗೆ ಕೋಣೆ, ಉತ್ತಮ ನೀರಿನ ವ್ಯವಸ್ಥೆ ಇವೆಲ್ಲಕ್ಕಿಂತ ಸುಂದರವಾದ ಶಾಲೆಯ  ಹಸಿರಿನ ವಾತಾವರಣ. ಹಣ್ಣು ಹೂವಿನ ಗಿಡಗಳಿಂದ ತುಂಬಿ ತುಳುಕುತ್ತಿದೆ.

ನೂತನ ನಲಿ–ಕಲಿ ವಿಧಾನಕ್ಕೆ ತಕ್ಕಂತೆ ಸುಸಜ್ಜಿತವಾಗಿ ರೂಪಗೊಂಡಿರುವ ಕೊಠಡಿಗಳು, ಚಿಕ್ಕದಾದರೂ ಚೊಕ್ಕವಾಗಿರುವ ಪ್ರಯೋಗಾಲಯ, ಮಕ್ಕಳ ಜ್ಞಾನವನ್ನು ವಿಸ್ತರಿಸುವ ಓದುವ ಮೂಲೆ ಮತ್ತು ಗ್ರಂಥಾಲಯ, ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸಲು ವಿವಿಧ ಕ್ಲಬ್‌ಗಳ ರಚನೆ, ಆಕರ್ಷಣೀಯವಾದ ಶಾಲಾ ಕೊಠಡಿಗಳು, ಸ್ವಾಗತ ಕೋರುವ ಶಾಲಾ ಹೆಬ್ಬಾಗಿಲು, ಕನ್ನಡಿಯಂತೆ ಹೊಳೆವ ಶಾಲಾ ದಾಖಲೆಗಳು, ಈ ದಾಖಲೆಗಳ ನಿರ್ವಹಣೆಗೆ ರಜಾ ಅವಧಿಯನ್ನು ಬಳಸುವ ಶಿಕ್ಷಕರು. . . .ಹೀಗೆ ಶಾಲೆಯ ವೈಶಿಷ್ಟ್ಯತೆಯನ್ನು ಪಟ್ಟಿ ಮಾಡುತ್ತಲೇ ಹೋಗಬಹುದು. ಈ ಶಾಲೆಯನ್ನು ನೋಡುವುದೇ ಒಂದು ಪುಣ್ಯ ಎಂಬಂತೆ ಶಿಕ್ಷಕರು ರೂಪಿಸಿದ್ದಾರೆ.

**ಮುಗಿಸುವ ಮುನ್ನ..**

ಒಬ್ಬ ತಂದೆ 100 ಜನ ಶಿಕ್ಷಕರಿಗೆ ಸಮಾನ. ಒಬ್ಬ ತಾಯಿ 1000 ಜನ ಶಿಕ್ಷಕರಿಗೆ ಸಮಾನ. ಹಾಗಾಗಿ ಒಬ್ಬ ಶಿಕ್ಷಕ ತಂದೆ, ತಾಯಿ, ಗುರುವಾಗಿ ಅಂದರೆ 1101 (100+1000+1) ಶಿಕ್ಷಕರಿಗೆ ಸಮನಾಗಿ ಕಾಯಕದಲ್ಲಿ ತೊಡಗಿಕೊಳ್ಳಬೇಕು. ಈ ಉದ್ಯೋಗಕ್ಕೆ ಲಾಭದ ದೃಷ್ಟಿಯಿಂದ ಸೇರದೇ ಕೇವಲ ಪ್ರೀತಿಯಿಂದ ಸೇರಿರುವ ಜೊತೆಗೆ ಮುಖ್ಯವಾಗಿ ತಾನೊಬ್ಬ ಜೀವಂತ ಶಿಲ್ಪವನ್ನು ನಿರ್ಮಿಸುತ್ತಿರುವ ಅಪರೂಪದ ರೂವಾರಿ ಎಂಬುದನ್ನು ಸದಾ ನೆನೆಸಿಕೊಳ್ಳುತ್ತಾ, ಆ ನಿಟ್ಟಿನಲ್ಲಿ ಸಾಗುವಂತ ಅನೇಕ ಸರಕಾರಿ ಶಾಲೆಯ ಶಿಕ್ಷಕರು ನಮ್ಮ ನಡುವೆ ಅನೇಕರಿದ್ದಾರೆ. ಅಂತಹ ಎಲ್ಲ ಶಿಕ್ಷಕರು ನಿಜವಾಗಿ ರಾಧಾಕೃಷ್ಣನ್ ಅವರಿಗೆ ಬಹುದೊಡ್ಡ ಉಡುಗೊರೆ ಕೊಡುತ್ತಿದ್ದಾರೆ. ಅಂತಹ ಎಲ್ಲ ಗುರುಗಳೆ ನಿಮಗಿದೋ ಕೋಟಿ ಕೋಟಿ ನಮನಗಳು.ದೇಶದ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿಗೆ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಸಂಬಂಧದ ಮಸೂದೆ ಸಂಸತ್ತಿನಲ್ಲಿ ಅನೇಕ ದಶಕಗಳಿಂದ ಯಾವುದೇ ನಿರ್ಧಾರಕ್ಕೆ ಬರದೆ ನೆನೆಗುದಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ ಶೇ 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ನಿಗದಿಪಡಿಸಿರುವುದು ಅತ್ಯಂತ ಕ್ರಾಂತಿಕಾರಕ ಹೆಜ್ಜೆಯಾಗಿದೆ. ಇದು ದೇಶಕ್ಕೆ ಮಾದರಿಯಾಗಿದೆ. ತಮಗೆ ನೀಡಲಾಗಿರುವ ರಾಜಕೀಯ ಪ್ರಾತಿನಿಧ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರಲ್ಲಿ ಮಹಿಳೆಯರು ಸದ್ಯಕ್ಕೆ ಸಫಲರಾಗದಿದ್ದರೂ ಈ ಅವಕಾಶ ಅವರ ಸಬಲೀಕರಣದಲ್ಲಿ ಮಹತ್ವದ್ದಾಗಿದೆ ಎಂಬುದನ್ನು ಮರೆಯಬಾರದು. ಆಧುನಿಕ ಸಮಾಜದಲ್ಲಿ ಪುರುಷರಿಗೆ ಯಾವ ದೃಷ್ಟಿಯಿಂದಲೂ ತಾವು ಕಡಿಮೆಯಲ್ಲ ಎಂಬುದನ್ನು ಮಹಿಳೆಯರು ತೋರಿಸುತ್ತಿದ್ದಾರೆ. ಅದರಂತೆಯೇ ಸ್ಥಳೀಯ ಸಂಸ್ಥೆಗಳಲ್ಲಿನ ರಾಜಕೀಯ ಪ್ರಾತಿನಿಧ್ಯವನ್ನೂ ಅವರು ಯಶಸ್ವಿಯಾಗಿ ಬಳಸಿಕೊಳ್ಳುವ ದಿನಗಳು ದೂರವಿಲ್ಲ ಎಂಬ ಆಶಾಭಾವನೆ ಇಟ್ಟುಕೊಳ್ಳಬಹುದಾಗಿದೆ.



# ಡಾ.ಎಚ್.ನರಸಿಂಹಯ್ಯ

## ನಾಡು ಕಂಡ ಅತ್ಯುತ್ತಮ ಶಿಕ್ಷಣ ತಜ್ಞ

▪ ಕೆ.ಎಸ್.ಸೋಮೇಶ್ವರ

**ಸೆ**ಪ್ಟೆಂಬರ್ ಐದರಂದು ಮುಂದಿನ ಪೀಳಿಗೆಗೆ ಜ್ಞಾನ ದೀಕ್ಷೆಯನ್ನು ನೀಡುವ  ಎಲ್ಲ ಗುರುವೃಂದವನ್ನು ನೆನಪು ಮಾಡಿಕೊಳ್ಳುವಂತಹ ದಿನ. ಅಂದರೆ ಶಿಕ್ಷಕರ ದಿನಾಚರಣೆ. ಇದನ್ನು ವಿವಿಧ ದೇಶಗಳಲ್ಲಿ ಬೇರೆ ಬೇರೆ ದಿನಗಳಂದು ಆಚರಿಸುತ್ತಾರೆ. ಇದರಿಂದ ತಿಳಿಯುವ ವಿಚಾರವೆಂದರೆ ಗುರುವೆಂದರೆ ವಿಶ್ವದಾದ್ಯಂತ ಸರ್ವ ಕಾಲಕ್ಕೂ ಗೌರವಿಸಲ್ಪಡುವ ಪ್ರತ್ಯಕ್ಷ ದೇವರು.  ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಈ ದೇಶ ಕಂಡಂತಹ ವಿಶ್ವಮಾನ್ಯ ಶಿಕ್ಷಕ, ದಾರ್ಶನಿಕ ಮತ್ತು ನಮ್ಮ ಸಂವಿಧಾನದ ಉತ್ತುಂಗ ಹುದ್ದೆಗಳಾಗಿರುವ  ಉಪ ರಾಷ್ಟ್ರಪತಿ ಮತ್ತು ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದಂತಹ ಮೇಧಾವಿ. ಇವರ ಹುಟ್ಟು ಹಬ್ಬವನ್ನು ನಾವು ಶಿಕ್ಷಕರನ್ನು  ಗೌರವಿಸುವಂತಹ ದಿನವನ್ನಾಗಿ ಆಚರಿಸುತ್ತೇವೆ.

ಯಾವುದೇ ಕಾಲವಾಗಲಿ ಗುರುವಿನ ಸ್ಥಾನಕ್ಕೆ ಮಿಗಿಲಾದುದು ಬೇರಿಲ್ಲ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ದಾಸವಾಣಿ ಎಲ್ಲ ಕಾಲಕ್ಕೂ ಸೂಕ್ತ. ಅಂದಿನಿಂದ ಇಂದಿನವರೆಗೂ,  ಮುಂದೂ ಸಹ ಮಕ್ಕಳನ್ನು ಸರ್ವತೋಮುಖವಾಗಿ,  ಸಮಾಜಮುಖಿಯಾಗಿ ಬೆಳೆಸಿ ಸತ್ಪ್ರಜೆಗಳನ್ನಾಗಿ ಮಾಡುವಲ್ಲಿ ಇವರ ಪಾತ್ರ ಹಿರಿದು. ಈ ಎಲ್ಲ ಶಿಕ್ಷಕ ವೃಂದದಲ್ಲಿ ಯಾರೊಬ್ಬರೂ ಹಿರಿದು ಅಥವ ಕಿರಿದು ಎಂದು ಹೇಳುವಂತಿಲ್ಲ. ಅವರಲ್ಲೂ ಕೆಲವರು ಮುಕುಟಪ್ರಾಯರಾಗಿರುತ್ತಾರೆ. ಅನೇಕರು ಎಲೆ ಮರೆಯ ಕಾಯಿಯಂತಿರುತ್ತಾ ಸಮಾಜದ ಏಳಿಗೆಯಲ್ಲಿ ಭಾಗವಹಿಸಿರುತ್ತಾರೆ. ಇಂತಹ ವಿಶಿಷ್ಟ ಶಿಕ್ಷಕ ವೃಂದವನ್ನು ಹೇಳುತ್ತಾ ಡಾ.ಹೆಚ್. ನರಸಿಂಹಯ್ಯ ನವರ ಹೆಸರು ಹೇಳದಿದ್ದಲ್ಲಿ ಅದು ಪೂರ್ಣವಾದಂತೆನಿಸುವುದಿಲ್ಲ. ಇವರು ಯಾವ ರೀತಿಯ ಪ್ರಚಾರವನ್ನೂ ಬಯಸದ ಮತ್ತು ಸಾಮಾನ್ಯರಲ್ಲಿ ಅತಿ ಸಾಮಾನ್ಯರಂತೆ ಬದುಕಿ ಸಮಾಜಮುಖಿಯಾಗಿ ಜೀವನ ನಡೆಸಿದ ಅಪ್ಪಟ ಗಾಂಧೀವಾದಿ.

ನಮ್ಮ ರಾಜ್ಯದ ಶಿಕ್ಷಣ ಪ್ರಪಂಚದಲ್ಲಿ ನ್ಯಾಷನಲ್ ಪ್ರೌಢಶಾಲೆ, ಕಾಲೇಜುಗಳನ್ನು ನಡೆಸುವ ಸಂಸ್ಥೆಗೆ ತನ್ನದೇ ಆದ ವಿಶಿಷ್ಟ ಗುರುತಿದೆ. ದೇಶದ ಸ್ವಾತಂತ್ರ್ಯ ಚಳುವಳಿಯ ಮಧ್ಯದಲ್ಲಿ ಹುಟ್ಟಿದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಇದೂ ಒಂದಾಗಿದೆ. ಅಂದಿನ ಧ್ಯೇಯ ಮತ್ತು ಗುರಿಯನ್ನು ಇಂದಿನವರೆಗೂ ನಡೆಸಿಕೊಂಡು ಬರುತ್ತಿರುವ  ಶಿಕ್ಷಣ ಸಂಸ್ಥೆ ಇದಾಗಿದೆ. ಈ ಶಿಕ್ಷಣ ಸಂಸ್ಥೆಗೆ  ಪೂರಕವಾಗಿರುವ ಇನ್ನೊಂದು ಹೆಸರೆಂದರೆ ಅದು ಡಾ.ಹೆಚ್. ನರಸಿಂಹಯ್ಯನವರದು. ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಉಳಿಸಿ ಬೆಳೆಸುವಲ್ಲಿ ಇವರ ಪಾತ್ರ ಹಿರಿದಾಗಿದೆ.

ಇವರ ಪ್ರೀತಿ ಪಾತ್ರ ಶಿಷ್ಯರಿಗೆ ಇವರು 'ಎಚ್ಚೆನ್ ಸರ್'. ಆದರೆ  ಅವರ ಪ್ರಶಂಸಕರು ಮತ್ತು ಭೌದ್ಧಿಕ ಪ್ರಪಂಚಕ್ಕೆ ಇವರು ಡಾ.ಹೆಚ್.ಎನ್ ಆಗಿದ್ದಾರೆ. ಜನ್ಮ ಸ್ಥಳ ಗೌರಿಬಿದನೂರು ತಾಲೂಕಿನ ಹೊಸೂರು ಎಂಬ ಪುಟ್ಟ ಹಳ್ಳಿ. ಇವರೇನೂ ಚಿನ್ನದ ಚಮಚೆಯನ್ನು ಬಾಯಲ್ಲಿ ಇರಿಸಿಕೊಂಡು ಭೂಮಿಗೆ



ಬಂದವರಲ್ಲ. ಮನೆಯಲ್ಲಿನ ಬಡತನದ ವಾತಾವರಣ ಈ ವ್ಯಕ್ತಿಯ ಸಾಧನೆಗೆ ಅಡ್ಡಿಯಾಗಲೇ ಇಲ್ಲ. ಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಇವರು ನ್ಯಾಷನಲ್ ಪ್ರೌಢಶಾಲೆಯಲ್ಲಿ ಓದು ಮುಂದುವರಿಸಿದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇವರ  ನ್ಯಾಷನಲ್ ಕಾಲೇಜಿನ ಮರು ಪ್ರವೇಶ ಅಲ್ಲಿನ ಪ್ರಾಧ್ಯಾಪಕರಾಗಿ. ಮುಂದೆ ಕೆಲ ಸಮಯದ ನಂತರ ಇವರು ಅಮೆರಿಕದ ಓಹಿಯೋ ವಿಶ್ವ ವಿದ್ಯಾಲಯದಲ್ಲಿ  ಬೈಜಿಕ ಭೌತ ವಿಜ್ಞಾನ (ನ್ಯೂಕ್ಲಿಯರ್ ಫಿಜಿಕ್ಸ್) ನಲ್ಲಿ ಉನ್ನತ ಪದವಿ ಪಡೆದರು.

ಕಾಲೇಜಿನ ಮುಖ್ಯಸ್ಥರಾಗಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಅನೇಕ  ಕಾರ್ಯಕ್ರಮಗಳನ್ನು ಇವರು ಕಾಲೇಜಿನಲ್ಲಿ ಆರಂಭಿಸಿದರು. ವಿದ್ಯಾರ್ಥಿಗಳಿಗೆ ಪರೀಕ್ಷೆ ಜ್ವರ ಸಾಮಾನ್ಯ ಸಂಗತಿ. ಇದರ ಅರಿವಿದ್ದ  ಹೆಚ್.ಎನ್ ರವರು ಅದರ ನಿವಾರಣೆ ಮತ್ತು ಅವರುಗಳಲ್ಲಿ ಓದಿನ ಆಸಕ್ತಿ ಹೆಚ್ಚಿಸಲು ಕಂಡು ಕೊಂಡ ಒಂದು ದಾರಿ ಹೀಗಿದೆ:  ಕಾಲೇಜಿನ ಕಿರು ಪರೀಕ್ಷೆಗಳನ್ನು ನಡೆಸುವಾಗ ಇವರು  ಪರೀಕ್ಷಾ ಕೊಠಡಿಯಲ್ಲಿ ಪರೀಕ್ಷಕರನ್ನು ಹೊರತು ಪಡಿಸಿ ವಿದ್ಯಾರ್ಥಿಗಳು ಪಠ್ಯ ಪುಸ್ತಕದ ಮೂಲಕ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯೋಗ ಮಾಡಿದ್ದರು. ಇದರ ಉದ್ದೇಶ ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ಬಿಡಿಸುವುದು ಮತ್ತು ಅವರ ವಿಷಯ ಜ್ಞಾನ ಬೆಳೆಸುವ ಪ್ರಯತ್ನವಾಗಿತ್ತು. ಇದನ್ನು ತೆರೆದ ಪುಸ್ತಕದ ಪರೀಕ್ಷೆ  ಎಂದು ವಿಶ್ವದ ಅನೇಕ ವಿಶ್ವ ವಿದ್ಯಾಲಯಗಳಲ್ಲಿ ಈಗ ನಡೆಸುತ್ತಿದ್ದಾರೆ. ಬೆಂಗಳೂರು ವಿಶ್ವ ವಿದ್ಯಾಲಯದ ಉಪಕುಲಪತಿಗಳಾಗಿದ್ದ ಸಮಯದಲ್ಲಿ ಇವರು

ಮನಃ ಶಾಸ್ತ್ರ, ನೃತ್ಯ, ನಾಟಕ ಇತ್ಯಾದಿ ಅನೇಕ ಹೊಸ ವಿಭಾಗಗಳನ್ನು ವಿದ್ಯಾರ್ಥಿಗಳ ಕಲಿಕೆಗಾಗಿ ಆರಂಭಿಸಿದರು.

ಹೆಚ್.ಎನ್ ರವರು ಅಪ್ಪಟ ಗಾಂಧೀವಾದಿ. ಅದೇ ರೀತಿ ಸರಳ ಜೀವನ ನಡೆಸಿದವರು. ಅವರು ತಮ್ಮ ಜೀವಿತಾವಧಿಯಲ್ಲಿ ಪಡೆದುಕೊಂಡ ಯಾವುದೇ ಹುದ್ದೆಗಳೂ ಅವರ ಜೀವನ ಶೈಲಿಯನ್ನು ಬದಲಾಯಿಸಲಿಲ್ಲ. ಅವರ ವೇಷ ಭೂಷಣ ವೆಂದರೆ, ಬಿಳಿಯ ಖಾದಿ ಪಂಚೆ, ಖಾದಿ ಜುಬ್ಬ ಮತ್ತು ಗಾಂಧಿ ಟೋಪಿ. ಇವರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಗಾಂಧೀಜಿಯವರು ಇಲ್ಲಿ ಬಂದಾಗ ಮಾಡಿದ ಹಿಂದಿ ಭಾಷಣದ ಕನ್ನಡ ಅನುವಾದವನ್ನು ಇವರೇ ಮಾಡಿದ್ದಾರೆ. ಇವರು ಜೀವನದುದ್ದಕ್ಕೂ ನೆಲೆಸಿದ್ದು

ನ್ಯಾಷನಲ್ ಕಾಲೇಜಿನ ಹಾಸ್ಟೆಲ್ಲಿನಲ್ಲಿ. ಒಂದು ಸಣ್ಣ ಕೊಠಡಿ. ಒಂದು ಚಾಪೆ ದಿಂಬು ಇವರ ಆಸ್ತಿ. ತಮ್ಮ ಅಡುಗೆ ಮತ್ತು ಬಟ್ಟೆ ಒಗೆಯುವಂತಹ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು.

ಹಿಂದೆಯೇ ಹೇಳಿದಂತೆ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಹೆಚ್.ಎನ್ ರವರ ಪಾತ್ರ ಸಕ್ರಿಯವಾಗಿತ್ತು. ಅವರು ಯಾವಾಗಲೂ ಹೇಳುತ್ತಿದ್ದುದು ಯಾವುದೇ ವಿಷಯವಾಗಲೀ ಅದರ ಬಗ್ಗೆ ಪ್ರಶ್ನಿಸಿ ತಿಳಿದುಕೊಳ್ಳದೇ ಒಪ್ಪಿ ಕೊಳ್ಳಬಾರದು ಎಂದು. ಅವರ ಕಛೇರಿಯಲ್ಲಿ ಯಾವಾಗಲು ಕಾಣ ಬರುತ್ತಿದ್ದ ವಿಜ್ಞಾನಿ ಆಲ್ಬರ್ಟ್ ಐನ್ ಸ್ಟೀನ್ ನ ಘೋಷ ವಾಕ್ಯ ಹೀಗಿದೆ. " Great spirits have always encounter a violent opposition from mediocre mind ?(ಪ್ರಶ್ನಾರ್ಥಕ ಚಿಹ್ನೆ) which signifies the spirit of enquiry ಅಂದರೆ ಮಹಾ ಚೇತನಗಳು ಯಾವಾಗಲೂ ಸಾಮಾನ್ಯ ಮನಸ್ಸುಗಳಿಂದ ಉಗ್ರವಾದ ಪ್ರತಿರೋಧ ಎದುರಿಸಬೇಕಾಗುತ್ತದೆ.. ' ?' ಇದು ವಿಚಾರ ಮಾಡುವವರ ಮಹತ್ವವನ್ನು ಎತ್ತಿ ತೋರಿಸುತ್ತದೆ ಎಂದು. ಇವರೊಬ್ಬ ನಾಸ್ತಿಕವಾದಿ ಮತ್ತು ವಿಚಾರವಾದಿಯಾಗಿದ್ದವರು. ಮೂಢನಂಬಿಕೆಗಳು , ಪವಾಡಗಳು ಮತ್ತು ಸ್ವಘೋಷಿತ ದೇವ ಮಾನವರ ಕಾರ್ಯಗಳ ವಿರುದ್ಧ ಜನ ಜಾಗೃತಿ ಬೆಳೆಸಲು ಇವರು ಸದಾ ಪ್ರಯತ್ನಿಸುತ್ತಿದ್ದರು. ಇವರು ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಉಪ ಕುಲಪತಿಗಳಾಗಿದ್ದಾಗ ಮೂಢ ನಂಬಿಕೆಗಳು ಮತ್ತು ಪವಾಡಗಳ ಬಗ್ಗೆ ತನಿಖೆ ಮಾಡಲು ಒಂದು ಸಮಿತಿಯನ್ನೇ ರಚಿಸಿದ್ದರು. ಇದಕ್ಕೆ ಪ್ರತಿರೋಧ ಬಂದಾಗ ಇವರು ಸಮರ್ಥಿಸಿಕೊಂಡಿದ್ದು ಹೀಗೆ 'ನಮ್ಮ ಸಂವಿಧಾನದ ತತ್ವವೇ ವೈಜ್ಞಾನಿಕ ಮನೋಭಾವವನ್ನು ಹರಡುವುದು' ಎಂದು. ತಾವು ಮಾಡುತ್ತಿದ್ದ ಕೆಲಸದಲ್ಲಿ ಇವರು ಸದಾ ತೃಪ್ತಿ ಹೊಂದಿದ್ದರು. ಇವರನ್ನು ವಿಚಾರವಾದಿ ಮತ್ತು ರಾಷ್ಟ್ರೀಯವಾದಿ ಎಂದು ಕರೆಯಬಹುದು.

ಡಾ.ಹೆಚ್.ನರಸಿಂಹಯ್ಯನವರು ಕ್ರೀಡೆಗಳಲ್ಲಿ ಅತೀವ ಆಸಕ್ತಿ ಹೊಂದಿದ್ದರು. ಅವರು ಸ್ವತಃ ಒಬ್ಬ ಉತ್ತಮ ಟೆನಿಸ್ ಆಟಗಾರರಾಗಿದ್ದರು ಎಂಬುದು ಅನೇಕರಿಗೆ ತಿಳಿದಿಲ್ಲ. ಪ್ರತಿ ದಿನ ಬೆಳಿಗ್ಗೆ ಲಾಲ್ಬಾಗ್ ನಲ್ಲಿನ ನಡಿಗೆ ಇವರ ದೈನಂದಿನ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಅಲ್ಲಿನ ನಡಿಗರ ಕ್ಲಬ್ ಹುಟ್ಟಲು ಇವರೇ ಕಾರಣರು. ಇವರು ಸರಳ ಜೀವಿ ಮತ್ತು ಉತ್ತಮ ಹಾಸ್ಯಗಾರರಾಗಿದ್ದರು. ನಗರದಲ್ಲಿ ನಡೆಯುವ ಪ್ರತಿ ಹಾಸ್ಯೋತ್ಸವದಲ್ಲೂ ಇವರ ಭಾಗ ವಹಿಸುವಿಕೆ ಕಡ್ಡಾಯವಾಗಿತ್ತು.

ಡಾ.ಹೆಚ್. ಎನ್ ರವರು ಶುದ್ಧ ವಿಜ್ಞಾನದ ಕಲಿಕೆಯ ಬಗ್ಗೆ ಅತೀವ ಆಸಕ್ತಿ ಉಳ್ಳವರಾಗಿದ್ದರು. ಜನರಲ್ಲಿ ಮೂಲ ವಿಜ್ಞಾನದ ತಿಳುವಳಿಕೆ ಮತ್ತು ಅವರಲ್ಲಿ ವೈಜ್ಞಾನಿಕ ಮನೋಭಾವ ಬಳಸುವ ಆಸಕ್ತಿ ಸದಾಕಾಲ ಅವರಲ್ಲಿತ್ತು. ಭೌತಶಾಸ್ತ್ರದ ತರಗತಿಗಳೆಂದರೆ ನಮ್ಮಂತಹ ಸಾಮಾನ್ಯ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡೆಲೆಯಂತಿರುತ್ತಿತ್ತು. ಆದರೆ, ಹೆಚ್. ಎನ್ ರವರ ತರಗತಿಗಳೆಂದರೆ ಸಿಹಿ ತಿಂದಂತೆ. ಏಕೆಂದರೆ, ಅವರ ಪಾಠ ಮಾಡುವ ಮತ್ತು ತಿಳಿ ಹೇಳುವ ರೀತಿ ಆಸಕ್ತಿಯುತ ಕಥೆ ಕೇಳಿದಂತಿರುತ್ತಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಗೂ ಇವರೊಬ್ಬ ಆತ್ಮೀಯ ಸ್ನೇಹಿತನಂತಿದ್ದು ಅದು ಅವರ ಸರಳತೆಯನ್ನು ಹೇಳುತ್ತದೆ. ಇವರು ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಲ್ ಆಗಿ ಆನಂತರ ಅದೇ ಸಂಸ್ಥೆಯ ಮುಖ್ಯಸ್ಥರಾಗಿಯೂ ಕೆಲಸ ಮಾಡಿ ಅದರ ಪರಿಪೂರ್ಣ ಬೆಳವಣಿಗೆಗೆ ಶ್ರಮಿಸಿದ್ದಾರೆ. ಆ ಸಂಸ್ಥೆಯ ಶಾಖೆಗಳನ್ನು ಬೆಂಗಳೂರಿನ ಸುತ್ತ ಮುತ್ತ ಸಣ್ಣ ಊರಿನಲ್ಲಿ ಪ್ರಾರಂಭಿಸಲು ಇವರು ರೂವಾರಿಯಾಗಿದ್ದರು. ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಇವರು ಸದಾ ಸಕ್ರಿಯರಾಗಿರುತ್ತಿದ್ದರು. ಅದೇ ಉದ್ದೇಶದಿಂದ ಇವರು ಹುಟ್ಟು ಹಾಕಿದ್ದು ಬೆಂಗಳೂರು ಸೈನ್ಸ್ ಫೋರಂ. ವೈಜ್ಞಾನಿಕ ವಿಚಾರಗಳನ್ನು ಕುರಿತ ಭಾಷಣಗಳು, ಕಮ್ಮಟಗಳು, ವಸ್ತು ಪ್ರದರ್ಶನ ಇತ್ಯಾದಿ ಈ ಸಂಸ್ಥೆಯ ಕೆಲಸ. ಇದು ಇಂದಿಗೂ ಅನೂಚಾನವಾಗಿ ನಡೆದು ಬರುತ್ತಿದೆ.

ವಿದ್ಯಾರ್ಥಿಗಳ ಮನೋಭಾವವನ್ನು ಅರಿಯಬಲ್ಲ ಕೆಲವೇ ಶಿಕ್ಷಕರಲ್ಲಿ ಇವರೂ ಒಬ್ಬರಾಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳಾಗಿದ್ದಾಗ ನಡೆದ ವಿದ್ಯಾರ್ಥಿ ಚಳುವಳಿಯ ಸಮಯದಲ್ಲಿ ಇವರು ಒಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಒಂದು ದೊಡ್ಡ ಗುಂಪಿನ ನಡುವೆ ಬಂದು ಅವರುಗಳು ಚಳುವಳಿ ಹಿಂಪಡೆಯಲು ಮನವೊಲಿಸಿದರು.

ಹೆಚ್.ಎನ್ ರವರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸಕ್ರಿಯವಾಗಿ ಕೆಲಸ ಮಾಡಿದ್ದಾರೆ. ಇವರ ಜೀವಮಾನದ ಅನೇಕ ಸಾಧನೆಗಳನ್ನು ಗುರುತಿಸಿ ಸಮಾಜ ಮತ್ತು ಸರಕಾರಗಳು ಇವರಿಗೆ ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಸ್ವಾತಂತ್ರ ಹೋರಾಟಗಾರರಿಗೆ ನೀಡುವ ತಾಮ್ರ ಪತ್ರ, ವಿಜ್ಞಾನದ ಪ್ರಚಾರಕ್ಕಾಗಿ ಇವರು ಮಾಡಿದ ಕಾರ್ಯ ಗುರುತಿಸಿ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, ಅಮೆರಿಕದ ಪಾಲ್ ಕ್ರುಜ್ ರವರ ವೈಜ್ಞಾನಿಕ ಸಂಶೋಧನೆಗೆ ಸಂಬಂಧಿಸಿದ ಸಮಿತಿಯ ಮೊದಲ ಫೆಲೋ ಪ್ರಶಸ್ತಿ ಇವರದಾಗಿದೆ. ಭಾರತ ಸರಕಾರ 1985 ರಲ್ಲಿ ಎಚ್ಚೆನ್ ಅವರಿಗೆ 'ಪದ್ಮ ಭೂಷಣ' ನೀಡಿ ಗೌರವಿಸಿದೆ. 'ತೆರೆದ ಮನ' ಇವರ ಲೇಖನಿಯಿಂದ ಮೂಡಿ ಬಂದಿರುವ ಒಂದು ಪ್ರಬಂಧವಾದರೆ 'ಹೋರಾಟದ ಹಾದಿ' ಇವರ ಆತ್ಮ ಕಥನ ವಾಗಿ ರಚಿತವಾಗಿದೆ. ಇವೆರಡೂ ಬರಹಗಳೂ ಸಾಹಿತ್ಯ ಅಕಾಡೆಮಿಯಿಂದ ಗುರುತಿಸಲ್ಪಟ್ಟಿದೆ. ಇವರು ನಮ್ಮಿಂದ ದೂರವಾದದ್ದು 31 ನೇ ಜನವರಿ 2005 ರಲ್ಲಿ. ಆದರೆ ಡಾ. ಎಚ್ ಎನ್ ಅವರ ನೆನಪು ಅವರ ಶಿಷ್ಯಕೋಟಿಯಲ್ಲಿ ಚಿರಂತನವಾಗಿದೆ.



# ಇವರಂಥ ಶಿಕ್ಷಕರು ಅಪರೂಪ!



▪ ಗುರುರಾಜ.ಬ.ಕನ್ನೂರ.

**ಸಾ**ಮಾನ್ಯವಾಗಿ ಇಂದಿನ ಸರಕಾರಿ ಶಾಲೆಗಳಲ್ಲಿ ಶಿಕ್ಷಕರು ನಿಗದಿತ ಸಮಯದಲ್ಲಿ ಸೇವೆ ಸಲ್ಲಿಸಿ, ಶಾಲೆಗೆ ಬಂದಂತಹ ಅನುದಾನವನ್ನು ಸದುಪಯೋಗಪಡಿಸಿಕೊಂಡು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಇದಕ್ಕೆ ಅಪವಾದವೆಂಬಂತೆ ವಿಭಿನ್ನವಾಗಿ ತಮ್ಮ ಶಿಕ್ಷಕ ವೃತ್ತಿಯನ್ನು ಅತ್ಯಂತ ಪಾವಿತ್ರ್ಯದಿಂದ ಕಾಣುತ್ತಾ ವಿದ್ಯಾರ್ಥಿಗಳೇ ತನ್ನ ದೇವರೆಂದು ತಿಳಿದುಕೊಂಡು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿರುವ ಅಪರೂಪದ ಶಿಕ್ಷಕರು ಇಲ್ಲೊಬ್ಬರಿದ್ದಾರೆ. ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ತೆರಳಿದರೆ ಸ್ವತಃ ತಮ್ಮ ಖರ್ಚಿನಿಂದಲೇ ಶುಲ್ಕ ಪಾವತಿಸುತ್ತಾರೆ! ಬನ್ನಿ ಅವರ ಬಗ್ಗೆ ತಿಳಿದುಕೊಳ್ಳೋಣ..

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಚಬನೂರು ಎಂಬ ಪುಟ್ಟ ಗ್ರಾಮದಲ್ಲಿರುವ ಕನ್ನಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ರಾಜಕುಮಾರ ಮಲಕಪ್ಪ ಮಾಳಿ ಎಂಬುವರೇ ಈ ಅಪರೂಪದ ಶಿಕ್ಷಕರು. ಈ ಶಾಲೆಗೆ ಇವರು ಬಂದು ಬರೋಬ್ಬರಿ 13 ವರ್ಷಗಳಾಗಿವೆ. ಇವರು ಈ ಶಾಲೆಗೆ ಬರುವ ಮುನ್ನ ಈ ಗ್ರಾಮದಲ್ಲಿ ಖಾಸಗಿ ಶಾಲೆಗಳ ಭರಾಟೆ ಇತ್ತು. ಮನೆ ಮನೆಗೆ ತೆರಳಿ ನಿಮ್ಮ ಮಗುವನ್ನು ಖಾಸಗಿ ಶಾಲೆಗೆ ಕಳುಹಿಸದೇ ನಮ್ಮ ಸರಕಾರಿ ಶಾಲೆಗೆ ಕಳುಹಿಸಿ ಎಲ್ಲ ಸೌಲಭ್ಯಗಳನ್ನು ನೀಡಿ ಖಾಸಗಿ ಶಾಲೆಯಲ್ಲಿ ಸಿಗುವ ಗುಣಮಟ್ಟವನ್ನು ನಾವು ನೀಡುತ್ತೇವೆ ಎಂದು ಪಾಲಕರಲ್ಲಿ ತಿಳಿ ಹೇಳಿದಾಗ ಮುಂದೆ ಗ್ರಾಮದಲ್ಲಿನ ಖಾಸಗಿ ಶಾಲೆಗಳು ಮುಚ್ಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಎಂಎ, ಬಿಇಡಿ ಪದವೀಧರರಾಗಿರುವ ಈ ಶಿಕ್ಷಕರು ಶಾಲೆಗೆ ಬೆಳಿಗ್ಗೆ 7ಕ್ಕೆ ಬಂದರೆ ತೆರಳುವುದು ರಾತ್ರಿ 8 ಗಂಟೆಯ ನಂತರವೇ. ಮಕ್ಕಳಿಗೆ ಗಣಿತ ತರಗತಿ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಭೋದಿಸಿ, ಸಂಜೆ 5ರಿಂದ ರಾತ್ರಿ 8 ರವರೆಗೆ ಕಂಪ್ಯೂಟರ್ ಶಿಕ್ಷಣ ನೀಡುತ್ತಾರೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪಾಲಕರಲ್ಲಿಗೆ ತೆರಳಿ ಶಾಲೆಗೆ ಕರೆ ತರುವಲ್ಲಿ ನಿರತರಾಗುವ ಇವರು ರಜಾ ದಿನಗಳಲ್ಲಿ ಹಾಗೂ ರವಿವಾರದ ದಿನಗಳಲ್ಲಿ ಎಲ್ಲಿಯೂ ಹೋಗದೇ ಶಾಲೆಯಲ್ಲಿಯೇ ಇದ್ದುಕೊಂಡು ಶಾಲೆಯಲ್ಲಿ ಕಲಿತು ಹೋದ ಹಳೆಯ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿ ಶೈಕ್ಷಣಿಕ ಸಲಹೆ ನೀಡುತ್ತಾರೆ. ಇವರಿಗೆ ಎರಡು ಬಾರಿ ವರ್ಗಾವಣೆ ಆದೇಶ ಬಂದರೂ ಪಾಲಕರೆಲ್ಲ ಸೇರಿ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಿ ಇಲ್ಲಿಂದ ಇವರನ್ನು ಕಳುಹಿಸದೇ ಉಳಿಸಿಕೊಂಡಿದ್ದಾರೆ. ಬೇಸಿಗೆ ರಜೆಯಲ್ಲಿ ತಮ್ಮ ಸ್ವಗ್ರಾಮ ವಿಜಯಪುರ ತಾಲೂಕಿನ ಆಹೇರಿ ಗ್ರಾಮದಲ್ಲಿ 8 ರಿಂದ 10 ನೆಯ ವರ್ಗದ ವಿದ್ಯಾರ್ಥಿಗಳಿಗೆ ಗಣಿತ ವಿಷಯವನ್ನು ಬೋಧಿಸುತ್ತಾರೆ.

ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಪಿಯುಸಿ ಇಲ್ಲವೇ ಉನ್ನತ ವ್ಯಾಸಂಗಕ್ಕೆ ತೆರಳಿದಾಗ ಅಂತಹ ಕನಿಷ್ಠ 10 ಬಡ ವಿದ್ಯಾರ್ಥಿಗಳಿಗೆ ಒಂದು ಸಾವಿರ ರೂಗಳಿಂದ ಹಿಡಿದು 10ಸಾವಿರ ರೂಗಳವರೆಗೆ ತಾವೇ ಖುದ್ದಾಗಿ ಶುಲ್ಕ ಪಾವತಿಸುತ್ತಾರೆ. 2004 ರಿಂದ ಇಲ್ಲಿಯವರೆಗೆ ನೂರಾರು ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಎರಡು ಲಕ್ಷ ರೂಗಳಿಗಿಂತಲೂ ಅಧಿಕ ಹಣವನ್ನು ವಿನಿಯೋಗಿಸಿದ್ದಾರೆ.

ಶಾಲೆಯ ಅಭಿವೃದ್ಧಿಗೆ ಎಸ್.ಡಿ.ಎಂ.ಸಿ ಸದಸ್ಯರು, ದಾನಿಗಳಿಂದ ವಂತಿಗೆ ಸಂಗ್ರಹಿಸಿ ನಾಲ್ಕು ಬೋರ್‌ವೆಲ್, ಆವರಣ ಗೋಡೆ, ಶಾಲೆಯಲ್ಲಿಯೇ ಎಲ್ಕೆಜಿ ತರಗತಿ ಪ್ರಾರಂಭ, ಹೆಬ್ಬಾಗಿಲು, ಹಸಿರು ವಾತಾವರಣ, ಅಚ್ಚುಕಟ್ಟಾದ ಧ್ವಜಕಟ್ಟೆ, ಧ್ವನಿವರ್ಧಕ, ಊಟದ ತಟ್ಟೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಹೆಸರಿಗೆ ತಕ್ಕಂತೆ ಹೈಟೆಕ್ ಶೌಚಾಲಯ, ಕಂಪ್ಯೂಟರ್ ಕೋಣೆ, ನೂರಕ್ಕೂ ಮಹಾತ್ಮರ ಭಾವಚಿತ್ರಗಳು, ಆವರಣದ ಸುತ್ತಲೂ ತರಕಾರಿ, ಹಣ್ಣುಗಳ ಗಿಡಗಳು, ಎರೆಹುಳು ಸಾಕಾಣಿಕೆ ಸೇರಿದಂತೆ ಅನೇಕ ಶಾಲಾ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ.

ಈ ಶಾಲೆಯಲ್ಲಿ 9 ಹಾಗೂ 10ನೇ ತರಗತಿ ಮಂಜೂರಾತಿಗಾಗಿ ಹೋರಾಡುತ್ತಿರುವ ಇವರು ಈ ಗ್ರಾಮದ ಶಾಲೆಗೆ ಇವೆರಡು ತರಗತಿ ಪ್ರಾರಂಭಿಸುವುದೇ ನನ್ನ ಗುರಿ ಎನ್ನುತ್ತಾರೆ. ಇನ್ನೂ ಮದುವೆಯಾಗದೆ ಉಳಿದಿರುವ ಇವರನ್ನು ಯಾಕೆಂದು ಪ್ರಶ್ನಿಸಿದರೆ ಶಾಲೆ ಹಾಗೂ ಇಲ್ಲಿನ ಮಕ್ಕಳೇ ನನ್ನ ಕುಟುಂಬ ಎನ್ನುತ್ತಾರೆ.

ಸದಾ ಶಾಲೆ ಹಾಗೂ ಶಾಲೆಯ ಅಭಿವೃದ್ಧಿಯನ್ನೇ ಧ್ಯಾನಿಸುವ ಇವರಂಥ ಶಿಕ್ಷಕರು ನಮ್ಮ ನಡುವೆ ಬಹು ಅಪರೂಪ. ಇವರ ಉತ್ತಮ ಸೇವೆ ಗುರುತಿಸಿ ಸರಕಾರ ಕಳೆದ ವರ್ಷ ಉತ್ತಮ ಶಿಕ್ಷಕ ಪ್ರಶಸ್ತಿ ಹಾಗೂ ಆರೂಢ ನಂದಿಹಾಳದ ಶ್ರೀ ಗುರು ಆರೂಢ ಸಂಸ್ಕರಣ ವೇದಿಕೆ ಆರೂಢಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.

# ಚೆನ್ನೈನಲ್ಲಿ ಕನ್ನಡ ಚಿತ್ರೋತ್ಸವದ ಪುಳಕ





▪ ಹೆಚ್. ಬಿ. ದಿನೇಶ್
ಉಪನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಚೆನ್ನೈನಲ್ಲಿ ಕನ್ನಡ ಚಿತ್ರಗಳ ಬಗ್ಗೆ ಒಲವಿದೆ. ಕರ್ನಾಟಕ ಚಿತ್ರ ರಂಗದಲ್ಲಿ ಆಗುತ್ತಿರುವ ಬೆಳವಣಿಗೆ ಎಲ್ಲರ ಗಮನ ಸೆಳೆದಿದೆ. ಹೊರ ರಾಜ್ಯದಲ್ಲೂ ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ಇದೆ ಎನ್ನುವುದನ್ನು ಈ ಚಿತ್ರೋತ್ಸವ ತೋರಿಸಿಕೊಟ್ಟಿತು.**

**ಚೆ**ನ್ನೈನಲ್ಲಿ ಆ ಮೂರು ದಿನ ಜನ 'ಕಬಾಲಿ'ಯನ್ನು ಮರೆತರು. ಮರೀನಾ ಬೀಚನ್ನು ದೂರ ಸರಿಸಿದರು. ಎಲ್ಲರ 'ಹರಿವು' ಒಂದೇ ದಿಕ್ಕಿನತ್ತ. ಚೆನ್ನೈ ಮೊದಲ ಬಾರಿಗೆ ಕಾಣುತ್ತಿರುವ ಕನ್ನಡ ಚಲನಚಿತ್ರೋತ್ಸವದ ಕಡೆ ಎಲ್ಲರೂ 'ಯೂಟರ್ನ್' ಮಾಡಿದ್ದರು. 'ತಿಥಿ', 'ಗೋಧಿ ಬಣ್ಣ, ಸಾಧಾರಣ ಮೈಕಟ್ಟು,' 'ಕರ್ವ' ಚಿತ್ರಗಳನ್ನು ವೀಕ್ಷಿಸಿ, ಕನ್ನಡ ಚಿತ್ರರಂಗದಲ್ಲಿ ಆಗಿರುವ ಸೃಜನಾತ್ಮಕ ಬೆಳವಣಿಗೆಯ ಬಗ್ಗೆ ಅಚ್ಚರಿಪಟ್ಟರು.

ನಿಜ, ಕನ್ನಡ ಚಲನಚಿತ್ರಗಳು ಕರ್ನಾಟಕದಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತವೆ, ಇವಕ್ಕೆ ಬೇರೆ ಕಡೆ ಮಾರುಕಟ್ಟೆ ಇಲ್ಲ ಎನ್ನುವ ಊಹಾತ್ಮಕ ಮಾತುಗಳಿಗೆ ತಿಲಾಂಜಲಿ ನೀಡುವಂತಿತ್ತು ಚೆನ್ನೈ ಕನ್ನಡ ಚಲನಚಿತ್ರೋತ್ಸವ. ಕರ್ನಾಟಕ ಚಲನಚಿತ್ರ ಅಕಾಡೆಮಿ, ಕಳೆದ ವಾರ ಚೆನ್ನೈನ ಆಳ್ವಾರ್ ಪೇಟೆಯಲ್ಲಿರುವ ರಷ್ಯನ್ ಸೆಂಟರ್ ಆಫ್ ಸೈನ್ಸ್ ಅಂಡ್ ಕಲ್ಚರ್ ಸಭಾಂಗಣದಲ್ಲಿ, ಇತ್ತೀಚಿನ ತಿಂಗಳಲ್ಲಿ ಕರ್ನಾಟಕದಲ್ಲಿ ಸಂಚಲನ ಮೂಡಿಸಿರುವ, ಪ್ರೇಕ್ಷಕರ ಪುಳಕ ಹೆಚ್ಚಿಸಿರುವ ಆಯ್ದ ಹನ್ನೊಂದು ಚಲನಚಿತ್ರಗಳನ್ನು ಉಚಿತವಾಗಿಯೇ ಪ್ರದರ್ಶಿಸಿತು.

ಚೆನ್ನೈನಲ್ಲಿ ಕನ್ನಡ ಚಿತ್ರಗಳನ್ನು ಯಾರು ನೋಡುತ್ತಾರೆ? ಈ ರೀತಿಯ ಚಿತ್ರೋತ್ಸವನ್ನು ಆಯೋಜಿಸುವ ಮೂಲಕ ಕನ್ನಡ ಚಿತ್ರರಂಗದಲ್ಲಿ ಆಗಿರುವ ಮಾರ್ಪಾಡು, ಹೊಸ ನಿರ್ದೇಶಕರು ತೆರೆಯ ಮೇಲೆ ಮಾಡುತ್ತಿರುವ ಹೊಸ ಪ್ರಯೋಗಗಳನ್ನು ದೇಶದಾದ್ಯಂತ ಪಸರಿಸಬೇಕೆಂಬ ಆಶಯ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರದಾಗಿತ್ತು. ಆಶ್ಚರ್ಯವೆಂದರೆ, ಈ ಎಲ್ಲ ಚಿತ್ರಗಳ ಬಗ್ಗೆ, ನಿರ್ದೇಶಕರ ಬಗ್ಗೆ ಚೆನ್ನೈನಲ್ಲಿ ಚಲನಚಿತ್ರ ವೀಕ್ಷಿಸಲು ಬಂದ ಪ್ರೇಕ್ಷಕರು ಬಹಳಷ್ಟು ಅರಿತಿದ್ದರು. ಈ ಚಿತ್ರಗಳ ಖ್ಯಾತಿಯನ್ನು ತಿಳಿದುಕೊಂಡಿದ್ದರು. ಹಾಗೂ ತಿಥಿ, ಗೋಧಿಬಣ್ಣ,ಸಾಧಾರಣ ಮೈಕಟ್ಟು, ಯೂ ಟರ್ನ್ ಚಿತ್ರಗಳನ್ನು ವೀಕ್ಷಿಸಲು ನೂಕುನುಗ್ಗಲಾಗಿದ್ದು, ಈ ಕಾರಣದಿಂದಲೇ. ನಿರೀಕ್ಷೆಗೂ ಮೀರಿ ಜನಸಾಗರವೇ ಈ ಸಭಾಭವನಕ್ಕೆ ಹರಿದ ಪರಿಣಾಮ, 'ಯೂಟರ್ನ್' ಚಿತ್ರವನ್ನು ಮತ್ತೊಮ್ಮೆ ಪ್ರದರ್ಶಿಸಲಾಯಿತು. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರವಂತೂ ಚೆನ್ನೈನಲ್ಲಿ ಅತ್ಯಂತ ಕುತೂಹಲ ಕೆರಳಿಸಿತ್ತು. ಪ್ರೇಕ್ಷಕರು, ಪ್ರದರ್ಶನ ಆರಂಭಕ್ಕೆ ಒಂದು ಗಂಟೆ ಮುನ್ನವೇ ಬಂದು ಸೀಟುಗಳನ್ನು ಕಾದಿರಿಸಿ ಕುಳಿತು ಕೊಂಡದ್ದು ಒಂದು ಹೊಸ ಬೆಳವಣಿಗೆ. ತಮಿಳು ಚಿತ್ರರಂಗದ ಕಲಾವಿದರು, ನಿರ್ದೇಶಕರು ಕೂಡ ಈ ಚಿತ್ರ ವೀಕ್ಷಣೆಗೆ ಹಾತೊರೆದರು. ನಟಿ ಸುಹಾಸಿನಿಯಂತೂ, ಜಾಗ ಸಿಗದೆ ಪರದಾಡಿ, ಕೊನೆಗೂ ಜಾಗ ಗಿಟ್ಟಿಸಿಕೊಂಡು ಸಿನಿಮಾ ನೋಡಿದರು!

ನಿರ್ದೇಶಕ ಕೆ.ಎಸ್.ವಾಸು, ವಿಕ್ರಮನ್, ನಟ ಕೋಕಿಲಮೋಹನ್, ಬಿ.ಸರೋಜಾದೇವಿ, ಲಕ್ಷ್ಮಿ, ಅಂಬಿಕಾ, ಕುಟ್ಟಿ ಪದ್ಮಿನಿ, ಮೊದಲಾದವರಲ್ಲದೆ, ಹೊಸ ತಲೆಮಾರಿನ ಅನೇಕ ಕಲಾವಿದರು, ಯುವ ನಿದೇಶಕರು ದಿನದ ಎಲ್ಲ ಪ್ರದರ್ಶನಗಳಲ್ಲೂ ಕಾಣಿಸಿಕೊಂಡದ್ದು, ಕನ್ನಡ ಚಿತ್ರರಂಗದಲ್ಲಿ ಉದಯಿಸಿರುವ ಚೈತ್ರಕಾಲದ ಬಗ್ಗೆ ಭರವಸೆ ಹುಟ್ಟಿಸುವಂತಿತ್ತು.

ಚೆನ್ನೈ ಕರ್ನಾಟಕ ಸಂಘದ ಸಹಯೋಗದಲ್ಲಿ ನಡೆದ ಈ ಚಿತ್ರೋತ್ಸವ ಹುಟ್ಟು ಹಾಕಿದ ಮೊದಲ ಪ್ರಶ್ನೆ ಎಂದರೆ, ಕನ್ನಡ ಚಿತ್ರಗಳ ಬಗ್ಗೆ ಇಷ್ಟೊಂದು ಆಸಕ್ತಿ ಹುಟ್ಟಿರುವಾಗ ಚೆನ್ನೈನ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಯಾಕೆ ಏರ್ಪಾಡು ಮಾಡಬಾರದು? ಎನ್ನುವುದಾಗಿತ್ತು. ಚಿತ್ರೋತ್ಸವಕ್ಕೆ ಸಾಕ್ಷಿಯಾದ ಯೂ ಟರ್ನ್ ನಿರ್ದೇಶಕ ಪವನ್ ಕುಮಾರ್, ಮಾಯಾಜಾಲದಲ್ಲಿ ಯೂ ಟರ್ನ್ ಬಿಡುಗಡೆಗೊಳಿಸಿದ್ದರಂತೆ. ಅಲ್ಲಿ ಒಂದು ವಾರ ಪ್ರದರ್ಶನಗೊಂಡ ಚಿತ್ರ ಎರಡನೇ ವಾರಕ್ಕೆ ಇಲ್ಲವಾಗಿತ್ತು. ಈಗ ಚಿತ್ರೋತ್ಸವದಲ್ಲಿ ಮತ್ತೆ ಜನ ಸಾಗರವೇ ಹರಿದು ಬಂದಿತ್ತು. ಅಂದರೆ ಈ ಚಿತ್ರ, ಚಿತ್ರಮಂದಿರದಲ್ಲಿ ಮುಂದುವರೆದಿದ್ದರೆ, ಜನ ನೋಡುತ್ತಿದ್ದರು. ಪ್ರದರ್ಶನ ಹಾಗೂ ಪ್ರೇಕ್ಷಕರ ನಡುವೆ ಸಂವಹನದ ಕೊರತೆ ಇದೆಯೇ, ಎನ್ನುವುದನ್ನು ಚಿತ್ರರಂಗ ಚಿಂತಿಸಬೇಕಿದೆ. ಚಿತ್ರೋತ್ಸವದಲ್ಲಿ ತಮ್ಮ ಚಿತ್ರಕ್ಕೆ ಪ್ರೇಕ್ಷಕರ ಅತ್ಯುತ್ಸಾಹದ ಪ್ರತಿಕ್ರಿಯೆ ಕಂಡು ಪವನ್ ಕುಮಾರ್ ಪುಳಕಿತರಾದರು. 'ಇಷ್ಟಕಾಮ್ಯ'ದ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೂ ಇದೇ ಅನುಭವವಾಯಿತು.





**ಕನ್ನಡ ಚಲನಚಿತ್ರಗಳು ಕರ್ನಾಟಕದಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತವೆ, ಇವಕ್ಕೆ ಬೇರೆ ಕಡೆ ಮಾರುಕಟ್ಟೆ ಇಲ್ಲ ಎನ್ನುವ ಊಹಾತ್ಮಕ ಮಾತುಗಳಿಗೆ ತಿಲಾಂಜಲಿ ನೀಡುವಂತಿತ್ತು ಚೆನ್ನೈ ಕನ್ನಡ ಚಲನಚಿತ್ರೋತ್ಸವ. ಕರ್ನಾಟಕ ಚಲನಚಿತ್ರ ಅಕಾಡೆಮಿ, ಕಳೆದ ವಾರ ಚೆನ್ನೈನ ಆಳ್ವಾರ್ ಪೇಟೆಯಲ್ಲಿರುವ ರಷ್ಯನ್ ಸೆಂಟರ್ ಆಫ್ ಸೈನ್ಸ್ ಅಂಡ್ ಕಲ್ಚರ್ ಸಭಾಂಗಣದಲ್ಲಿ, ಇತ್ತೀಚಿನ ತಿಂಗಳಲ್ಲಿ ಕರ್ನಾಟಕದಲ್ಲಿ ಸಂಚಲನ ಮೂಡಿಸಿರುವ, ಪ್ರೇಕ್ಷಕರ ಪುಳಕ ಹೆಚ್ಚಿಸಿರುವ ಆಯ್ದ ಹನ್ನೊಂದು ಚಲನಚಿತ್ರಗಳನ್ನು ಉಚಿತವಾಗಿಯೇ ಪ್ರದರ್ಶಿಸಿತು.**

ಚೆನ್ನೈನಲ್ಲಿ ಕನ್ನಡ ಚಿತ್ರಗಳ ಬಗ್ಗೆ ಒಲವಿದೆ. ಕರ್ನಾಟಕ ಚಿತ್ರ ರಂಗದಲ್ಲಿ ಆಗುತ್ತಿರುವ ಬೆಳವಣಿಗೆ ಎಲ್ಲರ ಗಮನ ಸೆಳೆದಿದೆ. ಹೊರ ರಾಜ್ಯದಲ್ಲೂ ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ಇದೆ ಎನ್ನುವುದನ್ನು ಈ ಚಿತ್ರೋತ್ಸವ ತೋರಿಸಿಕೊಟ್ಟಿತು. ಚಿತ್ರೋತ್ಸವದ ಯಶಸ್ಸು ಕಂಡ, ಚೆನ್ನೈನ ಉಡ್ ಲ್ಯಾಂಡ್ಸ್ ಹಾಗೂ ದೇವಿ ಚಿತ್ರಮಂದಿರದವರು ಕನ್ನಡ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಲು ಮುಂದಾಗಿದ್ದಾರೆ. ಚೆನ್ನೈ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಚಿತ್ರಗಳು : ತಿಥಿ, ಹರಿವು, ಮಾರಿಕೊಂಡವರು, ಗೋಧಿ ಬಣ್ಣ ಸಾಧಾರಣ ಮೈಕಟ್ಟು, ರಂಗಿತರಂಗ, ಇಷ್ಟ ಕಾಮ್ಯ, ಕರ್ವ, ಯೂ ಟರ್ನ್, ಫಸ್ಟ್ ರ್‍ಯಾಂಕ್ ರಾಜು ಹಾಗೂ ಶಿವಲಿಂಗ.

ನವದೆಹಲಿಯ ಸಿರಿಫೋರ್ಟ್ ಆಡಿಟೋರಿಯಂನಲ್ಲಿ ಈ ರೀತಿಯ ಕನ್ನಡ ಚಿತ್ರೋತ್ಸವವನ್ನು ಕಳೆದ ಏಪ್ರಿಲ್‌ನಲ್ಲಿ ಏರ್ಪಡಿಸಿದ್ದಾಗಲೂ, ಅಲ್ಲಿನ ಕನ್ನಡಿಗರು ಇತ್ತೀಚಿನ ಕನ್ನಡ ಚಿತ್ರಗಳ ಬಗ್ಗೆ ಆಸಕ್ತಿ ತೋರಿಸಿದ್ದರು. ದಕ್ಷಿಣ ಭಾರತದಲ್ಲಿ ಇದುವರೆಗೆ ತಮಿಳು ಹಾಗೂ ಮಲಯಾಳಂ ಚಿತ್ರಗಳಲ್ಲಿ ನಡೆಯುತ್ತಿರುವ ಪ್ರಯೋಗಗಳ ಬಗ್ಗೆ ಇಡೀ ಭಾರತೀಯ ಚಿತ್ರರಂಗ ಆಸಕ್ತಿಯಿಂದ ಎದುರು ನೋಡುತ್ತಿತ್ತು. ಈಗ ಕನ್ನಡ ಚಿತ್ರರಂಗದಲ್ಲಿ ನಡೆಯುತ್ತಿರುವ ಹೊಸ ಪ್ರಯೋಗಗಳ ಬಗ್ಗೆ ಎಲ್ಲರೂ ಎದುರು ನೋಡುವಂತಾಗಿದೆ ಎಂದು ಬಾಲಿವುಡ್ ನಿರ್ಮಾಪಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಚಲನಚಿತ್ರ ಅಕಾಡೆಮಿ, ಮುಂಬೈ, ಕೋಲ್ಕತ್ತಾ, ತಿರುವನಂತಪುರಗಳಲ್ಲೂ ಕನ್ನಡ ಚಿತ್ರೋತ್ಸವಗಳನ್ನು ಏರ್ಪಡಿಸಲು ಸಜ್ಜಾಗಿದೆ. ಕನ್ನಡ ಚಿತ್ರಗಳನ್ನು ಕಾಸುಕೊಟ್ಟು ನೋಡಲು ಹೊರರಾಜ್ಯಗಳ ಕನ್ನಡಿಗರು ಸಿದ್ಧರಾಗಿದ್ದಾರೆ. ಅವರಿಗೆ ಬೇಕಾದ್ದನ್ನು ಒದಗಿಸಲು ಕನ್ನಡ ಚಿತ್ರರಂಗ ಅಣಿಯಾಗಬೇಕಿದೆ. ಅಂತಹ ಸುಸಮಯಕ್ಕೆ ಈಗ ಕಾಲ ಕೂಡಿಬಂದಿದೆ. ■



# ವಿದ್ಯಾಕಾಶಿಯಲ್ಲಿ ರಾಜ್ಯದ ಮೊದಲ ಐಐಟಿ

▪ ಪಿ. ಎಸ್. ಪರ್ವತಿ

**ಧಾ**ರವಾಡ – ಇದು ಜ್ಞಾನಪೀಠ. ಶಿಕ್ಷಣ , ಸಾಹಿತ್ಯ , ಕಲೆಯ ಗಂಗೋತ್ರಿ. ಸಾಂಸ್ಕೃತಿಕ ಅಭಿವ್ಯಕ್ತಿ ಇಲ್ಲಿನ ದಿವ್ಯಶಕ್ತಿ. ವಿದ್ಯಾಕಾಶಿ ಎಂಬ ಹೆಗ್ಗಳಿಕೆ ಪಡೆದ ಧಾರವಾಡದಲ್ಲಿ ಉನ್ನತ ತಂತ್ರಜ್ಞಾನದ ಅಕ್ಷರಧಾಮ ಅನುಷ್ಠಾನಗೊಳ್ಳುವ ಮೂಲಕ ರಾಜ್ಯದ ವಿದ್ಯಾಕ್ಷೇತ್ರದಲ್ಲಿ ಹೊಸ ಭಾಷ್ಯ ಬರೆಯಲಾಗಿದೆ.

ರಾಜ್ಯದ ಮೊದಲ " ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಇದೇ ಆಗಸ್ಟ್ 1 ರಿಂದ ಧಾರವಾಡದಲ್ಲಿ ನೆಲೆಗೊಳ್ಳುವುದರೊಂದಿಗೆ ಇದು ತಂತ್ರಜ್ಞಾನ ಶಿಕ್ಷಣದ ಕೇಂದ್ರ ಸ್ಥಾನವಾಗಿ ಹೊರಹೊಮ್ಮಿದೆ. ಈ ಪ್ರತಿಷ್ಠಿತ ಸಂಸ್ಥೆಯ ಪ್ರಾರಂಭವು ಐಟಿ , ಬಿಟಿ ಕ್ಷೇತ್ರದಲ್ಲಿ ಮಂಚೂಣಿಯಲ್ಲಿರುವ ನಾಡ ಜನರ ಸಂಭ್ರಮದ ಜೊತೆಗೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸ್ಮರಣೀಯ ಹಾಗೂ ಚಾರಿತ್ರಿಕ ಸಂಗತಿಯಾಗಿದೆ.

**ತಾತ್ಕಾಲಿಕ ಕ್ಯಾಂಪಸ್ :** ಧಾರವಾಡ ನಗರ ಹೊರವಲಯದ ಪುನಾ –ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ 'ವಾಲ್ಮಿ ' ಸಂಸ್ಥೆಯ (water and Land Management Institutue-WALMI) ಕಟ್ಟಡದ ತಾತ್ಕಾಲಿಕ ಕ್ಯಾಂಪಸ್‌ನಲ್ಲಿ ಈ ಐಐಟಿ ಆರಂಭಗೊಂಡಿದೆ. ಈ ಸಂಸ್ಥೆಯಲ್ಲಿ ಪ್ರಸಕ್ತ ವರ್ಷ ಕಂಪ್ಯೂಟರ್ ಸೈನ್ಸ್ , ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಕೋರ್ಸ್ ಆರಂಭಿಸಲಾಗಿದೆ. ನಾಲ್ಕು ವರ್ಷದ ಅವಧಿಯ, ಎಂಟು ಸೆಮಿಸ್ಟರ್‌ಗಳ ಪದವಿ ಪಠ್ಯಕ್ರಮ ಹೊಂದಲಾಗಿದೆ. ರಾಷ್ಟ್ರಮಟ್ಟದ ಐಐಟಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಇಲ್ಲಿ ಪ್ರವೇಶಾವಕಾಶವಿದೆ. ಧಾರವಾಡ ಐಐಟಿಯಲ್ಲಿ ಈ ವರ್ಷ ಮೇಲ್ಕಂಡ ಪ್ರತಿ ವಿಷಯಕ್ಕೆ 40 ವಿದ್ಯಾರ್ಥಿಗಳಂತೆ ಒಟ್ಟು 120 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಈ ಪೈಕಿ 10



ವಿದ್ಯಾರ್ಥಿನಿಯರಿದ್ದಾರೆ. ರಾಜ್ಯದ 8 ವಿದ್ಯಾರ್ಥಿಗಳು ( ಓರ್ವ ವಿದ್ಯಾರ್ಥಿನಿ ಸೇರಿದಂತೆ) ರಾಜ್ಯದ ಮೊದಲ ಐಐಟಿಯ ಮೊದಲ ಬ್ಯಾಚ್‌ನಲ್ಲಿರುವುದು ಹೆಮ್ಮೆಯ ವಿಷಯ.

**ಸಕಲ ಸೌಲಭ್ಯ:** ಈ ಕ್ಯಾಂಪಸ್ ತಾತ್ಕಾಲಿಕವಾಗಿದ್ದರೂ ವಿದ್ಯಾರ್ಥಿಗಳ ಅಧ್ಯಯನಕ್ಕೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ಜಿಲ್ಲಾ ಆಡಳಿತ ಕ್ಯಾಂಪಸ್‌ನಲ್ಲಿ ಒದಗಿಸಿಕೊಟ್ಟಿದೆ. ಮೂರು ಬೋಧನಾ ಕೊಠಡಿ , ಸುಸಜ್ಜಿತ ಪ್ರಯೋಗಾಲಯ, ಆಡಳಿತ ಕಚೇರಿ , ಸಭಾಭವನ , ಪ್ರಾಧ್ಯಾಪಕರ ಕೊಠಡಿ , ವಿಶ್ರಾಂತಿ ಗೃಹ ಮತ್ತು ಕ್ಯಾಂಪಸ್ ಆವರಣದಲ್ಲಿ ವೈಫೈ ಸೌಲಭ್ಯ ಅಳವಡಿಸಲಾಗಿದೆ. ಹೈಟೆಕ್ ಉಪಕರಣ ಹಾಗೂ ಕಂಪ್ಯೂಟರಗಳನ್ನು ಒದಗಿಸಲಾಗಿದ್ದು, ಮುಂಬಯಿ ಸೇರಿದಂತೆ ರಾಷ್ಟ್ರದ ವಿವಿಧೆಡೆಗಳಲ್ಲಿರುವ ಐಐಟಿಗಳ ಪಾಠ ಪ್ರವಚನ ಆರಿಸಲು ಇ–ಕ್ಲಾಸ್ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ವ್ಯವಸ್ಥಿತ ವಿದ್ಯಾರ್ಥಿನಿಲಯಗಳನ್ನು ಒದಗಿಸಲಾಗಿದ್ದು , ಒಂದು ಕೊಠಡಿಯಲ್ಲಿ 3 ವಿದ್ಯಾರ್ಥಿಗಳಿರಲು ಅವಕಾಶವಿದೆ. ಕ್ಯಾಂಪಸ್‌ನಲ್ಲಿ ಕ್ಯಾಂಟಿನ್ ಹಾಗೂ ಕ್ರೀಡೆಗಳಿಗಾಗಿ ದೊಡ್ಡ ಮೈದಾನದ ಸೌಲಭ್ಯವಿದ್ದು ಉತ್ತಮ ರಸ್ತೆ , ನೀರು, ವಿದ್ಯುತ್ ಒದಗಿಸಲಾಗಿದೆ. ಈಗ ತಾನೆ ಶೈಕ್ಷಣಿಕ ವರ್ಷಾರಂಭಗೊಂಡಿದ್ದರೂ ತಂತ್ರಜ್ಞಾನ ಕ್ಷೇತ್ರದಲ್ಲಿ ನುರಿತ ಹಾಗೂ ಅನುಭವಿ ಅಧ್ಯಾಪಕರ 4 ಜನರ ತಂಡ ಮತ್ತು ಮೂವರು ಆಡಳಿತಾತ್ಮಕ ಸಿಬ್ಬಂದಿಯನ್ನು ಕ್ಯಾಂಪಸ್‌ಗೆ ನಿಯೋಜಿಸಲಾಗಿದೆ. ಆಗಾಗ ಮುಂಬಯಿ ಐಐಟಿಯ ನುರಿತ ಅಧ್ಯಾಪಕರು ಇಲ್ಲಿಗೆ ಬಂದು ವಿಶೇಷ ತರಗತಿ ನಿರ್ವಹಿಸುವ ವ್ಯವಸ್ಥೆ ಸಹ ಇದೆ.

**ಕನಸು ಸಾಕಾರ:** ಧಾರವಾಡದಲ್ಲಿ ಐಐಟಿ ಸ್ಥಾಪನೆಯಾಗಬೇಕೆಂಬ ಬೇಡಿಕೆ ದಶಕಗಳ ಕಾಲದ್ದು. ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರದಲ್ಲಿ ಮಾನವ ಸಂಪನ್ಮೂಲ ಸಚಿವರಾಗಿದ್ದ ದಿವಂಗತ ಎಸ್. ಅರ್.ಬೊಮ್ಮಾಯಿ ಅವರು ಧಾರವಾಡದಲ್ಲಿ ಐಐಟಿ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಮಂಡಿಸಿದ್ದರು. ಇದಕ್ಕೆ ಪೂರಕವಾಗಿ ಯು. ಅರ್. ರಾವ್ ನೇತೃತ್ವದ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಐಐಟಿ ಸ್ಥಾಪನೆಗೆ ಧಾರವಾಡ ಸೂಕ್ತ ಎಂಬ ವರದಿ ನೀಡಿತ್ತು. ಪ್ರಸ್ತುತ ಕೇಂದ್ರ ಸರ್ಕಾರ 2015 ರಲ್ಲಿ , ರಾಜ್ಯಕ್ಕೆ ಐಐಟಿ ಮಂಜೂರು ಮಾಡಿ ಸ್ಥಳ ಸೂಚಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ತದನಂತರದ ಬೆಳವಣಿಗೆಯಲ್ಲಿ ಧಾರವಾಡ , ರಾಯಚೂರ ಜೊತೆಗೆ ಮೈಸೂರು ಹೆಸರು ಐಐಟಿ ಸ್ಥಾಪನೆಗೆ ಕೇಳಿ ಬಂದವು. ಇದು ವಿವಾದಕ್ಕೆ ಕಾರಣವಾಗಿ ಹೋರಾಟಗಳು ನಡೆದವು. ಕೊನೆಗೆ ಧಾರವಾಡ ಹಾಗೂ ರಾಯಚೂರ ನಡುವೆ ಐಐಟಿಗಾಗಿ ಸ್ಪರ್ಧೆ ನಡೆಯಿತು. ಅಂತಿಮವಾಗಿ ಕೇಂದ್ರ ಸರ್ಕಾರ ರಚಿಸಿದ ಐಐಟಿ ಸ್ಥಳ ಪರಿಶೀಲನಾ ತಂಡವು ಧಾರವಾಡವು ಐಐಟಿ ಸ್ಥಾಪನೆಗೆ ಸೂಕ್ತ ಸ್ಥಳವೆಂದು ಶಿಫಾರಸ್ಸು ಮಾಡಿದ್ದರ ಹಿನ್ನೆಲೆಯಲ್ಲಿ ಈ ಐಐಟಿ ನೆಲೆಗೊಂಡಿತು.

**ವಿಶಾಲ ನಿವೇಶನ:** ಈ ಹೊಸ ಐಐಟಿಗೆ ಶಾಶ್ವತ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಉಚಿತವಾಗಿ ವಿಶಾಲ ಭೂಮಿಯನ್ನು ಒದಗಿಸಿದೆ. ಧಾರವಾಡದಲ್ಲಿ ಐಐಟಿ ಸೊಸೈಟಿ ನೋಂದಣಿಯಾಗಿದೆ. ಉನ್ನತ ಶಿಕ್ಷಣ ಇಲಾಖೆಯಿಂದ ನೇರವಾಗಿ ಈ ಸೊಸೈಟಿಗೆ ಭೂಮಿ ಹಸ್ತಾಂತರವಾಗಿದೆ. ರಾಷ್ಟ್ರೀಯ ಹೆದ್ದಾರಿಯಿಂದ 2 ಕಿ.ಮಿ ದೂರದಲ್ಲಿರುವ ಕೆಲಗೇರಿ– ಮುಮ್ಮಿಗಟ್ಟಿ ಸರಹದ್ದಿನ ಬಳಿ ಕೆಐಎಡಿಬಿ ವಶದಲ್ಲಿದ್ದ



> **ಈ ಸಂಸ್ಥೆಯಲ್ಲಿ ಪ್ರಸಕ್ತ ವರ್ಷ ಕಂಪ್ಯೂಟರ್ ಸೈನ್ಸ್ , ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಕೋರ್ಸ್ ಆರಂಭಿಸಲಾಗಿದೆ. ನಾಲ್ಕು ವರ್ಷದ ಅವಧಿಯ, ಎಂಟು ಸೆಮಿಸ್ಟರ್‌ಗಳ ಪದವಿ ಪಠ್ಯಕ್ರಮ ಹೊಂದಲಾಗಿದೆ. ರಾಷ್ಟ್ರಮಟ್ಟದ ಐಐಟಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಇಲ್ಲಿ ಪ್ರವೇಶಾವಕಾಶವಿದೆ.**

470 ಎಕರೆ ಭೂಮಿಯ ಜೊತೆಗೆ ಸಂರಕ್ಷಿತ ಅರಣ್ಯ ಪ್ರದೇಶದ 69 ಎಕರೆ ಭೂಮಿಯನ್ನು ಸರ್ಕಾರ ನೀಡಿದೆ. ಕೆಐಎಡಿಬಿ ವಶದಲ್ಲಿದ್ದ ಭೂಮಿಯನ್ನು ರಾಜ್ಯ ಸರ್ಕಾರ ಹಣ ಭರಿಸಿ ಪಡೆದು, ಐಐಟಿಗೆ ಉಚಿತವಾಗಿ ನೀಡಿದೆ. ಅರಣ್ಯ ಭೂಮಿಯಿಂದಾಗಿ ಈ ಸಂಸ್ಥೆ ಹಸಿರು ಐಐಟಿ ಎಂಬ ಶ್ರೇಯಸ್ಸನ್ನು ಪಡೆಯಲಿದೆ. ಅಂತಾರಾಷ್ಟ್ರೀಯ ವಾಸ್ತುಶಿಲ್ಪ ಸ್ಪರ್ಧೆ ಏರ್ಪಡಿಸಿ, ವಿಶಿಷ್ಟ ವಿನ್ಯಾಸದ ಐಐಟಿ ಕ್ಯಾಂಪಸ್ ನಿರ್ಮಾಣಕ್ಕೆ ಯೋಜಿಸಲಾಗುತ್ತಿದೆ. ಭೂಮಿ ಹಸ್ತಾಂತರಗೊಂಡಿರುವದರಿಂದ , ಶೀಘ್ರದಲ್ಲಿಯೇ ಹೊಸ ನಿವೇಶನಕ್ಕೆ ಆವರಣ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎನ್ನುತ್ತಾರೆ. ಐಐಟಿ ಉಸ್ತುವಾರಿ ನೋಡಿಕೊಳ್ಳುತ್ತಿರುವ ಪ್ರೊ. ಶಿವಪ್ರಸಾದ.

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ ಹಾಗೂ ಉನ್ನತ ಶಿಕ್ಷಣ ಸಚಿವ ಶ್ರೀ ಬಸವರಾಜ ರಾಯರೆಡ್ಡಿ ಅವರು ಸಂಸ್ಥೆಯ ಸ್ಥಾಪನೆಗೆ ಸ್ಥಳಾವಕಾಶ, ಸ್ಥಳ ಪರಿಶೀಲನೆ ಹಾಗೂ ತಾತ್ಕಾಲಿಕ ಕ್ಯಾಂಪಸ್ ಪ್ರಾರಂಭಕ್ಕೆ ಅಗತ್ಯ ಸೌಲಭ್ಯಗಳ ವಿಸ್ತರಿಸಿದ್ದರ ಫಲವಾಗಿ ಈ ಪ್ರತಿಷ್ಠಿತ ಸಂಸ್ಥೆ ಕಾರ್ಯಾರಂಭಗೊಂಡಿದೆ. ಕರ್ನಾಟಕ , ಮಹಾರಾಷ್ಟ್ರ , ರಾಜಸ್ಥಾನ , ಜಾರ್ಖಂಡ್ , ಅಂಧ್ರಪ್ರದೇಶ , ತೆಲಂಗಾಣ ರಾಜ್ಯ ಸೇರಿದಂತೆ ಹಲವು ಭಾಷಿಕ ವಿದ್ಯಾರ್ಥಿಗಳು ಈ ಐಐಟಿ ಮೆಟ್ಟಲೇರಿದ್ದಾರೆ.

ಈ ನೂತನ ಐಐಟಿಯ ವಿದ್ಯುಕ್ತ ಉದ್ಘಾಟನೆ ಆಗಸ್ಟ್ 28ಕ್ಕೆ ನಿಗದಿಯಾಗಿದೆ. ರಾಜ್ಯದ ಮುಖ್ಯಮಂತ್ರಿಗಳು , ಕೇಂದ್ರ ಹಾಗೂ ರಾಜ್ಯದ ಸಚಿವರು ಪಾಲ್ಗೊಳ್ಳುವ ಕಾರ್ಯಕ್ರಮವಿದೆ.

ಭರವಸೆಯ ಹೊಸ ಹೆಜ್ಜೆ: ಎಂಜಿನಿಯರಿಂಗ್ ಕ್ಷೇತ್ರದ ಹೊಸ ತಂತ್ರಜ್ಞಾನದತ್ತ ಇಂದು ಯುವಕರು ಆಕರ್ಷಿತರಾಗುತ್ತಿದ್ದಾರೆ. ಅದರಲ್ಲೂ ತಂತ್ರಜ್ಞಾನ ಹಾಗೂ ಸಂಶೋಧನೆ ಸಂಯೋಜಿಸಿ ಉನ್ನತ ಶಿಕ್ಷಣ ನೀಡುವ ರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ಐಐಟಿ ಪ್ರವೇಶಕ್ಕೆ ತುರುಸಿನ ಸ್ಪರ್ಧೆ ನಡೆಯುತ್ತದೆ. ಐಐಟಿಯಲ್ಲಿ ಅಧ್ಯಯನ ಮಾಡಿದವರು ಇಂದು ರಾಷ್ಟ್ರ ಹಾಗೂ ಜಾಗತಿಕ ಕಂಪನಿಗಳ ಮುಖ್ಯಸ್ಥರಾಗಿರುವುದು ಮತ್ತು ರಾಷ್ಟ್ರೀಯ ಆಡಳಿತ ಸೇವೆಗೆ ಸೇರುತ್ತಿರುವುದು ಇದಕ್ಕೆ ಕಾರಣವಾಗಿದೆ. ನಮ್ಮ ರಾಜ್ಯದ ವಿದ್ಯಾರ್ಥಿಗಳು ಬೇರೆ ರಾಜ್ಯಕ್ಕೆ ಐಐಟಿ ಓದಲು ಹೋಗಬೇಕಾದ ಅನಿವಾರ್ಯತೆ ಇತ್ತು. ಈಗ ಈ ಸೌಲಭ್ಯ ರಾಜ್ಯದಲ್ಲಿಯೇ ದೊರೆಯುವಂತಾಗಿದೆ. ಉನ್ನತ ತಾಂತ್ರಿಕ ಶಿಕ್ಷಣ ಪಡೆಯುವ ಸೌಲಭ್ಯವನ್ನು ಕಟ್ಟಿಕೊಡುವ ಕಾರ್ಯ ಧಾರವಾಡ ಐಐಟಿ ಮೂಲಕ ಸಾಕಾರಗೊಂಡಿದೆ. ಕಲೆ , ಸಂಸ್ಕೃತಿ ಹಾಗೂ ಶಿಕ್ಷಣ ಜೊತೆ ಜೊತೆಯಾಗಿ ಸಾಗಿದಾಗಲೇ ವಿದ್ಯೆಗೆ ಉನ್ನತಿ ಪ್ರಾಪ್ತವಾಗುತ್ತದೆ ಎಂಬ ಮಾತಿನಂತೆ ರಾಜ್ಯದ ಮೊದಲ ಐಐಟಿಯ ಪ್ರಾರಂಭ ಉನ್ನತ ತಾಂತ್ರಿಕ ಶಿಕ್ಷಣದತ್ತ ಇಟ್ಟ ಭರವಸೆಯ ಹೊಸ ಹೆಜ್ಜೆಯಾಗಿದೆ ಎಂದರೆ ತಪ್ಪಾಗದು. ▪




# ಶಾಲೆಗಾಗಿ ತನ್ನೆಲ್ಲ ಆಸ್ತಿಯನ್ನು ದಾನ ಮಾಡಿದ ಮಹಾದಾನಿ !

ಚಿತ್ರ, ಲೇಖನ:
▪ ಅನಿತಾ ಕುಲಕರ್ಣಿ

**ನಮ್ಮ ನಡುವೆ ಇಂತಹವರೂ ಇದ್ದಾರೆ! ಹೆಮ್ಮೆ ಪಡಿ. ಕಡುಬಡವಿ, ಅನಕ್ಷರಸ್ಥೆಯೊಬ್ಬಳ ಈ ಬಗೆಯ ತ್ಯಾಗ ಅತ್ಯಪರೂಪ; ಉಳಿದವರು ನೀಡಿದ ದಾನಕ್ಕಿಂತ ವಿಶೇಷ ಎನಿಸುತ್ತದೆ. ತನ್ನ ಬದುಕಿಗಾಗಿ ಇಟ್ಟುಕೊಂಡಿದ್ದ ಸುಮಾರು ಇಪ್ಪತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಜಮೀನನ್ನು ಶಾಲೆಗೆ ದಾನ ಮಾಡಿ, ಸದ್ಯ ಬದುಕು ನಡೆಸುವುದಕ್ಕಾಗಿ ಬೇರೆಯವರ ಜಮೀನಿಗೆ ಕೂಲಿ ಹೋಗುತ್ತಿರುವ ಇಂತಹ ಮಹಿಳೆ ನಮ್ಮ ಮಧ್ಯದಲ್ಲಿ ಇದ್ದಾರೆ ಎಂದರೆ ನಂಬುತ್ತೀರಾ? ಕೊಪ್ಪಳದಿಂದ ಕೂಗಳತೆಯ ದೂರದಲ್ಲಿರುವ ಕುಣಿಕೇರಿ ಎಂಬ ಪುಟ್ಟ ಗ್ರಾಮದ ಹುಚ್ಚಮ್ಮ ಚೌದ್ರಿ ಎಂಬ ಮಹಿಳೆಯೇ ಕಲಿಯುಗದ ಮಹಾ ದಾನಿ.**

ಇಂತಹ ಶ್ಲಾಘನೀಯ ಮನೋಭಾವನೆಗಾಗಿಯೇ ನಾಡಿನಾದ್ಯಂತ ಹೆಸರುವಾಸಿಯಾಗುವುದರ ಜೊತೆಗೆ ತನ್ನೂರಿನ ಹೆಸರನ್ನು ಬೆಳಗಿಸಿದ್ದಾಳೆ. ಸದ್ಯ ಹುಚ್ಚಮ್ಮ ತನ್ನ ಮನೆಯಲ್ಲಿ ದವಸ ಧಾನ್ಯಗಳ ಮೂಟೆಗಳನ್ನು ಪೇರಿಸಿಟ್ಟಿಲ್ಲ, ಅದರ ಬದಲಿಗೆ ನಾಡಿನಾದ್ಯಂತ ಶ್ರೀಮಠಗಳು, ನೂರಾರು ಸಂಘ ಸಂಸ್ಥೆಗಳು ನೀಡಿದ ಸನ್ಮಾನ ಪತ್ರಗಳನ್ನು ಮೂಟೆ ಮೂಟೆಯಾಗಿ ಪೇರಿಸಿಟ್ಟಿದ್ದಾರೆ.

**ದಾನಿಯ ಸಂಸ್ಕಾರದಲ್ಲಿ ಹುಟ್ಟಿದವರು:** 65ರ ವಯೋಮಾನದ ಹುಚ್ಚಮ್ಮ ಬೆಳೆದದ್ದೇ ಅಂತಹ ವಾತಾವರಣದಲ್ಲಿ. ಮತ್ತೊಬ್ಬರಿಗೆ ನೆರವಾಗುವ ಮನೋಭಾವನೆಯನ್ನು ಮೈಗೂಡಿಸಿಕೊಳ್ಳುವಂತಹ ಸಂಸ್ಕಾರದಲ್ಲಿ ಹುಟ್ಟಿದವರು. ಕೊಪ್ಪಳ ತಾಲೂಕಿನ ಹಂದ್ರಾಳ ಎಂಬ ಗ್ರಾಮದ ಬಸಮ್ಮ ಹಾಗೂ ಶಿವಪ್ಪ ದಂಪತಿಗಳ ಏಕೈಕ ಪುತ್ರಿ. ಈ ಹಿಂದೆ ಇವರ ತಂದೆ ತನ್ನೂರ ಶಾಲೆಗೆ ಒಂದು ಎಕರೆ ಫಲವತ್ತಾದ ಜಮೀನು ನೀಡುವುದರ ಮೂಲಕ ವಿಶಾಲವಾಗಿ ಶಾಲೆ ಬೆಳೆಯಲು ಕಾರಣರಾಗಿದ್ದರು. 'ಮರದಂತೆ ಫಲ ನೂಲಿನಂತೆ ಬಟ್ಟೆ' ಎಂಬ ಗಾದೆಯಂತೆ ತಂದೆಗೆ ತಕ್ಕ ಮಗಳಾಗಿ ಸಮಾಜ ಸೇವೆಗೆ ತನ್ನ ಬದುಕನ್ನು ಮುಡುಪಾಗಿ ಇಟ್ಟುಕೊಂಡಿದ್ದಾರೆ. ಬದುಕಿರುವವರೆಗೂ ಶಾಲಾ ಮಕ್ಕಳ ಆಟ, ಪಾಠ ನೋಡಿ ಸಂತೋಷ ತುಂಬಿಕೊಂಡು ಹೋಗುತ್ತೇನೆ, ಅದೆ ನನಗೆ ಜೀವನ್ಮುಕ್ತಿ' ಎಂದು ಸಾರಿ ಹೇಳುತ್ತಾರೆ.

**ತಾಯಿ ತೊಡೆಯ ಮೇಲೆ ಕುಳಿತುಕೊಂಡು ತಾಳಿ ಕಟ್ಟಿಸಿಕೊಂಡರು:** ಅನಕ್ಷರಸ್ಥೆಯಾದ ಹುಚ್ಚಮ್ಮ ತನಗಿನ್ನು ಸ್ವತಂತ್ರವಾಗಿ ಕುಳಿತುಕೊಳ್ಳಲು ಸಾಧ್ಯವಿಲ್ಲದಂತಹ ಪುಟ್ಟ ವಯಸ್ಸಿನಲ್ಲಿಯೇ ಹಸೆಮಣೆ ಏರಿ ಬಸಪ್ಪ ಚೌದ್ರಿಯವರ

**ನಾಡಿನ ವಿವಿಧ ಭಾಗದಲ್ಲಿ ಶಾಲೆಗೆ ಜಮೀನು ದಾನ ಮಾಡಿದವರು ಇದ್ದಾರೆ. ಆದರೆ ತನ್ನ ಬದುಕನ್ನೇ ಪಕ್ಕಕ್ಕಿಟ್ಟು ತನಗೆ ಆಸರೆಯಾಗಿದ್ದ ಇಡೀ ಜಮೀನನ್ನೇ ದಾನ ಮಾಡಿದವರು ವಿರಳ. ಕಡುಬಡವಿ, ಅನಕ್ಷರಸ್ಥೆಯೊಬ್ಬಳ ಇಂತಹ ತ್ಯಾಗ, ಉಳಿದವರು ನೀಡಿದ ದಾನಕ್ಕಿಂತ ವಿಶೇಷ ಎನಿಸುತ್ತದೆ. ತನ್ನ ಬದುಕಿಗಾಗಿ ಇಟ್ಟುಕೊಂಡಿದ್ದ ಸುಮಾರು ಇಪ್ಪತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಜಮೀನನ್ನು ಶಾಲೆಗೆ ದಾನ ಮಾಡಿ, ಸದ್ಯ ಬದುಕು ನಡೆಸುವುದಕ್ಕಾಗಿ ಬೇರೆಯವರ ಜಮೀನಿಗೆ ಕೂಲಿ ಹೋಗುತ್ತಿರುವ ಇಂತಹ ಮಹಿಳೆ ನಮ್ಮ ಮಧ್ಯದಲ್ಲಿ ಇದ್ದಾರೆ ಎಂದರೆ ನಂಬುತ್ತೀರಾ?**






ಕೈಹಿಡಿದವರು. ಹಸೆಮಣೆಯ ಮೇಲೆ ಕುಳಿತುಕೊಳ್ಳಲು ತಾಕತ್ತಿಲ್ಲದಂತಹ ಸಣ್ಣ ವಯಸ್ಸು ಅದು.. ಹೀಗಾಗಿ ತಾಯಿಯ ತೊಡೆಯ ಮೇಲೆಯೆ ಕುಳಿತು ಮಾಂಗಲ್ಯ ಕಟ್ಟಿಸಿಕೊಂಡರು. ಗಂಡನ ಮನೆ ಕುಣಿಕೇರಿ ಗ್ರಾಮಕ್ಕೆ ಬಂದಾಗ ಇವರಿಗೇನು ಸುಪ್ಪತ್ತಿಗೆ ಇದ್ದಿಲ್ಲ. ಇದ್ದ ಎರಡೂವರೆ ಎಕರೆ ಜಮೀನಿನಲ್ಲಿ ಗಂಡ ದುಡಿಯುತ್ತಿದ್ದರೆ ಹೆಂಡತಿ ಹುಚ್ಚಮ್ಮ ಅವರಿವರ ಜಮೀನಿನಲ್ಲಿ ಕೂಲಿ ನಾಲಿ ಮಾಡಿ ಬದುಕು ನಡೆಸುತ್ತಿದ್ದರು.

ಮೂವತ್ತು ವರ್ಷಗಳ ಹಿಂದೆ ಬಸಪ್ಪ ಅಕಾಲಿಕವಾಗಿ ಇಹಲೋಕ ತ್ಯಜಿಸಿದರು. ಬಳಿಕ ಅತ್ತೆ ಮಾವನ ಸೇವೆಯಲ್ಲಿಯೇ ಕಾಲ ಕಳೆದರು. ಅವರೂ ತೀರಿಕೊಂಡಾಗ ತಂದೆ, ತಾಯಿಯರನ್ನು ಕರೆದುಕೊಂಡು ಬಂದರು. ತಂದೆ ತಾಯಿಯ ಅಗಲಿಕೆಯ ನಂತರ ಹುಚ್ಚಮ್ಮ ಈಗ ಏಕಾಂಗಿಯಾಗಿ ಬದುಕು ನಡೆಸುತ್ತಿದ್ದಾರೆ.





**ಹುಚ್ಚಮ್ಮಗೆ ಮಕ್ಕಳು ಮುನ್ನೂರು:** ಹುಚ್ಚಮ್ಮರ ಕೌಟುಂಬಿಕ ಬದುಕಿಗೆ ಸಂಬಂಧಿಸಿದಂತೆ ಒಂದೊಂದೆ ಪ್ರಶ್ನೆಗಳನ್ನು ಕೇಳುತ್ತಾ ಹೋದಂತೆ ನಿಮಗೆ ಮಕ್ಕಳೆಷ್ಟು ಎಂದು ಕೇಳುವುದು ಸಹಜ ನೋಡಿ, ಹಾಗೆ ಕೇಳಿದಾಗ "ಎಪ್ಪಾ ನನಗೆ ಮುನ್ನೂರು ಮಕ್ಕಳ್ರಿ, ದೊಡ್ಡ ಸಂಸಾರ ಐತಿ' ಎಂದು ಯಾವುದೇ ದುಡುಕಿಲ್ಲದೆ ಪ್ರಸನ್ನಳಾಗಿ ಹೇಳುತ್ತಾರೆ. ಮಕ್ಕಳಿಲ್ಲದ ಆಕೆ ಹೇಳುವುದು ಹೀಗೆ.. "ಮಕ್ಕಳ ನಡುವೆ ಇರುವಾಗ ನನಗೆ ಏಕಾಂಗಿ ಎಂಬ ಭಾವನೆ ಕಾಡುವುದಿಲ್ಲ, ರಜಾ ದಿನಗಳಲ್ಲಿ ಮಾತ್ರ ಆ ಭಾವನೆ ಕಾಡುತ್ತದೆ, ಶಾಲೆಯ ಘಂಟೆ ಬಾರಿಸಿತೆಂದರೆ ಮಕ್ಕಳಿಗಿಂತ ಹೆಚ್ಚು ಖುಷಿ ಪಡುವವಳು ನಾನು' ಎಂದು ಹೇಳುವ ಹುಚ್ಚಮ್ಮ ಶಾಲೆಯಲ್ಲಿರುವ ಮಕ್ಕಳನ್ನೇ ತನ್ನ ಸ್ವಂತ ಮಕ್ಕಳಂತೆ ಕಾಣುತ್ತಾರೆ. ಮಕ್ಕಳೊಂದಿಗೆ ಆಡುತ್ತಾರೆ, ನಗುತ್ತಾರೆ, ಹಸಿದ ಶಾಲಾ ಮಕ್ಕಳಿಗೆ ರುಚಿಯಾಗಿ ಬಿಸಿಯೂಟ ಬಡಿಸಿ ತೃಪ್ತಿಪಡುತ್ತಾರೆ, ಶಾಲಾ

ಮಕ್ಕಳು ಶೌಚ ಮಾಡಿದರೆ ಶುಚಿಗೊಳಿಸುತ್ತಾರೆ, ಆಟ ಆಡುವಾಗ ಬಿದ್ದು ಗಾಯಗೊಂಡರೆ ತನ್ನ ಸೀರೆ ಸೆರಗಿನಿಂದಲೇ ಮಕ್ಕಳಿಗೆ ಪ್ರಥಮ ಚಿಕಿತ್ಸೆ ನೀಡುತ್ತಾರೆ, ಮಕ್ಕಳೊಂದಿಗೆ ಕುಳಿತು ಊಟ ಮಾಡುತ್ತಾರೆ, ನಾಲ್ಕುವರೆ ಘಂಟೆಯಾಗುತ್ತಿದ್ದಂತೆ ಮಕ್ಕಳೆಲ್ಲ ಮನೆಗೆ ಹೋದರೆ ಆ ಸಂತೋಷದಲ್ಲಿಯೇ ತನ್ನ ಗುಡಿಸಲಿಗೆ ಮರಳುತ್ತಾರೆ. ಬೆಳಗಿನ ಶಾಲಾ ಘಂಟೆ ಬಾರಿಸುವವರೆಗೂ ಅದೆ ನೆನಪಿನಂಗಳದಲ್ಲಿ ಇರುತ್ತಾರೆ. ಇದ್ದ ಆಸ್ತಿಯನ್ನೆಲ್ಲ ಶಾಲೆಗೆ ದಾನವಾಗಿ ನೀಡಿದ ಈ ವೃದ್ಧೆಯನ್ನು ಗ್ರಾಮಸ್ಥರು ಅದೇ ಶಾಲೆಯಲ್ಲಿ ಬಿಸಿಯೂಟ ಸಿಬ್ಬಂದಿಯಾಗಿ ನೇಮಿಸಿದ್ದಾರೆ. ಬಿಸಿಯೂಟದಿಂದ ದೊರಕುವ ಮಾಸಿಕ ಹದಿನೇಳು ನೂರು ರೂಪಾಯಿ ಹಾಗೂ ವೃದ್ಯಾಪ್ಯ ವೇತನದಲ್ಲಿಯೇ ಜೀವನ ನಡೆಸಿ ರಜೆಯ ದಿನಗಳಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಾರೆ.

**ಶಾಲಾ ಕಟ್ಟಡ ನಿರ್ಮಾಣಕ್ಕೆ ಜಾಗವೇ ಇದ್ದಿಲ್ಲ:** ಈ ಮೊದಲು ಶಾಲೆ ಗ್ರಾಮದ ಮಧ್ಯದಲ್ಲಿ ಒಂದು ಸಣ್ಣ ಕೊಠಡಿಯಲ್ಲಿ ನಡೆಯುತ್ತಿತ್ತು. ಮಕ್ಕಳಿಗೆ ತೀರಾ ಇಕ್ಕಟ್ಟಾಗಿತ್ತು, ಇನ್ನು ಮಕ್ಕಳಿಗೆ ಆಟವಂತೂ ದೂರದ ಮಾತಾಗಿತ್ತು. ಶಾಲೆ ನಿರ್ಮಾಣಕ್ಕೆ ಜಾಗದ ಅವಶ್ಯಕತೆ ಇತ್ತು. ಯಾರಾದರೂ ಭೂಮಿ ನೀಡಿದರೆ ಹೊಸದಾಗಿ ಕಟ್ಟಡ ನಿರ್ಮಾಣ ಮಾಡಲು ಸಿದ್ಧರಿದ್ದೇವೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೇಳಿದ್ದರು. ಆದರೆ ಗ್ರಾಮದಲ್ಲಿ ಯಾರೂ ಉಚಿತವಾಗಿ ಜಾಗ ನೀಡಲು ಮುಂದೆ ಬರಲಿಲ್ಲ.

**ಭೂಮಿ ದಾನ ಮಾಡಲು ಮುಂದೆ ಬಂದ ಅಜ್ಜಿ:** ಅನಿವಾರ್ಯವಾಗಿ ಆ ಊರ ಶಾಲಾ ಕಟ್ಟಡ ನಿರ್ಮಾಣಕ್ಕೆ ಬಂದಿದ್ದ ಅನುದಾನ ಮರಳಿ ಹೋಗುವ ಸಮಯ ಬಂತು. ಅದಾಗಲೆ ತಮ್ಮೂರಿನ ಅಂಗನವಾಡಿ ಕೇಂದ್ರಕ್ಕೆ ಭೂಮಿ ದಾನ ಮಾಡಿದ್ದ ಹುಚ್ಚಮ್ಮ ಮತ್ತೆ ಭೂಮಿ ಕೊಡುವುದಕ್ಕೆ ಮುಂದೆ ಬಂದರು. 'ಈಗಾಗಲೇ ನೀವು ಭೂಮಿ ಕೊಟ್ಟಿರುವೆ, ಇರುವ ಅಷ್ಟು ಭೂಮಿ ಕೊಟ್ಟು ಜೀವನಕ್ಕೆ ಏನು ಮಾಡ್ಕೋತಿಯಾ' ಎಂದು ಗ್ರಾಮದ ಹಿರಿಯರು ಕೇಳಿದರೆ, 'ನನಗೆ ಮಕ್ಕಳಿಲ್ಲ ನಮ್ಮೂರ ಶಾಲೆ ಬೆಳಗಬೇಕು, ನಮ್ಮೂರ ಮಕ್ಕಳು ಆಟವಾಡಬೇಕು ಎಂದರು' ಅಷ್ಟೆ ಅಲ್ಲ ಜಮೀನಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ತಂದು ಊರ ಮುಖಂಡರ ಕೈಗೆ ನೀಡಿ "ಇನ್ನು ಮುಂದೆ ಈ ಜಮೀನು ನನ್ನದಲ್ಲ, ಇದೆಲ್ಲ ಶಾಲಾ ಮಕ್ಕಳಿಗೆ ಸೇರಿದ್ದು, ನಮ್ಮೂರ ಮಕ್ಕಳು ಉತ್ತಮ ಶಿಕ್ಷಣ ಪಡೆದರೆ ಸಾಕು ಎಂದು ಹೇಳಿದರಂತೆ.





**ಇದೆಲ್ಲ ಬಯಲಿಗೆ ಬಂದಿದ್ದೇ ಒಂದು ಆಕಸ್ಮಿಕ:** ಮೂರು ವರ್ಷಗಳ ಹಿಂದೆಯೇ ಹುಚ್ಚಮ್ಮ ಈ ಜಮೀನನ್ನು ದಾನವಾಗಿ ನೀಡಿದ್ದರೂ ಹೊರ ಪ್ರಪಂಚಕ್ಕೆ ಮಾತ್ರ ಗೊತ್ತೇ ಆಗಿದ್ದಿಲ್ಲ. ಕಳೆದ ವರ್ಷ ಈ ಜಮೀನಿನ ಎದುರಿಗೆ ನಿರ್ಮಿಸಿದ್ದ ನಿವೇಶನಗಳನ್ನು ಉದ್ಘಾಟನೆ ಮಾಡುವುದಕ್ಕಾಗಿ ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳು ಬಂದಿದ್ದರು. ನಿವೇಶನಗಳ ಎದುರಿಗೆ ಇದ್ದ ಈ ಶಾಲಾ ಜಮೀನು ಯಾರದ್ದು ಎಂದು ಕೇಳಿದಾಗ ಗ್ರಾಮದವರು ಇದ್ದ ಇದೊಂದೆ ಆಸ್ತಿಯನ್ನು ನೀಡಿ ಕೂಲಿ ಮಾಡಿ ಬದುಕುತ್ತಿರುವ ಹುಚ್ಚಮ್ಮ ಅವರ ಇತಿಹಾಸ ಹೇಳಿದರು. ಆಗ ಸ್ವಾಮೀಜಿಗಳು, ಇದಾವುದರ ಹಂಗೂ ತನಗೆ ಬೇಡವೆಂದು ಎಲ್ಲೋ ಮೂಲೆಯಲ್ಲಿ ನಿಂತಿದ್ದ ಹುಚ್ಚಮ್ಮಳನ್ನು ಕರೆಸಿ ತಾವು ಉದ್ಘಾಟಿಸಬೇಕಾಗಿದ್ದ ನಿವೇಶನಗಳನ್ನು ಹುಚ್ಚಮ್ಮ ಅವರ ಅಮೃತ ಹಸ್ತದಿಂದಲೇ ಉದ್ಘಾಟಿಸುವಂತೆ ಮಾಡಿದರು. ಬಳಿಕ ನಡೆದ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಲಕ್ಷಾಂತರ ಜನರು ಸೇರಿದ್ದ ಕಾರ್ಯಕ್ರಮದಲ್ಲಿ ಹುಚ್ಚಮ್ಮಳ ದಾನ ಸೇವೆಯನ್ನು ಬಿಡಿಸಿಟ್ಟು ಸನ್ಮಾನಿಸಿದ ಬಳಿಕವೆ ಈ ಸಂಗತಿ ನಾಡಿಗೆ ಗೊತ್ತಾಗಿದ್ದು.

**ಹರಿದು ಬಂದ ಪ್ರಶಸ್ತಿಗಳ ಸುರಿಮಳೆ:** ಅವ್ವ, ಮಹಾದಾನಿ, ಅತ್ತಿಮಬ್ಬೆ, ಶಿಕ್ಷಣ ಪ್ರೇಮಿ, ದಾನ ಚಿಂತಾಮಣಿಯಂತಹ ನೂರಾರು ಪ್ರಶಸ್ತಿಗಳು ಹುಚ್ಚಮ್ಮನನ್ನು ಅರಸಿ ಬಂದಿವೆ. ಮುಖ್ಯಮಂತ್ರಿ ಎಸ್.ಸಿದ್ದರಾಮಯ್ಯ ಅವರು ಹುಚ್ಚಮ್ಮ ಅವರ ಸೇವಾ ಮನೋಭಾವನೆ ಮೆಚ್ಚಿ ಸತ್ಕರಿಸಿದ್ದಾರೆ. ಕೆಲವೊಂದು ಸಂಸ್ಥೆಗಳು ಹುಚ್ಚಮ್ಮನಿಗೆ ಸಹಾಯ ಹಸ್ತ ಚಾಚಿವೆ. ಇವಾವುದರ ಪರಿವೇ ಇಲ್ಲದ ಹುಚ್ಚಮ್ಮ ನಿತ್ಯ ಬಿಸಿಲು ನೆರಳೆನ್ನದೆ ತನ್ನ ನಿತ್ಯದ ಕಾಯಕದಲ್ಲಿ ಎಂದಿನಂತೆ ನಿರತಳಾಗಿದ್ದಾಳೆ.

# ಹಳ್ಳಿಗಳ ಸರ್ಕಾರಿ ಶಾಲೆಯಲ್ಲಿ ಹೈಟೆಕ್ ಶೈಕ್ಷಣಿಕ ಕಾರ್ಯಕ್ರಮ

ಚಿತ್ರ, ಲೇಖನ:
▪ ಕಿಶನ್



ರಾಜ್ಯದ ವಿವಿಧ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಇನ್ನು ಮುಂದೆ ಗಣಿತ, ಇಂಗ್ಲೀಷ್, ವಿಜ್ಞಾನ ವಿಷಯಗಳ ಶಿಕ್ಷಕರು ರಜೆ ಹಾಕಿದರೆ ಅಂದು ನಡೆಯುವ ಪಾಠ ಖಂಡಿತ ನಿಲ್ಲುವುದಿಲ್ಲ! ವಿದ್ಯಾರ್ಥಿಗಳು ಆ ದಿನದ ಪಾಠಗಳನ್ನು ಬೆಂಗಳೂರಿನಿಂದ ನೇರವಾಗಿ ಆನ್‌ಲೈನ್ ಮೂಲಕ ಕಲಿಯುತ್ತಾರೆ. ಅಷ್ಟೇ ಅಲ್ಲ ಈ ಡಿಜಿಟಲ್ ಕೋಣೆಯಲ್ಲಿ ವೆಬ್ ಕ್ಯಾಮೆರಾ ಅಳವಡಿಸಿದ್ದರಿಂದ ವಿದ್ಯಾರ್ಥಿಗಳು ತಮಗೆ ತಿಳಿಯದ ವಿಷಯವನ್ನು ಕೇಳಿ ತಿಳಿದುಕೊಳ್ಳುತ್ತಾರೆ, ಲೆಕ್ಕ ಮಾಡಿ ಕ್ಯಾಮೆರಾ ಮುಂದೆ ಹಿಡಿದು ತೋರಿಸಿ ಸೈ ಎನಿಸಿಕೊಳ್ಳುತ್ತಾರೆ.

ಬೆಂಗಳೂರು ಕೇಂದ್ರ ಸ್ಥಾನವಾಗಿದ್ದು ಸಂಸ್ಥೆ ಪರಿಣಿತ ಸಂಪನ್ಮೂಲ ವ್ಯಕ್ತಿಗಳನ್ನು ಹೊಂದಿದ್ದು, ಆಯ್ಕೆಯಾದ ಎಲ್ಲ ಶಾಲೆಗಳಲ್ಲಿ ಏಕಕಾಲದಲ್ಲಿಯೇ ಬೋಧನೆ ಪ್ರಸಾರವಾಗುವಂತಹ ತಂತ್ರಜ್ಞಾನ ಅಳವಡಿಸಲಾಗಿದೆ" ಸಂಸ್ಥೆಯ ಕಾರ್ಯಕ್ರಮ ನಿರ್ವಾಹಕಿ ಕೃಪಾ ಹೇಳುತ್ತಾರೆ.

**ಏನಿದು ಕಾರ್ಯಕ್ರಮ:** 'ನೀಡ್ ಬೇಸ್ ಇಂಡಿಯಾ ಸಂಸ್ಥೆ' ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ನಿಮಿತ್ತ ಹಾಕಿಕೊಂಡ ಯೋಜನೆಯೇ 'ಇ–ವಿದ್ಯಾಲೋಕ' ಕಾರ್ಯಕ್ರಮ. ಸರ್ಕಾರದಿಂದ ನೋಂದಣಿಯಾಗಿರುವ ಈ ಸಂಸ್ಥೆ ತನ್ನ ಸ್ವಂತ ಬಂಡವಾಳದಿಂದ ರಾಜ್ಯದಲ್ಲಿ ಆಯ್ದ ಕೆಲ ಪ್ರಾಥಮಿಕ ಶಾಲೆಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಇಲ್ಲಿನ ಕೊಪ್ಪಳ ಜಿಲ್ಲೆ ಸೇರಿದಂತೆ, ಗದಗ, ಧಾರವಾಡ, ಬೆಂಗಳೂರು, ಕಾರವಾರದಂತಹ ವಿವಿಧ ಜಿಲ್ಲೆಗಳಲ್ಲಿ ಕಡಿಮೆ ಹಾಜರಾತಿ ಹೊಂದಿರುವ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಉದ್ದೇಶ:** ವಿದ್ಯಾರ್ಥಿಗಳಲ್ಲಿ ಜ್ಞಾನಾಭಿವೃದ್ಧಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹೈಟೆಕ್ ಮಾದರಿಯ ಶಿಕ್ಷಣ ನೀಡುವುದು, ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ ಹೆಚ್ಚಿಸುವುದು, ತಂತ್ರಜ್ಞಾನವನ್ನು ಮಕ್ಕಳಿಗೆ ಪರಿಚಯಿಸುವುದು, ಪ್ರಾಥಮಿಕ ಶಾಲೆಯಿಂದ ಹೊರಗುಳಿದ, ಬಡ ಕುಟುಂಬದ ಮಕ್ಕಳಿಗೆ ಹಾಗೂ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳನ್ನು ಕರೆತಂದು ಶಿಕ್ಷಣ ನೀಡುವುದು ಸಂಸ್ಥೆಯ ಉದ್ದೇಶಗಳಾಗಿವೆ.



ಸದ್ಯ ವಿಜ್ಞಾನ, ಗಣಿತ ಹಾಗೂ ಇಂಗ್ಲೀಷ ಶಿಕ್ಷಣ ನೀಡುವ ವ್ಯವಸ್ಥೆ ಇದೆ. ಸ್ಥಳೀಯ ಭಾಷೆಗೆ ಸಂಬಂಧಿಸಿದಂತೆ ರಾಜ್ಯ ಪಠ್ಯಕ್ರಮ ಅನುಸರಿಸಿ 5ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಇಲ್ಲಿ ಬೋಧನೆ ನಡೆಯುತ್ತದೆ.

ಆಯ್ಕೆಯಾದ ಪ್ರತಿಯೊಂದು ಶಾಲೆಗಳಿಗೆ ಒಂದು ಅಂತರ್ಜಾಲ, ಸಿಪಿಯು, ವೆಬ್ ಕ್ಯಾಮೆರಾ, ಸ್ಪೀಕರ್, ಮೊಡೆಮ್ ಮತ್ತು ಯುಪಿಎಸ್ ನೀಡಲಾಗಿದೆ. ಅವುಗಳ ಮೇಲ್ವಿಚಾರಣೆಗೆ ಒಬ್ಬ ಸ್ವಯಂ ಸೇವಕ ಇರುತ್ತಾನೆ.

ಪ್ರತಿಯೊಂದು ತರಗತಿಗಳಿಗೆ ಒಂದು ಗಂಟೆಯಂತೆ ನಿತ್ಯ ಮೂರು ಗಂಟೆಗಳ ಕಾಲ ಬೋಧನೆ ನಡೆಯುತ್ತದೆ. ಶಿಕ್ಷಕರು ತಯಾರಿಸಿದ ವೇಳಾಪತ್ರಿಕೆ, ಪಠ್ಯವಿಭಜನೆ, ಪಾಠ ಯೋಜನೆಗೆ ತಕ್ಕಂತೆ ಬೋಧನೆ ನಡೆಯುತ್ತದೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪಾಠ ವೀಕ್ಷಣೆ ಮಾಡಬಹುದು, ಚರ್ಚೆಯಲ್ಲೂ ಪಾಲ್ಗೊಳ್ಳಬಹುದಾಗಿದೆ.

**ಖರ್ಚುವೆಚ್ಚ:** ಯೋಜನೆಗೆ ಆಯ್ಕೆಯಾದ ಪ್ರತಿ ಒಂದು ಶಾಲೆಗೆ ಡಿಜಿಟಲ್ ಕ್ಲಾಸ್ ರೋಮ್ ಸೆಟ್ ಮಾಡಲು $55ಸಾವಿರ, ಅಲ್ಲದೆ ಪ್ರತಿ ತಿಂಗಳದ ಇತರೆ ಖರ್ಚು $4ಸಾವಿರ, ಡಿಜಿಟಲ್ ನಿರ್ವಹಣೆಯ ಖರ್ಚು ಪ್ರತಿ ತಿಂಗಳ $8ಸಾವಿರ ಸಂಸ್ಥೆಯೇ ಭರಿಸುತ್ತದೆ. ಒಟ್ಟು ಒಂದು ಶಾಲೆಗೆ ಈ ಯೋಜನೆ ಅಳವಡಿಸಲು $2ಲಕ್ಷ ಖರ್ಚು ಬರುತ್ತದೆ ಎಂದು ಸಂಸ್ಥೆಯ ಕಾರ್ಯನಿರ್ವಾಹ ನಿರ್ದೇಶಕ ವೆಂಕಟ್ ಹೇಳುತ್ತಾರೆ.

ಪ್ರಾಯೋಗಿಕವಾಗಿ ಆರಂಭವಾಗಿರುವ ಈ ಯೋಜನೆ ಮುಂದಿನ ದಿನಗಳಲ್ಲಿ ಶಿಕ್ಷಕರ ಸಮಸ್ಯೆಯನ್ನು ಎದುರಿಸುತ್ತಿರುವ ಹಳ್ಳಿಗಳ ಶಾಲೆಗಳಿಗೆ, ಪ್ರೌಢ ಶಾಲೆಗಳಿಗೆ ವಿಸ್ತರಿಸುವ ಯೋಜನೆ ಹಾಕಿಕೊಳ್ಳಲಾಗಿದೆ" ಎನ್ನುತ್ತಾರೆ.



ಚಿತ್ರ ಲೇಖನ
▪ ಕಿಶನ್‌ರಾವ್ ಕುಲಕರ್ಣಿ

# ಈ ಶಾಲೆಯಲ್ಲಿ ಹಸಿರಿನ ನಿತ್ಯೋತ್ಸವ



ಹೈದ್ರಾಬಾದ್ ಕರ್ನಾಟಕ ಭಾಗದ ಸದ್ಯದ ಪರಿಸರವೇ ಅಂಥದ್ದು, ರಣ ರಣ ಬಿಸಿಲಿನಿಂದ ಒಣಗಿ ಹೋದ ಮರಬಳ್ಳಿಗಳು, ದಾಹ ತೀರಿಸಿಕೊಳ್ಳಲು ಹಾಹಾಕಾರದಿಂದ ಹಾರಿ ಬರುವ ಹಕ್ಕಿಗಳು, ಕುಡಿಯುವ ನೀರಿಗಾಗಿ ಕಂಗಾಲಾದ ಜನರು, ಎತ್ತ ನೋಡಿದರತ್ತ ಒಣ ಪರಿಸರ, ಇಂತಹ ವಾತಾವರಣದ ಮಧ್ಯೆ ಕಣ್ಣಿಗೆ ಮುದ ನೀಡುವ ಹಾಗೆ ಇಡೀ ಅಂಗಳಕ್ಕೆ ಹಸಿರು ಚಪ್ಪರ ಹಾಕಿದಂತಿರುವ ಹೂಬಳ್ಳಿಗಳಿಂದ ಕೂಡಿದ ಗಿಡಮರಗಳು, ಹಕ್ಕಿಗಳ ಇಂಚರ ಧ್ವನಿ, ಜುಳು ಜುಳು ಹರಿಯುತ್ತಿರುವ ನೀರು, ಹಸಿರು ಬಳ್ಳಿಗಳನ್ನೇ ಮರೆಯಾಗಿಸಿಕೊಂಡು ಕಣ್ಣಮುಚ್ಚಾಲೆ ಆಡುತ್ತಿರುವ ಪುಟ್ಟ ಮಕ್ಕಳು, ದುಂಬಿಗಳ ಝೇಂಕಾರ... ಇಂತಹ ಪರಿಸರ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಮೂಗನೂರ ಗ್ರಾಮದಲ್ಲಿ ಕಂಡು ಬರುತ್ತದೆ.



**ಎಲ್ಲ ಶಾಲೆಗಳಂತಲ್ಲ ಈ ಶಾಲೆ:** ಸರ್ಕಾರಿ ಶಾಲೆ ಎಂದರೆ ಬಣ್ಣ ಮಾಸಿದ ಕಟ್ಟಡದಲ್ಲಿನ ವಿದ್ಯಾರ್ಥಿಗಳ ಗಲಾಟೆ, ಎರ್ರಾ-ಬಿರ್ರಿಯಾಗಿ ಮುರಿದು ಬಿದ್ದಿರುವ ಕಿಟಕಿ, ಬಾಗಿಲುಗಳ ಹಲಗೆ-ಗಾಜುಗಳು, ಇನ್ನು ಆಗಾಗ ಪತ್ರಿಕೆಗಳಲ್ಲಿ 'ಕುರಿ ದೊಡ್ಡಿಯಂತಾದ ಶಾಲೆ, ಶಾಲಾ ಬಯಲಿನಲ್ಲಿಯೇ ದನಗಳ ಬಿಡಾರ... ಹೀಗೆ ಏನೇನೋ ವಿಷಯಗಳು ಪ್ರಕಟವಾಗುತ್ತಿರುತ್ತವೆ. ಹಾಗಂತ ಎಲ್ಲ ಸರ್ಕಾರಿ ಶಾಲೆಗಳು ಒಂದೇ ತರಹವಿರುವುದಿಲ್ಲ, ಅಲ್ಲಿರುವ ಶಿಕ್ಷಕರ ಮನಸ್ಸಿನ ಕನ್ನಡಿಯಂತೆ ಆ ಶಾಲೆಗಳು ಕಾಣುತ್ತಿರುತ್ತವೆ ಎಂಬುದಕ್ಕೆ ಈ ಮೂಗನೂರ ಶಾಲೆಯೇ ಸಾಕ್ಷಿಯಾಗಿ ನಿಂತಿದೆ.

**ಶಾಲೆಯೋ... ಹಸಿರು ಉದ್ಯಾನವೂ?**

ಈ ಶಾಲೆಯನ್ನು ನೋಡಲು ಕಣ್ಣುಗಳೆರಡೂ ಸಾಲದು. ಅರಳಿ ನಿಂತ ತರಾವರಿ ಪುಷ್ಪಗಳು, ಕಾಡಿನಲ್ಲಿರುವ ಯಾವ ಮರಕ್ಕೇನು ಕಡಿಮೆ ಎಂಬಂತೆ ಬೆಳೆದಿರುವ ಹಲವಾರು ಮರಗಳು, ಕಾಲಿಟ್ಟರೆ ಸ್ಪಂಜಿನ ಮೇಲಿಟ್ಟಂತೆ ಅನುಭವ ನೀಡುವ ನೆಲಕ್ಕೆ ಹಾಸಿದ ಹುಲ್ಲು, ಕೊಠಡಿ ಬಾಗಿಲು ತೆರೆದರೆ ಬೆಳಗಿನ ಶುಭಾಷಯ ಹೇಳುವ ಔಷಧಿ ಬಳ್ಳಿಗಳು, ಕೊಂಚ ಗಾಳಿ ಬೀಸಿದರೆ ಸಾಕು ಮೈ-ಮನಕ್ಕೆ ಹಿತ ನೀಡುವ ತಂಗಾಳಿ, ಅಳಿಲು, ದುಂಬಿಗಳ ನಲಿವು, ಭಿನ್ನ-ವಿಭಿನ್ನ ಪಕ್ಷಿಗಳ ಉಲಿವು, ಆ ಶಾಂತ ಪರಿಸರದಲ್ಲಿ ವಿದ್ಯಾರ್ಥಿಗಳ ಹುಲ್ಲು ಹಾಸಿನ ಮೇಲೆ ಕುಳಿತೋ... ಮಲಗಿಯೋ... ಮಾಡುವ ನಿತ್ಯದ ಶಾಲಾ ಅಭ್ಯಾಸಗಳು, ಮಕರಂದ ಹೀರಲು ಬಂದ ಬಣ್ಣದ ಚಿಟ್ಟೆಗಳ ಹಿಂದೆ ಬೆನ್ನು ಹತ್ತಿರುವ ನಾಲ್ಕಾರು ಎಳೆಯರ ಮೋಜಿನಾಟ ಕಾಣುತ್ತದೆ.

ಈ ಶಾಲೆಯ ಮುಂದಿರುವ ಚಿತ್ರಣ ನೋಡಿದರೆ ಯಾವುದೋ ಹೈಟೆಕ್ ಉದ್ಯಾನವನ ಇಲ್ಲವೆ ಇನ್ನಾವುದೋ ಎಸ್ಟೇಟ್‌ಗೆ ಬಂದಿದ್ದೇವೆನೋ ಎಂಬಂತೆ ಭಾಸವಾಗುವುದಂತೂ ಸತ್ಯ.

**ಶಿಕ್ಷಕರು ಹಸಿರು ಪ್ರೇಮಿಗಳು :** ಸಾಮಾನ್ಯವಾಗಿ ಇದು ಒಣ ಬೇಸಾಯವನ್ನೇ ನಂಬಿ ಬದುಕುತ್ತಿರುವ ಬಡ ರೈತಾಪಿ ಜನರಿರುವ ಒಂದು ದೊಡ್ಡ ಗ್ರಾಮ. ಶಾಲೆಯಲ್ಲಿರುವ ಮುಖ್ಯಶಿಕ್ಷಕ ಕೆ.ಎಸ್.ಅಥಣಿ ಸೇರಿದಂತೆ ಎಲ್ಲ ಶಿಕ್ಷಕರೂ

ಹಸಿರಿನ ಮೇಲೆ ಆಸಕ್ತಿ ತುಂಬಿಕೊಂಡಿದ್ದಾರೆ. ಈ ಕಾರಣವಾಗಿಯೇ ಎಲ್ಲ ಶಿಕ್ಷಕರು ಎಲ್ಲೆಲ್ಲಿ ಯಾವ ಯಾವ ಹೂ ಬಳ್ಳಿ ನಡೆಸಬೇಕು, ಯಾವ ಮರ ಹಾಕಬೇಕು.. ಎಂದು ನೀಲ ನಕ್ಷೆ ತಯಾರಿಸಿದ್ದರು. ಹಗಲು ರಾತ್ರಿ ಎನ್ನದೇ ಆರಂಭದಲ್ಲಂತೂ ತಿಂಗಳ ಕಾಲ ಸ್ವತಃ ಶಾಲಾ ಸಿಬ್ಬಂದಿ ಸೇರಿ ಕೈ ಕೆಸರು ಮಾಡಿಕೊಂಡರು. ಹತ್ತಾರು ಕಡೆ ಹೋಗಿ ತಮಗೆ ಇಷ್ಟವಾದ ಸಸಿಗಳನ್ನು ತಂದರು, ಬಿಡುವಿನ ಸಮಯದಲ್ಲಿ ವಿದ್ಯಾರ್ಥಿಗಳು ಹೊರಗಿನಿಂದ ಮಣ್ಣು ತಂದು ಕುಂಡಲಗಳನ್ನು ತುಂಬಿಸಿದರು, ನೀರು ಹಾಕಿದರು, ಪ್ರೀತಿಯಿಂದ ಸಸಿಗಳನ್ನು ಬೆಳೆಸಿದರು. ಗ್ರಾಮದ ಹುಚ್ಚೀರಪ್ಪ ಕಮತರ ಎಂಬ ಅಂಗವಿಕಲ ಯುವಕನೊಬ್ಬ ಯಾವುದೇ ಫಲಾಪೇಕ್ಷೆ ಇಲ್ಲದೆ ಶಿಕ್ಷಕರಿಗಿತ ಹೆಚ್ಚು ಶ್ರಮವಹಿಸಿ ಗಿಡಮರಗಳನ್ನು ಮಕ್ಕಳಂತೆ ಜೋಪಾನ ಮಾಡುತ್ತಿದ್ದಾನೆ. ಶಾಲಾ ರಜೆಯ ಅವಧಿಯಲ್ಲಿ ಈ ಯುವಕನೇ ಶಾಲಾ ತೋಟಕ್ಕೆ ಕಾವಲುಗಾರನಾಗಿರುತ್ತಾನೆ. ಇವರೆಲ್ಲರ ಪರಿಶ್ರಮದಿಂದಾಗಿ ಕ್ರಮೇಣ ಒಣ ಅಂಗಳದಲ್ಲಿ ತರಾವರಿ ಹೂಬಳ್ಳಿಗಳು ನಳನಳಿಸಲು ಆರಂಭಿಸಿದವು.

**ಕಟ್ಟಡದ ಒಳಭಾಗದಲ್ಲಿ ಅರಣ್ಯ :** ಶಾಲೆಯ ಹೊರ ಭಾಗವೆಲ್ಲ





ಬಳ್ಳಿಗಳಿಂದ ಕಂಗೊಳಿಸುತ್ತಿದ್ದಂತೆ ಕಾರಿಡಾರ್ ಜಾಗದಲ್ಲಿ ಕುಂಡಲಗಳನ್ನಿಟ್ಟು ಅದರಲ್ಲಿ ಹಸಿರು ಬಳ್ಳಿಗಳನ್ನು ಬೆಳೆಸಲಾಗಿದೆ. ವಿವಿಧ ಸಸ್ಯಗಳು ಆವರಣದ ಒಳ ಭಾಗದಲ್ಲಿ ಹಸಿರಿನ ಹಂದರ ಹೆಣೆದಿವೆ. ಇದೆಲ್ಲದರ ಜೊತೆಗೆ ಕೊಠಡಿ ಮುಂಭಾಗದಲ್ಲಿರುವ ಸಾಲು–ಸಾಲು ಕುಂಡಲಗಳಲ್ಲಿರುವ ಬಳ್ಳಿಗಳು ಶಾಲೆಗೆ ಮತ್ತಷ್ಟು ಹಸಿರಿನ ಮೆರಗು ತಂದಿವೆ. ಪ್ರತಿಯೊಂದು ಕೊಠಡಿಯ ಬಾಗಿಲು ಮುಂದೆ ಇರುವ ಔಷಧಿ ಸಸ್ಯಗಳು ವಿದ್ಯಾರ್ಥಿಗಳಿಗೆ ಉಚಿತವಾಗಿ ಪರಿಸರ ಪಾಠ ಹೇಳುತ್ತಿವೆ.

"ವಿವಿಧ ಬಣ್ಣದ ಗುಲಾಬಿ, ಪಾಂಪ್ಲೆಂಟ್ ಬಳ್ಳಿ, ನೇಮ್‌ಪ್ಲಾಂಟ್ಸ್, ಚೆರಿ, ಎಂಟು ತರಹದ ದಾಸವಾಳ, ರಾತ್ರಿ ರಾಣಿ, ಕಾಸ್‌ಮಸ್, ಕ್ರಿಸ್‌ಮಸ್, ತುಳಸಿ, ಬೆಟ್ಟದ ನೆಲ್ಲೆ, ಬದಾಮಿಗಿಡ, ಮಾವು, ತೆಂಗು, ಅಂಜೂರ, ಪೇರಲ ಗಿಡಗಳು ಈ ಜಾಗದೊಳಗ ಅದಾವ್ರಿ' ಎಂದು ಹುಚ್ಚೀರಪ್ಪ ಕಮತರ ಹೇಳುತ್ತಾರೆ.



**ವಿದ್ಯಾರ್ಥಿಗಳಿಗೆ ಪರಿಸರ ಪಾಠ :** ಕೆ.ಎಸ್.ಅಥಣಿ ಹಾಗೂ ಶಿಕ್ಷಕರು ಕೇವಲ ತಮ್ಮೊಬ್ಬರ ಮನಸ್ಸಿನಲ್ಲಿ ಪರಿಸರ ಪ್ರೇಮ ಬೆಳೆಸಿಕೊಂಡಿಲ್ಲ ಬದಲಿಗೆ ಅಲ್ಲಿರುವ ನೂರಾರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹಸಿರಿನ ವ್ಯಾಮೋಹ ತುಂಬುತ್ತಿದ್ದಾರೆ. ಈ ಕಾರಣದಿಂದಲೇ ವಿದ್ಯಾರ್ಥಿಗಳೆಲ್ಲ ತಾವೆ ಅಂದವಾಗಿ ಬಳ್ಳಿಗಳನ್ನು ಕಟಾವ್ ಮಾಡುತ್ತಾರೆ, ಪ್ರತಿಯೊಂದು ಸಸಿಯ ಮೇಲೆ ಅಕ್ಕರತೆ ತುಂಬಿಕೊಂಡಿದ್ದಾರೆ.

ವಿದ್ಯಾರ್ಥಿಗಳು ವಿರಾಮ ಸಮಯದಲ್ಲಿ ಹುಲ್ಲು ಹಾಸಿನ ಮೇಲೆ ಮಲಗಿ ಓದುತ್ತಾರೆ, ಆಟ ಆಡುತ್ತಾರೆ, ಹೂಬಳ್ಳಿಗಳನ್ನು ತಮ್ಮದೇ ಆದ ಭಾಷೆಯಿಂದ ಮಾತನಾಡಿಸುತ್ತಾರೆ. ಅಳಿಲು, ದುಂಬಿಗಳು ಬಂದು ಉಚಿತವಾಗಿ ಪರಿಸರ ಪಾಠ ಮಾಡಿ ಹೋಗುತ್ತಿವೆ.

ಈ ಶಾಲೆ ರಸ್ತೆಯಲ್ಲಿರುವುದರಿಂದ ಆಚೀಚೆ ಹೋಗುವ ಪ್ರವಾಸಿಗರ ದೃಷ್ಟಿ ಈ ಹೂ ತೋಟದ ಮೇಲೆ ಬೀಳದೆ ಇರುವುದಿಲ್ಲ. ವಿದ್ಯಾರ್ಥಿಗಳು ತಾವು ಗಿಡಗಳನ್ನು ಮುಟ್ಟುವುದಿಲ್ಲ ಯಾರನ್ನು ಮುಟ್ಟಲೂ ಬಡುವುದಿಲ್ಲ. ಆದರೆ ಗಿಡದಲ್ಲಿ ಹಣ್ಣುಗಳಾದಾಗ ಕಲರವದೊಂದಿಗೆ ಬರುವ ಗಿಳಿ ದಂಡು ಹಣ್ಣು ತಿನ್ನುವುದನ್ನು ಬಲು ಖುಷಿಯಿಂದ ನೋಡಿ ತೃಪ್ತಿಪಟ್ಟುಕೊಳ್ಳುತ್ತಾರೆ.

ಶಾಲಾ ಅಭಿವೃದ್ಧಿಗಾಗಿ ಟೊಂಕ ಕಟ್ಟಿ ನಿಂತಿರುವ ಈ ಗ್ರಾಮಸ್ಥರು 'ನಮ್ಮೂರಿಗೆ ಪ್ರೌಢ ಶಾಲೆ ಮಂಜೂರ ಮಾಡ್ರಿ, ಅದಕ್ಕೆ ಬೇಕಾಗುವ ಭೂಮಿ ಹಾಗೂ ಇನ್ನಿತರ ಸಾಮಾನುಗಳನ್ನು ನಾವೇ ದಾನ ಕೊಡ್ತೀವಿ' ಎಂದು ಹಾತೊರೆಯುತ್ತಿದ್ದಾರೆ. ಅದರಂತೆ ಸರ್ಕಾರ ಇಲ್ಲಿಗೆ 2016–17ನೇ ಸಾಲಿಗೆ ಪ್ರೌಢಶಾಲೆ ಮಂಜೂರ ಮಾಡಿದೆ.

**ಬದಲಾದ ಶಾಲಾ ಪರಿಸರ:** ಈ ಶಾಲೆಯ ಮಹೇಶ ಎಂಬ ವಿಜ್ಞಾನ ಶಿಕ್ಷಕರು ಮುಖ್ಯೋಪಾಧ್ಯಾಯರ ಕೊಠಡಿಯಲ್ಲಿ





ಅಳವಡಿಸಿರುವ ಡಿಟಿಎಚ್ ರೇಡಿಯೋ ಸಂಪರ್ಕವನ್ನು ಎಲ್ಲಾ ಕೊಠಡಿಗಳಿಗೆ ಕೇಳಿಸುವಂತೆ ವ್ಯವಸ್ಥೆ ಮಾಡಿದ್ದಾರೆ. ಅಲ್ಲದೆ ಸೌಂಡ್‌ಎಫೆಕ್ಟ್ ಅಳವಡಿಸಿರುವುದರಿಂದ ಕೇಳಲು ಹಿತಕರ ಎನಿಸುತ್ತದೆ. ಇದರ ಜೊತೆಗೆ ಮುಖ್ಯ ಶಿಕ್ಷಕರು ತಮ್ಮ ಕೋಣೆಯಲ್ಲಿ ಕುಳಿತೆ ಪ್ರತಿ ತರಗತಿಯಲ್ಲೂ ನಡೆಯುತ್ತಿರುವ ಬೋಧನೆ ಕೇಳಬಹುದು, ಸಾಲದ್ದಕ್ಕೆ ತಾವು ಅಲ್ಲಿಂದಲೇ ಶಿಕ್ಷಕರಿಗೆ ಅಥವಾ ಮಕ್ಕಳಿಗೆ ಧ್ವನಿ ಮೂಲಕ ಮಾಹಿತಿ ನೀಡುವ ವ್ಯವಸ್ಥೆಯನ್ನು ಮಹೇಶ ಮಾಡಿದ್ದಾರೆ.

ಎಲ್‌ಸಿಡಿ ಮೂಲಕ ರೇಡಿಯೊ ಪಾಠ, ಕಂಪ್ಯೂಟರ್ ಶಿಕ್ಷಣ, ದೂರದರ್ಶನ, ಶಾಲೆಯ ಸಭಾಂಗಣದಲ್ಲಿ ಕಾರ್ಯಕ್ರಮ ಹೀಗೆ ಎಲ್ಲವೂ ತಂತ್ರಜ್ಞಾನ ತುಂಬಿಕೊಂಡೆ ನಡೆಯುತ್ತವೆ. ಅನೇಕ ವಿಷಯಗಳನ್ನು ಅಂತರ್ಜಾಲದ ಮೂಲಕ ತೋರಿಸುವುದರಿಂದ ಮಕ್ಕಳಿಗೆ ನೈಜತೆಯ ಅರಿವು ಉಂಟಾಗುತ್ತದೆ.

"ಇಲ್ಲಿನ ಪ್ರತಿಯೊಬ್ಬ ಶಿಕ್ಷಕರು ಪ್ರತಿಭಾವಂತರೆ, ಈ ಕಾರಣದಿಂದಲೇ ಈ ಶಾಲೆ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಉತ್ತಮ ಶಾಲೆ ಎನಿಸಿಕೊಂಡಿದೆ. ಹಲವಾರು ಶಾಲೆಗಳಿಗೆ ಇದು ಮಾದರಿ ಶಾಲೆ ಎನ್ನಬಹುದಾಗಿದೆ" ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಬಿ.ಮುರುಟಗಿ ಅಭಿಮಾನದಿಂದ ಹೇಳುತ್ತಾರೆ.

**ಸಾಂಸ್ಕೃತಿಕ ಕ್ಷೇತ್ರದಲ್ಲೂ ಮುಂದು:** ಮಕ್ಕಳು ಅಭಿನಯಿಸುತ್ತಾರೆ, ಹಾಡುತ್ತಾರೆ, ಕುಣಿಯುತ್ತಾರೆ, ಅರಳು ಹುರಿದಂತೆ ಮಾತನಾಡುತ್ತಾರೆ. ಇದಕ್ಕೆಲ್ಲ ನಮ್ಮೂರ ಶಾಲೆಯ ಶಿಕ್ಷಕರ ಇಚ್ಛಾಶಕ್ತಿಯೇ ಕಾರಣ ಎಂದು ಗ್ರಾಮಸ್ಥರು ಅಭಿಮಾನಪಡುತ್ತಾರೆ.

**ಗ್ರಾಮಸ್ಥರಿಗೆ ಶಾಲೆಯ ಮೇಲೆ ಅತೀವ ಕಾಳಜಿ:** ಶಾಲೆಗೆ ಮೂರು ಎಕರೆ ಭೂಮಿ, ಶಾಲಾ ಮಕ್ಕಳಿಗೆ ಸಮವಸ್ತ್ರ, ಹಾಲು ಕುಡಿಯಲು ಲೋಟ, ಬಿಸಿಯೂಟಕ್ಕೆ ತಟ್ಟೆ, ಧ್ವನಿವರ್ಧಕ ಯಂತ್ರ, ಎಲ್ಲ ಕೊಠಡಿಗಳಿಗೆ ಸೀಲಿಂಗ್ ಫ್ಯಾನ್, ಕುರ್ಚಿಗಳು, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಸೇವಾದಳ ಸಮವಸ್ತ್ರ, ಕುಡಿಯುವ ನೀರಿಗಾಗಿ ಕೊಳವೆಬಾವಿ ಹಾಗೂ ನೀರಿನ ತೊಟ್ಟಿ, ಶಾಲಾ ಗೇಟ್, ಮಕ್ಕಳಿಗೆ ಟೈ, ರಂಗಮಂದಿರ... ಹೀಗೆ ಇವೆಲ್ಲವನ್ನು



ಗ್ರಾಮಸ್ಥರೆ ತಮ್ಮೂರ ಶಾಲೆಯ ಮಕ್ಕಳು ಬೆಳೆಯಲಿ ಎಂದು ಅಭಿಮಾನದಿಂದ ಕೊಟ್ಟ ದೇಣಿಗೆಯ ದೊಡ್ಡ ಪಟ್ಟಿ ಇದೆ ಎಂದು ಮುಖ್ಯಶಿಕ್ಷಕರು ತೋರಿಸುತ್ತಾರೆ.

**ಲಲಿತಕಲಾ ಸಪ್ತಾಹ ಶಿಬಿರ :** ಈಚೆಗೆ ಈ ಶಾಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕುಷ್ಟಗಿಯ ಸಮೃದ್ಧಿ ವಿವಿಧೋದ್ದೇಶಗಳ ಅಭಿವೃದ್ಧಿ ಸೇವಾ ಸಂಸ್ಥೆ ಹಾಗೂ ಕನ್ನಡ ನವೋದಯ ಸುಕೃತಿ ಸಂಸ್ಥೆಯ ಸಹಯೋಗದಲ್ಲಿ 'ಚಿಣ್ಣರ ಕನಸು ಸಮೃದ್ಧ ನನಸು' ಮಾಲಿಕೆಯಲ್ಲಿ ಮಕ್ಕಳ ಸಾಹಿತ್ಯ, ಲಲಿತಕಲಾ ಸಪ್ತಾಹ ಶಿಬಿರ ನಡೆಸಿತು.

ಪ್ರತಿ ದಿನ ನಾಲ್ಕು ವಿಶೇಷ ಅವಧಿ ಸೇರಿದಂತೆ ಆಟ, ಮನರಂಜನೆ, ಚಿತ್ರಕಲೆ, ಸಂಗೀತವೂ ಶಿಬಿರದಲ್ಲಿ ಸೇರಿತ್ತು.

ಕಲಾವಿದ ಬಸವರಾಜ ಉಪ್ಪಲದಿನ್ನಿ ಅವರ ಮಾರ್ಗದರ್ಶನದಲ್ಲಿ ಪರಿಸರ ಉಳಿಸಿ, ಕಾಡು ಬೆಳಸಿ ಎಂಬ ಗೀತರಚನೆ ಪ್ರದರ್ಶನವಂತೂ ಅಮೋಘವಾಗಿತ್ತು. ಶಾಲಾ ಅಭಿವೃದ್ಧಿಯನ್ನು ಕಂಡ ಸರ್ಕಾರ ಸ್ವಚ್ಛ ವಿದ್ಯಾಲಯ ಯೋಜನೆಯಲ್ಲಿ ಈ ಶಾಲೆಗೆ 1ಲಕ್ಷ ಅನುದಾನವನ್ನು ಕೊಡ ಮಾಡಿದೆ.

# ಮೀನು ಸಾಕಣೆ ಕೊಳಗಳ ನಿರ್ಮಾಣ



▪ *ಗಣೇಶ್ ಪ್ರಸಾದ್. ಎಲ್*
ಸಹಾಯಕ ಪ್ರಾಧ್ಯಾಪಕರು,
ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು.

*ಡಾ: ವಿಜಯಕುಮಾರ ಎಸ್*
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ
ಭೂತನಾಳ, ವಿಜಯಪುರ.

**"ಎಲ್ಲಿ ನೀರಿದೆಯೋ ಅಲ್ಲಿ ಮೀನನ್ನು ಬೆಳೆಸಲೇ ಬೇಕು" ಎಂಬುದು ಚೀನೀಯರ ಧ್ಯೇಯ. (ನೀರಿರುವ ಪ್ರದೇಶವೆಲ್ಲಾ ಮೀನು ಸಾಕಣೆಗೆ ಸೂಕ್ತವಾದದ್ದು ಎಂಬ ಅರ್ಥದಲ್ಲಿ) ನಮ್ಮ ದೇಶದಲ್ಲೂ ಸಹ ಪೂರ್ವಜರು ನಿರ್ಮಿಸಿರುವ ಹಾಗೂ ಹೊಸದಾಗಿ ನಿರ್ಮಿಸಲ್ಪಟ್ಟಿರುವ ಸಾವಿರಾರು ಕೆರೆ, ಕುಂಟೆ, ನೀರಾವರಿ ಜಲಾನಯನ ಪ್ರದೇಶಗಳಿದ್ದು ಅವುಗಳನ್ನು ಮೀನು ಸಾಕಣೆಗೆ ಯಶಸ್ವಿಯಾಗಿ ಬಳಸಬಹುದಾಗಿದೆ. ಆರ್ಥಿಕ ದೃಷ್ಟಿಯಿಂದ ವರ್ಷವಿಡೀ ನೀರಿರುವ ಕೆರೆಗಳನ್ನು ಮೀನು ಸಾಕಣೆಗೆ ಆಯ್ಕೆ ಮಾಡುವುದು ಸೂಕ್ತ. ಆದಾಗ್ಯೂ ವರ್ಷದಲ್ಲಿ ಕನಿಷ್ಟ 6–7 ತಿಂಗಳು ನೀರು ನಿಲ್ಲುವಂತಹ ಯಾವುದೇ ಕೆರೆ ಕೊಳವೆಗಳನ್ನು ಮೀನು ಸಾಕಣೆಗೆ ಒಳಪಡಿಸಬಹುದು.**

ಪ್ರತಿಯೊಂದು ಊರಲ್ಲೂ ಕನಿಷ್ಠ ಒಂದಾದರೂ ಕೆರೆ ಅಥವಾ ಕೊಳ ಇದ್ದೇ ಇರುತ್ತದೆ. ಇಂತಹ ಕೆರೆಗಳನ್ನು ಮೀನುಗಾರಿಕಾ ಇಲಾಖೆಯಿಂದ ಮೀನು ಸಾಕಣೆಗೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಬಹುದು. ಒಂದು ವೇಳೆ, ರೈತರು ತಮ್ಮ ಜಮೀನಿನಲ್ಲಿ ತಮ್ಮದೇ ಸ್ವಂತ ಕೊಳ ರಚಿಸಿಕೊಳ್ಳಲು ಇಚ್ಛಿಸಿದರೆ, ಅಂಥಾ ಸ್ಥಳಗಳ ಆಯ್ಕೆ ಮಾಡುವಾಗ, ಮೂರು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ.

- ನೀರಿನ ಲಭ್ಯತೆ
- ಮಣ್ಣಿನ ಗುಣಲಕ್ಷಣ
- ಭೂ ಮೇಲ್ಮೈ ಲಕ್ಷಣ.

**ನೀರಿನ ಲಭ್ಯತೆ:** ಮೀನು ಸಾಕಣೆಗೆ ಅವಶ್ಯವಾದ ನೀರನ್ನು ಮಳೆಯಿಂದ, ನದಿ ಹಾಗೂ ನೀರಾವರಿ ಕಾಲುವೆಗಳಿಂದ ಅಥವಾ ಬಾವಿ ಮತ್ತು ನೀರಿನ ಚಿಲುಮೆ (ಬೋರ್‌ವೆಲ್) ಮೂಲಗಳಿಂದ ಪಡೆಯಬಹುದು. ನದಿ ಅಥವಾ ನೀರಾವರಿ ಕಾಲುವೆಗಳಿಂದ ನೀರನ್ನು ಪಡೆಯಲು ಸಾಧ್ಯವಾದರಂತೂ ತುಂಬಾ ಅನುಕೂಲ. ಇಂಥಾ ನೀರಿನ ಜೊತೆ ಹರಿದು ಬರುವ ಅನಗತ್ಯ ಜೀವಿಗಳನ್ನು ಬೇರ್ಪಡಿಸಲು ನೀರನ್ನು ಜಾಲರಿ ಮೂಲಕ ಹರಿದು ಬಿಡಬೇಕಾಗುತ್ತದೆ. ಬಾವಿ ಹಾಗೂ ನೀರಿನ ಚಿಲುಮೆ ಮೂಲದ ನೀರು ಹಲವು ದೃಷ್ಟಿಯಿಂದ ಶುದ್ಧ ನೀರು. ಆದರೆ, ಅದರಲ್ಲಿ ಕರಗಿದ ಆಮ್ಲಜನಕದ ಪ್ರಮಾಣ ಕಡಿಮೆ ಇರುತ್ತದೆ. ಆದಾಗ್ಯೂ, ಕೊಳಕ್ಕೆ ಆಗಿಂದಾಗ್ಗೆ ಬಿರುಸಿನಿಂದ ಪಂಪ್ ಮೂಲಕ ಚಿಮ್ಮಿಸುವುದರಿಂದ ಆ ನೀರು ಕೊಳದ ವಿಸ್ತಾರ ಸೇರುವಾಗ ಗಾಳಿ ಜೊತೆ ಬೆರೆತು ಆಮ್ಲಜನಕ ಪ್ರಮಾಣ ಸಹಜವಾಗಿ ವೃದ್ಧಿಸುತ್ತದೆ.

**ಮಣ್ಣಿನ ಗುಣಲಕ್ಷಣ:** ಕೊಳ ನಿರ್ಮಿಸಲು ಉದ್ದೇಶಿಸಿರುವ ಪ್ರದೇಶದ ಮಣ್ಣಿನಗುಣವನ್ನು ಪರೀಕ್ಷಿಸುವುದು ಅತಿ ಮುಖ್ಯ. ಒಂದು ವೇಳೆ ಆ ಪ್ರದೇಶದ ಮಣ್ಣು, ಮರಳು ಮಿಶ್ರಿತವಾಗಿದ್ದರೆ, ಮೀನು ಕೊಳ ರಚನೆಗೆ ಅದು ಯೋಗ್ಯವೆನಿಸುವುದಿಲ್ಲ. ಬದಲಿಗೆ, ಜೇಡಿ ಮಿಶ್ರಿತ ನೀರು ಜಿನುಗಿ ಹೋಗದಂತೆ ತಡೆಹಿಡಿಯುವ ಗುಣ ಇರುವುದರಿಂದ ಕೊಳದ ರಚನೆಗೆ ಅದು ತುಂಬಾ ಸೂಕ್ತ.

ಕೊಳ ನಿರ್ಮಾಣವಾಗಲು ಆಯ್ಕೆ ಮಾಡಲಾದ ಪ್ರದೇಶದ ಮಣ್ಣು, ಕೊಳದ ರಚನೆಗೆ ಯೋಗ್ಯವೇ ಎಂದು ತಿಳಿಯಲು ಈ ಕೆಳಗೆ ವಿವರಿಸಿದ ಒಂದು ಸರಳ ಪರೀಕ್ಷೆಯನ್ನು ನಡೆಸಬಹುದು.

ಕೈಯಲ್ಲಿ ಒಂದು ಹಿಡಿ ಮುಷ್ಠಿ ಮಣ್ಣನ್ನು ತೆಗೆದುಕೊಂಡು ಅದನ್ನು ನೀರಿನಿಂದ ತೇವ ಮಾಡಿ ಕೈಯಿಂದ ಮುದ್ದೆ ಮಾಡಬೇಕು.ಒಂದು ವೇಳೆ ಅದು ಸುಲಭವಾಗಿ ಮುದ್ದೆಯಾದರೆ ಆ ಮಣ್ಣು ಕೊಳದ ನಿರ್ಮಾಣಕ್ಕೆ ಸೂಕ್ತವೆಂತಲೂ, ಒಂದು ವೇಳೆ ಆ ಗುಣ ಹೊದಿರದ ಮಣ್ಣಾದರೆ ಅದು ಕೊಳದ ನಿರ್ಮಾಣಕ್ಕೆ ಸೂಕ್ತವಲ್ಲವೆಂತಲೂ ತಿಳಿಯಬಹುದು.

ಒಂದು ವೇಳೆ ಮರಳು ಮಿಶ್ರಿತ ಮಣ್ಣಿನ ಪ್ರದೇಶದಲ್ಲೇ ಕೊಳ ನಿರ್ಮಿಸಬೇಕಾದ ಅನಿವಾರ್ಯತೆ ಒದಗಿ ಬಂದಲ್ಲಿ ಅಂಥಾ ಕೊಳದ ಗೋಡೆ (ಬದುವು)ಗಳಿಗೆ ಮತ್ತು ತಳಭಾಗಕ್ಕೆ ಒಂದು ಪದರ ಜೇಡಿ ಮಣ್ಣನ್ನು ಹರಡುವುದರಿಂದ ನೀರು ಸೋರಿ ಹೋಗುವುದನ್ನು ತಡೆಗಟ್ಟಬಹುದು.

**ಭೂ ಮೇಲ್ಮೈ ಲಕ್ಷಣ :** ಕೊಳದ ರಚನೆಗೆ ಆಯ್ಕೆಗೊಂಡ ಪ್ರದೇಶಕ್ಕೆ ನೀರು ಗುರುತ್ವಾಕರ್ಷಣೆ ಪ್ರಭಾವದಿಂದ ತಂತಾನೆ ಹರಿದು ಬರುವಂತಿರಬೇಕು ಮತ್ತು ಸುಲಭವಾಗಿ ಕೊಳದಿಂದ ಹೊರಕ್ಕೆ ಹರಿದು ಹೋಗುವಂತಿರಬೇಕು. ಹತ್ತಿರದಲ್ಲಿ ಹರಿಯುವ ನದಿಗೆ ಅಡ್ಡವಾಗಿ ಚಿಕ್ಕಡ್ಯಾಂಕಟ್ಟಿ ಅಲ್ಲಿಂದ ನೀರನ್ನು ಪಡೆಯುವ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಇನ್ನೂ ಉತ್ತಮ. ರಚನೆಗೊಳ್ಳುವ ಕೊಳವನ್ನು, ಸುಲಭವಾಗಿ ತಲುಪಲು ಸೂಕ್ತ ಮಾರ್ಗವನ್ನು ಹೊಂದಿರಬೇಕು.

**ಕೊಳದ ರಚನೆ:** ಸಾಮಾನ್ಯವಾಗಿ ಮಣ್ಣನ್ನು ಅಗೆದು ಅದರಿಂದ ಹೊರಬಂದ ಮಣ್ಣಿನಿಂದಲೇ ತಕ್ಕ ಬದುವುಗಳನ್ನು ರಚಿಸಿ ಕೊಳಗಳನ್ನು ನಿರ್ಮಿಸಲಾಗುತ್ತದೆ. ಈ ಕೆಲಸಕ್ಕೆ ತಗಲುವ ವೆಚ್ಚ ತುಂಬಾ ಜಾಸ್ತಿ. ಈ ನಿಟ್ಟಿನಲ್ಲಿ ಖರ್ಚನ್ನು ಕಡಿಮೆಗೊಳಿಸಲು ಆಂಧ್ರ ಮಾದರಿಯ ಕೊಳಗಳ ರಚನಾ ವಿಧಾನವನ್ನು ಗಮನಿಸುವುದು ಸೂಕ್ತ.

ಆಂಧ್ರ ಪ್ರದೇಶದ ರೈತರು ಕೊಳದ ಇಡೀ ಪ್ರದೇಶದ ಮಣ್ಣನ್ನು ಅಗೆದು ತೆಗೆಯುವ ಬದಲು, ಕೊಳದ ವಿಸ್ತೀರ್ಣದ ಸುತ್ತಲೂ ಒಳಬದಿಯಲ್ಲಿ ಮಾತ್ರ 5–20 ಮೀ.ಅಗಲ ಮತ್ತು 0.5–1.0ಮೀ. ಆಳದ ಕಂದಕಗಳನ್ನು ರಚಿಸುತ್ತಾರೆ. ತನ್ಮೂಲಕ ಹೊರಬಂದ ಮಣ್ಣನ್ನೇ ಬದುವುಗಳ ರಚನೆಗೆ ಬಳಸುತ್ತಾರೆ. ಈ ರೀತಿಯ ಕೊಳದ ರಚನೆಗೆ ಖರ್ಚು ಸಾಕಷ್ಟು ಕಡಿಮೆಯಾಗುವುದರ ಜೊತೆಗೆ, (ಶೇ 50 ರಿಂದ 60ರಷ್ಟು ಉಳಿತಾಯ) ಮೀನುಗಳನ್ನೂ ಸುಲಭವಾಗಿ ಹಿಡಿಯಲು (ಕಟಾವು ವೇಳೆ) ಅನುಕೂಲವಾಗುತ್ತದೆ. ಬೆಳೆದ ಮೀನನ್ನು ಹಿಡಿಯುವ ಮುನ್ನ ಕೊಳದ ನೀರನ್ನು ಹೊರಕ್ಕೆ ಬಿಟ್ಟಾಗ, ಕೊನೆಯಲ್ಲಿ ಈ ಕಂದಕಗಳಲ್ಲಿ ನೀರು ತುಂಬಿಕೊಳ್ಳುವುದರಿಂದ ಮೀನುಗಳೆಲ್ಲವೂ ಅಲ್ಲಿ ಶೇಖರಗೊಳ್ಳುತ್ತವೆ ಮತ್ತು ನಂತರ ಅವುಗಳನ್ನು ಬಲೆಯ ಸಹಾಯದಿಂದ ಪರಿಣಾಮಕಾರಿಯಾಗಿ ಹಿಡಿಯಬಹುದಾಗಿದೆ. ಈ ರೀತಿಯ ಆಂಧ್ರ ಮಾದರಿಯ ಕೊಳದ ರಚನೆಯ ಭೂಭಾಗ ಸಮತಟ್ಟಾಗಿದ್ದರೆ ಮಾತ್ರ ಸಾಧ್ಯ. ಒಂದು ವೇಳೆ, ತಗ್ಗು ದಿಣ್ಣೆಗಳ ಏರಿಳಿತದಿಂದ ಕೂಡಿದ ಭೂಮಿಯಾದ ಪಕ್ಷದಲ್ಲಿ ಕೊಳದ ಇಡೀ ಮಣ್ಣನ್ನು ಅಗೆದು ತೆಗೆಯಬೇಕಾಗುತ್ತದೆ. ಇದಕ್ಕೆ ಟ್ರ್ಯಾಕ್ಟರ್ ಮತ್ತು ಬುಲ್ಡೋಜರ್‌ಗಳನ್ನು ಬಳಸಬಹುದು.

**ಕೊಳೆದ ಬದುವಿನ ಇಳಿಜಾರು :** ಕೊಳೆದ ಬದುವು ಸಾಕಷ್ಟು ಗಟ್ಟಿಯಾಗಿರಬೇಕಾದುದರ ಅವಶ್ಯಕತೆಯಿದೆ. ಏಕೆಂದರೆ, ಅದು ಮಳೆ ಹಾಗೂ ನೀರಿನ ಅಲೆಗಳ ನಿರಂತರ ಕೊರೆತವನ್ನು ಎದುರಿಸಬೇಕಾಗುತ್ತದೆ. ಈ ಬದುವಿನ ಮೇಲ್ಭಾಗವು ಕನಿಷ್ಠ ಒಂದು ಮೀಟರ್ ಆದರೂ ಅಗಲ ಹೊಂದಿರಬೇಕು. ಅದಕ್ಕಿಂತ ಇನ್ನೂ ಹೆಚ್ಚು ಅಗಲ ಇದ್ದರೆ, ಓಡಾಟಕ್ಕೆ ಅನುಕೂಲಕರ ರಸ್ತೆಯಾಗಿ ಹೆಚ್ಚು ಉಪಯುಕ್ತವೆನಿಸುತ್ತದೆ. ಬದುವಿನ ಮೇಲೆ ಮೋಟಾರುಗಳು ಓಡಾಡಬೇಕಾದರೆ ಅದರ ಅಗಲ ಕನಿಷ್ಠ 5 ಮೀಟರ್ ಇರಬೇಕಾಗುತ್ತದೆ.



ಕೊಳದ ಬದುವಿನ ಒಳ ಇಳಿಜಾರು 1.5:1 ಅಥವಾ 2:1 ಅನುಪಾತದಲ್ಲಿ ರಚಿತಗೊಂಡಿರಬೇಕು. (ಚಿತ್ರ 16) ಒಂದು ವೇಳೆ, ಕೊಳವು ತುಂಬಾ ದೊಡ್ಡದಾಗಿದ್ದ ಪಕ್ಷದಲ್ಲಿ ಅಲೆಗಳ ಹೊಡೆತ ತಪ್ಪಿಸಲು ಅದನ್ನು 3:1 ಅಥವಾ 4:1ಕ್ಕೂ ಇಳಿಸಬಹುದು. ಒಳಬದಿಯ ಇಳಿಜಾರು ಜಾಸ್ತಿ ಇದ್ದರೆ ಗೋಡೆ ಕುಸಿಯುವಿಕೆಯನ್ನು ತಪ್ಪಿಸಬಹುದು. ಅಲ್ಲದೆ, ಈ ಇಳಿಜಾರಿನ ಮೇಲೆ ಉತ್ತಮ ಜಾತಿಯ ಕುರುಚಲು ಗಿಡಗಳನ್ನು ಬೆಳೆಸಿದರೆ ನೀರಿನ ಅಲೆಗಳ ಹೊಡೆತದಿಂದ ಉಂಟಾಗಬಹುದಾದ ಮಣ್ಣಿನ ಕೊರೆತವನ್ನೂ ತಡೆಗಟ್ಟಬಹುದು. ಕೊಳದ ಬದುವು ನೀರಿನ ಗರಿಷ್ಠ ಮಟ್ಟಕ್ಕಿಂತ ಸುಮಾರು ಅರ್ಧ ಮೀಟರ್ ಎತ್ತರದಲ್ಲಿರಬೇಕು. ತಳಸಲ್ಪ ಇಳಿಜಾರಾಗಿದ್ದರೆ ನೀರನ್ನು ಸುಲಭವಾಗಿ ಖಾಲಿ ಮಾಡಿ ಮೀನನ್ನು ಹಿಡಿಯಬಹುದು.

ಕೊಳದೊಳಕ್ಕೆ ಹಾಯಿಸಲ್ಪಡುವ ನೀರನ್ನು ಪೈಪಿನ ಸಹಾಯದಿಂದ ಜಾಲರಿಯ ಮೂಲಕ ಹರಿದು ಹೋಗುವಂತೆ ಮಾಡಬೇಕು ಮತ್ತು ಕೊಳದಿಂದ ಹೊರಕ್ಕೆ ಬಿಡಲ್ಪಡುವ ನೀರಿನ ಪ್ರಮಾಣವನ್ನು ತೂಬುಗಳ ಸಹಾಯದಿಂದ ನಿಯಂತ್ರಿಸಬಹುದು. ಈ ತೂಬನ್ನು ಕಾಂಕ್ರೀಟ್ ಅಥವಾ ಮರದಿಂದ ಅಥವಾ ಇಟ್ಟಿಗೆಗಳಿಂದ ತಯಾರಿಸಬಹುದು. ತೂಬಿನ ಒಳಗಡೆ ಕಟ್ಟಿಗೆಯ ಹಲಗೆಗಳನ್ನು ತೂರಿಸಲು ಅನುಕೂಲವಾಗುವಂತೆ ರಚಿತಗೊಂಡಿರಬೇಕು. ಈ ಹಲಗೆಗಳ ಸಂಖ್ಯೆಯನ್ನು ಹೆಚ್ಚಿಸಿ ಅಥವಾ ಕಡಿಮೆ ಮಾಡಿ ಕೊಳದ ನೀರಿನ ಮಟ್ಟವನ್ನು ನಿಯಂತ್ರಿಸಬಹುದು. ಕೊಳಕ್ಕೆ ನೀರು ತುಂಬುವ ಪೈಪು ನೀರಿನ ಗರಿಷ್ಠ ಮಟ್ಟಕ್ಕಿಂತ 15 ಸೆ.ಮೀ. ಎತ್ತರದಲ್ಲೂ, ಕೊಳದಿಂದ ಹೊರಕ್ಕೆ ಬಿಡುವ ತೂಬು ತಳದಿಂದ 30 ಸೆ.ಮೀ. ಎತ್ತರದಲ್ಲಿರಬೇಕು.

**ಕೊಳದ ವಿಸ್ತೀರ್ಣ:** ಆರ್ಥಿಕ ದೃಷ್ಟಿಯಿಂದ ಮೀನು ಸಾಕಣೆಗೆ ಒಳಪಡುವ ಕೊಳದ ವಿಸ್ತೀರ್ಣ 0.1 ಹೆಕ್ಟೇರಿಗಿಂತ ಹೆಚ್ಚು ಮತ್ತು 2 ಹೆಕ್ಟೇರಿಗಿಂತ ಕಡಿಮೆ ಇದ್ದರೆ ನಿರ್ವಹಣೆ ದೃಷ್ಟಿಯಿಂದ ಸುಲಭವೆನಿಸುತ್ತದೆ. ಕೊಳದ ಅಗಲ 20–30 ಮೀ ಇದ್ದರೆ ಮೀನು ಹಿಡಿಯಲು ಸುಲಭ.

**ಕೊಳದ ನೀರಿನ ಆಳ:** ಕೊಳದ ನೀರಿನ ಆಳ ಕನಿಷ್ಠ 1 ಮೀಟರ್ ಮತ್ತು ಗರಿಷ್ಠ 2–3 ಮೀಟರ್ ಇರಬೇಕು. ಒಂದು ಮೀಟರ್‌ಗಿಂತ ಕಡಿಮೆ ಆಳವಿದ್ದರೆ, ನೀರು ಮತ್ತು ಕೊಳದ ತಳಭಾಗ ಬಿಸಿಯಾಗಿ ಮೀನು ಮತ್ತು ಇತರೆ ಜಲಚರ ಜೀವಿಗಳಿಗೆ ಅಪಾಯ ತರುತ್ತದೆ. ನೀರಿನ ಉಷ್ಣ ಏರಿದಂತೆ ನೀರಿನಲ್ಲಿ ಕರಗಿರುವ ಮತ್ತು ಕರಗುವ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತದೆ.

# ಕೃಷಿಯಂತ್ರ

## ರೈತರ ಸುಖೀ ಬದುಕಿನ ಬೀಜ ಮಂತ್ರ






▪ ಪ. ರಾಮಕೃಷ್ಣ ಶಾಸ್ತ್ರಿ



**ಕೃ**ಷಿ ಯಂತ್ರಧಾರೆ– ಇದು ಕರ್ನಾಟಕ ಸರಕಾರ ರೈತರ ಹಿತಕ್ಕಾಗಿ ರೂಪಿಸಿದ ಮಹತ್ವಾಕಾಂಕ್ಷೆಯ ಒಂದು ಕಾರ್ಯಕ್ರಮ. ಕೃಷಿ ಕ್ಷೇತ್ರದ ಬಹುಮುಖ ಸಮಸ್ಯೆಗಳ ಕಾರಣದಿಂದ ಕೃಷಿಯಿಂದ ವಿಮುಖರಾಗುತ್ತಿರುವ ರೈತರಿಗೆ ಮರಳಿ ಅದರಲ್ಲಿ ಒಲವು ಮೂಡಿಸುವಲ್ಲಿ ಈ ಕಾರ್ಯಕ್ರಮ ಯಶಸ್ಸು ಗಳಿಸುತ್ತಿದೆ ಎಂದರೆ ತಪ್ಪಾಗದು. ಇದಕ್ಕೆ ಮುಖ್ಯ ಕಾರಣವೆಂದರೆ ಕೂಲಿಗೆ ಜನ ಸಿಗದೆ ಬೆಳೆಮಾಡಲು ಒದಗುವ ಅಡ್ಡಿ ಆತಂಕಗಳು, ಸಕಾಲಕ್ಕೆ ಔಷಧಿ ಬಿಡಲಾಗದಿರುವುದು, ಬೆಳೆ ಕೊಯ್ಲಿಗೆ ತೊಂದರೆಗಳಿಂದ ರೈತರು ಹತಾಶರಾಗುತ್ತಿದ್ದಾರೆ. ಯಂತ್ರೋಪಕರಣಗಳನ್ನು ಖರೀದಿ ಮಾಡಿ ಕೃಷಿ ಚಟುವಟಿಕೆಗಳಲ್ಲಿ ಬಳಸಿಕೊಳ್ಳಲು ಅಸಾಧ್ಯವಾದ ಸಣ್ಣ ಮತ್ತು ಮಧ್ಯಮವರ್ಗದ ರೈತರಿಗೆ ಕೃಷಿ ಯಂತ್ರಧಾರೆ ವರದಾನವಾಗುತ್ತಿದೆ. ಕಡಿಮೆ ಕೂಲಿಗಳ ನೆರವು ಸಾಕಾಗುತ್ತದೆ. ಅವರ ಮನೆ ಬಾಗಿಲಿನಲ್ಲಿ ಕ್ಲುಪ್ತ ಸಮಯಕ್ಕೆ ಮತ್ತು ಕೈಗೆಟಕುವ ಬಾಡಿಗೆ ದರದಲ್ಲಿ ಈ ಯಂತ್ರಗಳನ್ನು ದೊರಕುವಂತೆ ಮಾಡಲು ಸರ್ಕಾರದ ಕೃಷಿ ಇಲಾಖೆಯು ಹೋಬಳಿ ಮಟ್ಟದಲ್ಲಿ ಕೃಷಿ ಉಪಕರಣಗಳ ಬಾಡಿಗೆ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

ಈ ನಿಟ್ಟಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಕರ್ನಾಟಕ ರಾಜ್ಯದ 25 ಜಿಲ್ಲೆಗಳ 164 ಹೋಬಳಿಗಳಲ್ಲಿ ಬಾಡಿಗೆ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ಲಭಿಸಿದೆ. ಕಾರ್ಯಕ್ರಮವನ್ನು ಅದು ಕೃಷಿ ಇಲಾಖೆಯೊಂದಿಗೆ ಜಂಟಿಯಾಗಿ ಕಳೆದ 3 ವರ್ಷಗಳಿಂದ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿದೆ.

'ಕೃಷಿ ಯಂತ್ರಧಾರೆ' ಕಾರ್ಯಕ್ರಮದಿಂದ ಸಣ್ಣ, ಅತಿ ಸಣ್ಣ ರೈತರಷ್ಟೇ ಅಲ್ಲದೆ ದೊಡ್ಡ ರೈತರಿಗೂ ಅನುಕೂಲವಾಗಿದೆ. ಉಳುಮೆ, ಬಿತ್ತನೆ, ಕೊಯ್ಲು, ಸಂಸ್ಕರಣೆಗೆ ಸಂಬಂಧಪಟ್ಟ ನಾಲ್ಕು ಹಂತದ ಯಂತ್ರಗಳು ಒಂದೇ ಸೂರಿನಡಿಯಲ್ಲಿ ದೊರೆಯುವುದರಿಂದ ಸಕಾಲದಲ್ಲಿ ಕೃಷಿ ಕಾರ್ಯಕ್ರಮಗಳನ್ನು ಪೂರೈಸುವ ಕನಸು ಕೈಗೂಡುತ್ತಿದೆ.



ಪ್ರತಿ 'ಕೃಷಿ ಯಂತ್ರಧಾರೆ' ಕೇಂದ್ರದಲ್ಲಿ ಪ್ರಥಮ ಹಂತದಲ್ಲಿ 50 ಲಕ್ಷ ಮೌಲ್ಯದ ಯಂತ್ರಗಳನ್ನು ಖರೀದಿಸಲಾಗಿತ್ತು. ದ್ವಿತೀಯ ಹಂತದಲ್ಲಿ ಮತ್ತೆ 25.00 ಲಕ್ಷ ಮೌಲ್ಯದ ಯಂತ್ರಗಳನ್ನು ಖರೀದಿಸಲಾಗಿದೆ. ಯಂತ್ರ ಖರೀದಿಸುವಾಗ ತಜ್ಞರ ಸಲಹೆಯಂತೆ ಸ್ಥಳೀಯವಾಗಿ ಅಗತ್ಯವಾದ ಅಧಿಕವಾಗಿ ಬಳಕೆಯಲ್ಲಿರುವ ಯಂತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸರಕಾರದ ನಿಯಮದಂತೆ ಪ್ರಥಮ ಹಂತಗಳಲ್ಲಿ ಖರೀದಿಸಿದ ಯಂತ್ರಗಳಿಗೆ 75: 25 ರ ಅನುಪಾತದಲ್ಲಿ ಸರಕಾರ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಸಹಭಾಗಿತ್ವದ ಬಂಡವಾಳವನ್ನು ತೊಡಗಿಸಲಾಗಿದೆ. ದ್ವಿತೀಯ ಹಂತದಲ್ಲಿ ಖರೀದಿಸಿದ ಯಂತ್ರಗಳಿಗೆ 50:50ರ ಅನುಪಾತವನ್ನು ಕಾಯ್ದುಕೊಳ್ಳಲಾಗಿದೆ. 'ಕೃಷಿ ಯಂತ್ರಧಾರೆ'ಯು ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಕೊರತೆ ನಿವಾರಣೆ, ಉತ್ಪಾದನೆ ಹಾಗೂ ಉತ್ಪಾದಕತೆಯ ಹೆಚ್ಚಳ, ಕೃಷಿ ಚಟುವಟಿಕೆಗಳ ಅನುಷ್ಠಾನದೊಂದಿಗೆ ರೈತರ ಆರ್ಥಿಕ ಅಭಿವೃದ್ಧಿಯ ಗುರಿಯನ್ನು ಹೊಂದಿದೆ.

'ಕೃಷಿ ಯಂತ್ರಧಾರೆ' ಕಾರ್ಯಕ್ರಮದಡಿಯಲ್ಲಿ ಈವರೆಗೆ ರೂ.117.65 ಕೋಟಿ ಮೊತ್ತದ 13383 ಯಂತ್ರೋಪಕರಣಗಳನ್ನು 164 ಕೇಂದ್ರಗಳಿಗೆ ಒದಗಿಸಲಾಗಿದೆ. ಕೇಂದ್ರಗಳ ಪ್ರಾರಂಭದಿಂದೀಚೆಗೆ 164 'ಕೃಷಿ ಯಂತ್ರಧಾರೆ'ಗಳ ಮೂಲಕ ಇದರ ಸೇವಾಭಾಗ್ಯ ಪಡೆದ ರೈತರ ಸಂಖ್ಯೆ 214500 ಎಂಬುದು ಅಚ್ಚರಿಯ ದಾಖಲೆ.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಧ್ಯಕ್ಷರಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಕೃಷಿಕರ ಹಿತಚಿಂತನೆಯ ಉದಾತ್ತ ಧ್ಯೇಯವನ್ನು ಹೊಂದಿದವರು. ಈ ಕಾರ್ಯಕ್ರಮದ ಬಗ್ಗೆ ಅಪಾರ ಕಾಳಜಿ ಅವರಲ್ಲಿದೆ. ಡಾ. ಹೆಗ್ಗಡೆ ಖುದ್ದು 'ಕೃಷಿ ಯಂತ್ರಧಾರೆ' ಗಳಿಗೆ ಭೇಟಿ ನೀಡಿ, ಪ್ರಾದೇಶಿಕ ಮಟ್ಟದಲ್ಲಿ ಪ್ರಬಂಧಕರ ಸಭೆಯಲ್ಲೂ ಪಾಲ್ಗೊಂಡು ಪ್ರೇರಣೆ ನೀಡುತ್ತಿರುವುದು ಯೋಜನೆಯ ಯಶಸ್ವೀ ಅನುಷ್ಠಾನಕ್ಕೆ ಬೆನ್ನೆಲುಬಾಗಿದೆ. ರೈತ ಪರವಾದ ಈ ಕಾರ್ಯಕ್ರಮದ ಬಗ್ಗೆ ಅತ್ಯಂತ ಉತ್ಸಾಹ ಹೊಂದಿರುವ ಮುಖ್ಯಮಂತ್ರಿಗಳು, ಕೃಷಿ ಸಚಿವರು, ವಿವಿಧ ಹಂತದ ಜನ ಪ್ರತಿನಿಧಿಗಳು ಹಾಗೂ ಕೃಷಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಂದ ಅದರ ಯಶಸ್ಸಿನ ಬಗೆಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಕರ್ನಾಟಕ ಸರಕಾರದ ಕೃಷಿ ಸಚಿವರು ಬಹುತೇಕ ಎಲ್ಲ ಕೇಂದ್ರಗಳಿಗೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡಿರುವುದು ಶ್ಲಾಘನೀಯ.

ಸರಕಾರದ ಆದೇಶಕ್ಕನುಗುಣವಾಗಿ 'ಕೃಷಿ ಯಂತ್ರಧಾರೆ'ಗಳು ರೈತಪರವಾಗುವಂತೆ ಕಾರ್ಯಕ್ರಮದ ರೂಪುರೇಷೆ ತಯಾರಿಸುವುದು, ಜೊತೆಗೆ ಅನುಷ್ಠಾನದ ಮೇಲ್ವಿಚಾರಣೆಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೇಂದ್ರ ಕಚೇರಿಯಲ್ಲಿರುವ ಕೃಷಿ ವಿಭಾಗದ ಉಸ್ತುವಾರಿಯಲ್ಲಿ ಪ್ರತ್ಯೇಕ ವಿಭಾಗವನ್ನು ತೆರೆಯಲಾಗಿದೆ. ಇಲ್ಲಿ ದೈನಂದಿನ ನೆಲೆಯಲ್ಲಿ ಕೇಂದ್ರಗಳ ಆಗುಹೋಗುಗಳ ಪರಿಶೀಲನೆ ನಡೆಯುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಯೋಜನೆಯ ಅನುಷ್ಠಾನ, ಉಸ್ತುವಾರಿ, ಬಾಡಿಗೆ ದರ ನಿಗದಿಪಡಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲೆಗೊಂದರಂತೆ ಒಟ್ಟು 25 ಚಾಲನಾ ಸಮಿತಿಗಳನ್ನು ರಚಿಸಲಾಗಿದೆ. ಪ್ರತಿ ತಾಲೂಕಿನ ಹೋಬಳಿ ಮಟ್ಟದಲ್ಲಿ ಜನಪ್ರತಿನಿಧಿಗಳು ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ಅಲ್ಲಿಯ ರೈತರೊಂದಿಗೆ ಕಾರ್ಯಕ್ರಮ ಹಾಗೂ ಅವಶ್ಯವಿರುವ ಯಂತ್ರೋಪಕರಣಗಳ ಬಗ್ಗೆ ಚರ್ಚಿಸಿ ಪ್ರಾಥಮಿಕ ಹಂತದ ಪಟ್ಟಿಯನ್ನು ಜಿಲ್ಲಾ ಚಾಲನಾ ಸಮಿತಿ ಸಭೆಗೆ ನೀಡಲಾಗಿದೆ. ಈ ಸಮಿತಿಯು ಪ್ರಾದೇಶಿಕವಾಗಿ ಖರೀದಿಸಬೇಕಾದ ಯಂತ್ರೋಪಕರಣಗಳ ಪಟ್ಟಿ ತಯಾರಿ, ಕಾರ್ಯಕ್ರಮ ಸುಸ್ಥಿರಗೊಳಿಸುವ ದೃಷ್ಟಿಯಿಂದ ಯಂತ್ರಗಳಿಗೆ ಬಾಡಿಗೆ ನಿರ್ಧಾರ, ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆಗಳ ಜವಾಬ್ದಾರಿಯನ್ನು ಹೊಂದಿದೆ. ಸಾಮಾನ್ಯವಾಗಿ ಮಾರುಕಟ್ಟೆ ದರಕ್ಕಿಂತ ಶೇಕಡಾ 20 ರಿಂದ 30ರಷ್ಟು ಕಡಿಮೆ ಬಾಡಿಗೆ ದರದಲ್ಲಿ ಯಂತ್ರೋಪಕರಣಗಳು ರೈತರಿಗೆ ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತಿದೆ.

'ಕೃಷಿ ಯಂತ್ರಧಾರೆ'ಯಲ್ಲಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಟ್ರಾಕ್ಟರ್, ಕಲ್ಟಿವೇಟರ್, ರೊಟೋವೇಟರ್, ಹಲಿಗೆ, ಪವರ್‌ಟಿಲ್ಲರ್, ಭತ್ತ ಕಟಾವ್ ಯಂತ್ರ, ಕೋನೋವೀಡರ್, ಸಿಂಪರಣಾ ಯಂತ್ರ, ನಾಟಿ ಯಂತ್ರ, ಡೀಸೆಲ್ ಪಂಪ್, ಮರ ಹತ್ತುವ ಯಂತ್ರ ಇತ್ಯಾದಿಗಳು ಬಾಡಿಗೆಗೆ

## 'ಕೃಷಿ ಯಂತ್ರಧಾರೆ' ಬಗ್ಗೆ ರೈತರ ಅನಿಸಿಕೆಗಳು

ಕೇಂದ್ರದ ಯಂತ್ರಗಳನ್ನು ನಮ್ಮ ಜಮೀನಿನಲ್ಲಿ ಬಳಕೆ ಮಾಡಿದ್ದು ತುಂಬಾ ನೆಮ್ಮದಿ ಇದೆ. ಭೂಮಿ ಉಳುಮೆ ಮೆಕ್ಕಜೋಳ ಬಿತ್ತುವವರೆಗೂ ಕೇಂದ್ರದ ಯಂತ್ರಗಳು ನನಗೆ ಆಸರೆಯಾಗಿವೆ. ಉಳುಮೆಯು ಅನುಕೂಲವಾಗಿದೆ, ಮೆಕ್ಕೆಜೋಳವು ತುಂಬ ಉತ್ತಮವಾಗಿ ಬೆಳೆದಿದೆ ನನ್ನಂತಹ ನೂರಾರು ರೈತರು ಈ ಕೇಂದ್ರದ ಸೌಲಭ್ಯ ಪಡೆದುಕೊಳ್ಳಲಿ ಎಂಬುದು ನನ್ನ ಆಶಯ.

**– ದಾದ ಖಲಂದರ ಅಬ್ಬುಲ್ ವಾಹಿಬ,** ಮತ್ತಿಹಳ್ಳಿ

* * *

ನಾನು ರೊಟೋವೇಟರ್‌ನ್ನು ಟ್ರ್ಯಾಕ್ಟರ್ ಸಹಿತವಾಗಿ ಬಾಡಿಗೆ ಪಡೆದುಕೊಂಡಿರುತ್ತೇನೆ. ಮಿತ ದರದಲ್ಲಿ ಯಂತ್ರೋಪಕರಣಗಳು ದೊರೆಯುವುದರಿಂದ ತುಂಬಾ ಅನುಕೂಲಕರವಾಗಿರುತ್ತದೆ. ಖಾಸಗಿ ಯಂತ್ರಗಳಿಗೆ ಬೇಡಿಕೆ ನೀಡಿದ್ದರೆ ಎಕರೆಗೆ ರೂ.1600.00 ರಿಂದ ರೂ.1800.00 ವರೆಗೆ ಬಾಡಿಗೆ ನೀಡಬೇಕಾಗಿತ್ತು. ಇಲ್ಲಿಯ ಯಂತ್ರಗಳನ್ನು ಉಪಯೋಗಿಸಿದ್ದರಿಂದ 1.15 ಗಂಟೆಯಲ್ಲಿ 1 ಎಕರೆ ಉಳುಮೆ ಮಾಡಿಸಿಕೊಂಡು ರೂ.1200.00 ಬಾಡಿಗೆ ನೀಡಿದೆನು. ಇದರಿಂದ ನನಗೆ ರೂ.600 ಆರ್ಥಿಕ ಲಾಭದ ಜೊತೆಗೆ ಸಮಯದ ಉಳಿತಾಯವಾಯಿತು.

**–ಗುರುಸಿದ್ದಪ್ಪಾ,** ಮಂಟಗಣಿ

* * *

ರೈತರು ಉತ್ತಮ ಫಸಲನ್ನು ಪಡೆಯಲು ಆಳವಾದ ಉಳುಮೆಗಾಗಿ ಗಟ್ಟಿಮುಟ್ಟಾದ ಯಂತ್ರೋಪಕರಣಗಳು ಅವಶ್ಯಕ. ಯಂತ್ರೋಪಕರಣಗಳ ಕೊರತೆಯಿಂದ ಉತ್ತಮ ಫಸಲು ಬಾರದೇ ರೈತರು ಚಿಂತೆಯಲ್ಲಿ ಮುಳುಗುವಂತಾಗಿತ್ತು. ಆದರೆ ಇದೀಗ ಈ ಭಾಗದ ರೈತರ ಜಮೀನಿನಲ್ಲಿ ಮಿತ ಬಾಡಿಗೆಯೊಂದಿಗೆ ಗುಣಮಟ್ಟದ ಕೃಷಿ ಯಂತ್ರಗಳನ್ನು ಬಳಕೆ ಮಾಡಿ ಉಳುಮೆ ಮಾಡುತ್ತಿದ್ದಾರೆ. ಇದರಿಂದ ಉತ್ತಮ ಇಳುವರಿ ಬರುತ್ತಿದ್ದು ರೈತರಿಗೆ ಬಹಳ ಉಪಯೋಗವಾಗಿದೆ.

**–ಮಲ್ಲಿಕಾರ್ಜುನ ಮ. ರೊಟ್ಟಿ,** ಹಿರೇಬಾಗೇವಾಡಿ

* * *

ಪೆಟ್ರೋಲ್ ಇಂಜಿನ್ ಸ್ಪ್ರೇಯರ್‌ನ್ನು ಒಂದು ದಿನಕ್ಕೆ ಉಪಯೋಗ ಮಾಡಲು ಬೇರೆಯವರನ್ನು ಕೇಳಿದರೆ ನೀಡುತ್ತಿರಲಿಲ್ಲ. ಬಾಡಿಗೆ ಕೇಂದ್ರದಲ್ಲಿ ಈ ರೀತಿಯ ಉಪಕರಣಗಳನ್ನು ಅಲ್ಪಾವಧಿಗೆ ನೀಡುವ ಸೌಲಭ್ಯವಿರುವುದರಿಂದ ಅನುಕೂಲವಾಗಿದೆ.

ಈ ರೀತಿಯ ಯಂತ್ರಗಳ ಸದುಪಯೋಗವನ್ನು ಎಲ್ಲಾ ರೈತರು ಪಡೆಯಬೇಕು. ಹಾಗೆ ಬಾಡಿಗೆ ಸೇವಾ ಕೇಂದ್ರವು ತಮ್ಮದೇ ಎಂಬ ಭಾವನೆಯಿಂದ ಯಂತ್ರಗಳನ್ನು ಪ್ರತಿಯೊಬ್ಬ ರೈತರು ಉಪಯೋಗ ಮಾಡಿಕೊಂಡಲ್ಲಿ, ಕೃಷಿ ಯಂತ್ರೋಪಕರಣಗಳ ಬಾಡಿಗೆ ಸೇವಾಕೇಂದ್ರವು ಸ್ಥಿರವಾಗಿ ಉಳಿಯುವುದು.

**–ಚನ್ನಪ್ಪ. ಗುಂಜಳ,** ಕಡಕೋಳ

ಲಭಿಸುತ್ತವೆ. ಸರಕಾರದ ನೀತಿಯನ್ವಯ ಕೃಷಿ ಯಂತ್ರಧಾರೆ ಕಾರ್ಯಕ್ರಮವು ಇದೀಗ ಐದು ವರ್ಷಗಳ ಕಾಲಮಿತಿಯ ಕಾರ್ಯಕ್ರಮವಾಗಿದ್ದು, ಕೇಂದ್ರಗಳನ್ನು ಸುಸ್ಥಿರತೆಯೊಂದಿಗೆ ನಿರಂತರವಾಗಿ ಮುನ್ನಡೆಸಿಕೊಂಡು ಹೋಗುವ ಅವಶ್ಯಕತೆ ಹಾಗೂ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಸರಕಾರ ಹಾಗೂ ಕೃಷಿ ಇಲಾಖೆ ಚಿಂತನೆ ನಡೆಸಬೇಕಿದೆ.

**'ಕೃಷಿ ಯಂತ್ರಧಾರೆ'ಬಗ್ಗೆ ಗಣ್ಯರ ಅನಿಸಿಕೆ**

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಕಾಲದಲ್ಲಿ ತಮ್ಮ ಕೃಷಿ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು 'ಕೃಷಿ ಯಂತ್ರಧಾರೆ' ಕಾರ್ಯಕ್ರಮ ವರದಾನವಾಗಿದೆ. ರಾಜ್ಯ ಸರಕಾರವು ಕ್ಷೇತ್ರದ ಮೇಲಿನ ಸದಭಿಪ್ರಾಯದಿಂದ ಇದನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ನಮ್ಮ ಯೋಜನೆಗೆ ನೀಡಿದ್ದು ಮಾದರಿಯಾಗುವಂತೆ ನಿರ್ವಹಿಸಬೇಕಾಗಿದೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ಕಾರ್ಯಕ್ರಮವನ್ನು ಧರ್ಮಸ್ಥಳ ಯೋಜನೆಯು ಮಾದರಿ ಎನ್ನುವ ರೀತಿಯಲ್ಲಿ ಮುನ್ನಡೆಸುತ್ತಿದೆ ಎಂದು ಅಭಿಪ್ರಾಯಪಟ್ಟಿರುವುದರಿಂದ ನಮ್ಮ ಜವಾಬ್ದಾರಿ ಇನ್ನಷ್ಟು ಹೆಚ್ಚಿದೆ. ಕೃಷಿಕ ಸಮುದಾಯಕ್ಕೆ ಕೃಷಿ ಯಂತ್ರೋಪಕರಣಗಳ ಪರಿಚಯ ಮಾಡಿಕೊಡುವುದರ ಜೊತೆಗೆ ಮಾರುಕಟ್ಟೆ ದರಕ್ಕಿಂತ ಕಡಿಮೆ ಬಾಡಿಗೆಗೆ ರೈತರಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು, ಸಣ್ಣ ಹಾಗೂ ಅತಿ ಸಣ್ಣ ರೈತರಿಗೂ ಕೃಷಿ ಯಾಂತ್ರಿಕರಣದ ಸೌಲಭ್ಯ ಒದಗಿಸುವುದು ಕಾರ್ಯಕ್ರಮದ ಪ್ರಮುಖ ಆಶಯವಾಗಿದೆ. ಕೃಷಿ ಕ್ಷೇತ್ರದ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಸರಕಾರ ಈ ಕಾರ್ಯಕ್ರಮವನ್ನು ಜಾರಿಗೆ ತಂದಿದೆಯೇ ವಿನಃ ಯಾವುದೇ ಲಾಭದ ದೃಷ್ಟಿಯಿಂದ ಅಲ್ಲ. ಎನ್ನುವ ಒಳ್ನುಡಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ.ವೀರೇಂದ್ರ ಹೆಗ್ಗಡೆಯವರದು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ದೇಶದಲ್ಲಿಯೇ ಅತ್ಯಂತ ಮಾದರಿ ಮತ್ತು ಪಾರದರ್ಶಕ ಸೇವಾ ಸಂಸ್ಥೆಯಾಗಿದ್ದು, ಸರ್ಕಾರದ ಮಹತ್ವಾಕಾಂಕ್ಷೆಯ 'ಕೃಷಿ ಯಂತ್ರಧಾರೆ' ಕಾರ್ಯಕ್ರಮವನ್ನು ಸದ್ರಿ ಸಂಸ್ಥೆಯೊಂದಿಗೆ ಕೈಜೋಡಿಸಿ ಜನತೆಗೆ ತಲುಪಿಸಲಾಗುತ್ತಿದೆ ಎನ್ನುತ್ತಾರೆ ರಾಜ್ಯದ ಕೃಷಿ ಸಚಿವರಾದ ಕೃಷ್ಣ ಬೈರೇಗೌಡರು.

ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪರಮಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಎಲ್ಲಾ ಕಾರ್ಯಕ್ರಮಗಳು ಜನಪರವಾಗಿರುವುದರಿಂದ ಕರ್ನಾಟಕ ಸರ್ಕಾರ ಕೃಷಿ ಯಂತ್ರಧಾರೆ ಕಾರ್ಯಕ್ರಮದ ಅನುಷ್ಠಾನವನ್ನು ಸಂಸ್ಥೆಯ ಸಹಯೋಗದೊಂದಿಗೆ ಮಾಡುತ್ತಿದೆ. ಇದು ಮಾಜಿ ಸಣ್ಣ ಕೈಗಾರಿಕಾ ಹಾಗೂ ಬೆಳಗಾವಿ ಉಸ್ತುವಾರಿ ಸಚಿವ ಶ್ರೀ ಸತೀಶ ಜಾರಕಿಹೊಳಿ ಇವರ ಅಭಿಪ್ರಾಯ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಆಯೋಜಿಸುವ ಕಾರ್ಯಕ್ರಮಗಳು ಪ್ರಾಮಾಣಿಕತೆ, ಶಿಸ್ತು ಮತ್ತು ಜನ ಸಾಮಾನ್ಯರಿಗೆ ಅಗತ್ಯವಿರುವ ಮಾಹಿತಿಯನ್ನು ತಲುಪಿಸುವಲ್ಲಿ ಬದ್ಧತೆಯನ್ನು ಹೊಂದಿರುತ್ತವೆ. ಹಾಗಾಗಿ ಕರ್ನಾಟಕ ಸರಕಾರವು 'ಕೃಷಿ ಯಂತ್ರಧಾರೆ' ಕಾರ್ಯಕ್ರಮವನ್ನು ಯೋಜನೆಯ ಸಹಯೋಗದೊಂದಿಗೆ ಅನುಷ್ಠಾನ ಮಾಡುತ್ತಿದೆ. ಎನ್ನುತ್ತಾರೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವೆಂಕಟರಾಮರಡ್ಡಿ ಪಾಟೀಲ.





# ಬರಡು ನೆಲದಲ್ಲಿ ಹಸಿರುಕ್ಕಿಸಿದ ರೈತ ಭಾಷುಸಾಬ ಗಡಾದ್

▪ ಪ್ರಾಣೇಶ ಪೂಜಾರ ಗಿಣಿಗೇರಾ

**ಹನಿ ನೀರಾವರಿ ಮೂಲಕ ಸಮೃದ್ಧ ಬೆಳೆ! ವರ್ಷಕ್ಕೆ 4–5 ಲಕ್ಷ ಲಾಭ! ಕೃಷಿಯಲ್ಲಿಯೇ ಬದುಕು ಕಟ್ಟಿಕೊಂಡ ಮುಸ್ಲಿಂ ಕುಟುಂಬವಿದು.**

ಅರವತ್ತಕ್ಕೆ ಅರಳು ಮರಳು ಎನ್ನುತ್ತಾರೆ... ಆದರೆ ಇಲ್ಲೊಬ್ಬ ರೈತ ಅರವತ್ತು ದಾಟಿದರೂ ಯುವಕರೂ ನಾಚುವಂತೆ ಕೃಷಿಯಲ್ಲಿ ತೊಡಗಿಕೊಂಡು ಆದರ್ಶ ಜೀವನ ನಡೆಸುತ್ತಿದ್ದಾರೆ. ಇವರ ಹೆಸರು ಭಾಷುಸಾಬ್ ಗಡಾದ್, ಊರು ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮ. ಇವರ ತೋಟವನ್ನೊಮ್ಮೆ ನೋಡಿದರೆ 'ಭೇಷ್'! ಅನ್ನಲೇಬೇಕು.

ಕೊಪ್ಪಳ ಬಯಲುಸೀಮೆ ಪ್ರದೇಶ. ತುಂಗಭದ್ರ ಡ್ಯಾಂ ಇದೆ ಅನ್ನೋದಷ್ಟೆ ಹೆಗ್ಗಳಿಕೆ. ಆದರೆ ತುಂಗಭದ್ರ ನದಿಯಿಂದ ಕೊಪ್ಪಳ ಮತ್ತು ಗಂಗಾವತಿ ತಾಲೂಕಿನ ಕೆಲವೇ ಹಳ್ಳಿಗಳ ರೈತರಿಗಷ್ಟೇ ಅನುಕೂಲವಾಗಿದೆ. ಮಿಕ್ಕೆಲ್ಲ ತಾಲೂಕಿನ ರೈತರು ಬರೀ ಒಣಬೇಸಾಯವನ್ನೆ ಅವಲಂಬಿಸಿದ್ದಾರೆ. ಮಳೆಯಾದರೆ ಬೆಳೆ, ಇಲ್ಲವಾದರೆ ಗುಳೆ; ಇಂತಹ ಪರಿಸ್ಥಿತಿಯ ಮಧ್ಯೆಯು ಭಾಷುಸಾಬ್ ನಿರಾಶೆ ಹೊಂದದೆ ಕೊಳವೆ ಬಾವಿ ಕೊರೆಸಿ ಹನಿ ನೀರಾವರಿ ಮೂಲಕ ಬದುಕನ್ನು ಹಸನಾಗಿಸಿಕೊಂಡಿದ್ದಾರೆ.

**ಮೂರು ಎಕರೆ ಪ್ರದೇಶದಲ್ಲಿ ದಾಳಿಂಬೆ :** 20 ವರ್ಷಗಳಿಂದ 'ಮೆಕ್ಯಾನಿಕ್' ನಾಗಿ ಕೆಲಸ ಮಾಡುತ್ತಿದ್ದ ಭಾಷುಸಾಬ್ ಅಲ್ಪ–ಸ್ವಲ್ಪ ಹಣ ಉಳಿಸಿ ಮೂರು ಎಕರೆ ಜಮೀನು ಖರೀದಿಸಿದರು. ಅದು ಗರಸು ಭೂಮಿ (ಕಲ್ಲು ಮಿಶ್ರಿತ ನೆಲ) ಆದರೆ ಈ ನೆಲದಲ್ಲಿ ಯಾವುದೇ ಬೆಳೆ ಬೆಳೆದರೂ ಸರಿಯಾಗಿ ಬೆಳೆಯುತ್ತಿರಲಿಲ್ಲ. ಇದನ್ನ ಮನ ಗಂಡ ಭಾಷುಸಾಬ್ ಮೆಕ್ಯಾನಿಕ್ ಕೆಲಸ ಬಿಟ್ಟು ಈ ನೆಲದಲ್ಲಿಯೇ ಏನಾದರೂ ಬೆಳೆ ತೆಗೆಯಲೇಬೇಕೆಂದು ತೀರ್ಮಾನಿಸಿ ಕೊಳವೆ ಬಾವಿ ಕೊರೆಸಿದರು. ಕೊಳವೆ ಬಾವಿಯಲ್ಲಿ





ಎರಡು ಇಂಚು ನೀರು ಸಿಕ್ಕಿತು. ಹನಿ ನೀರಾವರಿ ಮೂಲಕ ಮೂರು ಎಕರೆ ಪ್ರದೇಶದಲ್ಲಿ ದಾಳಿಂಬೆ, ತೆಂಗು, ಮಾವು, ಚಿಕ್ಕು ಪೇರಲ, ಹೆಬ್ಬೇವು ಗಿಡ, ಬೆಳೆಸಿ ಉತ್ತಮ ಫಸಲು ಪಡೆಯುತ್ತಿದ್ದಾರೆ. ಕಟಾವು ಮಾಡಿದ ಹಣ್ಣುಗಳನ್ನು ಬೆಂಗಳೂರು ಮಾರುಕಟ್ಟೆಗೆ ಕಳಿಸುತ್ತಾರೆ. ಪ್ರತಿ ವರ್ಷ ಏನಿಲ್ಲವೆಂದರೂ ಹಣ್ಣುಗಳ ಮಾರಾಟದಿಂದ 4 ರಿಂದ 5 ಲಕ್ಷ ರೂಪಾಯಿಗಳ ಆದಾಯ ಸಂಪಾದಿಸುತ್ತಾರೆ. ಇಂದು ಇವರ ತೋಟ ನೋಡಿದರೆ ಅರಣ್ಯವೇನೋ ಎಂಬಂತೆ ತೋರುತ್ತದೆ. ಇವರ ಕಾಯಕದಲ್ಲಿ ಇವರ ಪತ್ನಿ ಹುಸೇನ್‌ಬಿ ಅವರ ಸಾಥ್ ಇದೆ.

**ಜೈವಿಕ ಗೊಬ್ಬರ ಬಳಕೆ:–** ಭಾಷುಸಾಬ್‌ರು ರಾಸಾಯನಿಕ ಗೊಬ್ಬರದ ಬದಲಾಗಿ ಸಾವಯವ ಗೊಬ್ಬರ ಬಳಸುತ್ತಾರೆ. ಅದಕ್ಕಾಗಿ ಹೊಲದಲ್ಲಿಯೇ ತೊಟ್ಟಿ ನಿರ್ಮಿಸಿ ಅದರಲ್ಲಿ ಕಸ–ಕಡ್ಡಿ ಹಾಕಿ ಅದಕ್ಕೆ ನೀರು ಮಿಶ್ರಣ ಮಾಡುತ್ತಾರೆ. ಆ ನೀರನ್ನು ಫಿಲ್ಟರ್ ಮಾಡಿ ಮತ್ತೊಂದು ಗುಂಡಿಯಲ್ಲಿ ಸಂಗ್ರಹಿಸುತ್ತಾರೆ. ಈ ನೀರನ್ನು ಡ್ರಿಪ್ ಮೂಲಕ ಎಲ್ಲಾ ಗಿಡಗಳಿಗೂ ಸರಬರಾಜು ಮಾಡುತ್ತಾರೆ. ಇದರಿಂದ ಹಣ್ಣುಗಳಿಗೆ ಸತ್ವ ಸಿಕ್ಕು ಚೆನ್ನಾಗಿ ಬೆಳೆಯುತ್ತವೆ. ಅಲ್ಲದೆ ಬಾಹ್ಯವಾಗಿ ಗಿಡಗಳಿಗೆ ಕೀಟನಾಶಕ ಸಿಂಪಡಿಸಲು ಟ್ರ್ಯಾಕ್ಟರ್ ಬಳಸುತ್ತಾರೆ. ಭಾಷುಸಾಬ್ ಟ್ರ್ಯಾಕ್ಟರ್ ನಡೆಸಿದರೆ, ಇವರ ಪತ್ನಿ ಹಿಂದೆ ಕೂತು ಸ್ಪ್ರೇ ಮೂಲಕ ಔಷಧಿ ಸಿಂಪಡಿಸುತ್ತಾರೆ.

**ರಕ್ಷಣೆಗಾಗಿ 'ಅಟ್ಟ' ತಂತಿಬೇಲಿ:–** ತೋಟದ ರಕ್ಷಣೆಗಾಗಿ ಸುತ್ತಲೂ ತಂತಿಬೇಲಿ ಹಾಕಿಸಿದ್ದಾರೆ. ಇದರಿಂದ ದನ–ಕರು–ಜನರ ಕಾಟ ತಪ್ಪಿದೆ. ಜೊತೆಗೆ ರಾತ್ರಿಯೆಲ್ಲಾ ಕಾವಲು ಕಾಯಲು ಎತ್ತರವಾಗಿ 'ಅಟ್ಟ' ನಿರ್ಮಿಸಿಕೊಂಡಿದ್ದಾರೆ. ಸುಮಾರು 30 ಅಡಿ ಎತ್ತರದ ಈ ಅಟ್ಟವನ್ನು ಭಾಷುಸಾಬರು ಸರಸರನೇ ಏರಿ ಇಳಿಯುತ್ತಾರೆ.

**'ಯೋಗ' ಇವರ ಆರೋಗ್ಯದ ಗುಟ್ಟು;** 63ರ ಇಳಿ ವಯಸ್ಸಿನಲ್ಲಿ ಭಾಷುಸಾಬರು ಈಗಲೂ ಗಟ್ಟಿ. ಇದಕ್ಕೆ ಕಾರಣ ಯೋಗ. ಪ್ರತಿ ನಿತ್ಯ 4ಕ್ಕೆ ಏಳುವ ಅಭ್ಯಾಸ ಮಾಡಿಕೊಂಡಿರುವ ಇವರು ನಮಾಜ್ ಮುಗಿಸಿ 1 ಗಂಟೆ ಯೋಗ ಮಾಡುತ್ತಾರೆ. ನಂತರ ತೋಟದ ಕೆಲಸದಲ್ಲಿ ತೊಡಗುತ್ತಾರೆ. ಇವರ ಮಕ್ಕಳಲ್ಲಿ ಇಬ್ಬರು ಸರಕಾರಿ ನೌಕರಿಯಲ್ಲಿದ್ದಾರೆ. ಮತ್ತೊಬ್ಬರು ಗ್ಯಾರೆಜ್ ನಡೆಸುತ್ತಾರೆ. ಆದರೆ ಇವರು ಮಾತ್ರ ಕೃಷಿಯಲ್ಲಿ ತೊಡಗಿದ್ದಾರೆ. 'ಒಕ್ಕಲುತನ್ದಾಗ ಸಿಗುವಷ್ಟು ಸಂತೃಪ್ತಿ ಬೇರ್‍ಯಾವ ಕೆಲ್ಸದಾಗ ಸಿಗಂಗಿಲ್ರಿ. ಇದು ಕಷ್ಟದ, ಶ್ರಮದ ಬದುಕು; ಆದ್ರ ಇದರಲ್ಲಿ ಸುಖ ಅಡಗಿದೆ" ಎನ್ನುತ್ತಾರೆ ಭಾಷುಸಾಬ.

ರೈತರ ಆತ್ಮಹತ್ಯೆಗೆ ಆತಂಕ ವ್ಯಕ್ತಪಡಿಸುವ ಇವರು, ಇದಕ್ಕೆ "ಆಡಳಿತ ಮತ್ತು ಈಗಿನ ಭ್ರಷ್ಟ ಮಾರುಕಟ್ಟೆ ವ್ಯವಸ್ಥೆ ಕಾರಣವೆನ್ನುತ್ತಾರೆ. ಚೀನಾದಲ್ಲಿ ಕೃಷಿ ಅಭೂತಪೂರ್ವ ಬೆಳವಣಿಗೆ ಕಂಡಿದೆ. ಅಲ್ಲಿ ಕೃಷಿಕರು ಬೆಳೆದ ಬೆಳೆಯನ್ನು ಸರಕಾರವೇ ಖರೀದಿಸಿ ವೈಜ್ಞಾನಿಕ ಬೆಲೆ ನೀಡುತ್ತೆ. ಇದರಿಂದ ಅಲ್ಲಿನ ರೈತರ ಬದುಕು ಹಸನಾಗಿದೆ. ಆದ್ದರಿಂದ ಸರಕಾರ ರೈತರಿಗೆ ಅದು–ಇದು ಅಂತ ಸಬ್ಸಿಡಿ ಕೊಡುವುದರ ಬದಲು 'ನೀರಾವರಿ' ಯೋಜನೆಗಳಿಗೆ ಆದ್ಯತೆ ನೀಡಿ ರೈತರಿಗೆ ಅನುಕೂಲ ಕಲ್ಪಿಸಲಿ. ಹಾಗೆಯೇ ಮಾರುಕಟ್ಟೆ ವ್ಯವಸ್ಥೆಯಲ್ಲಿ ಚೀನಾ ಮಾದರಿ ಅನುಸರಿಸಲಿ" ಎನ್ನುವುದು ಇವರ ಅಭಿಪ್ರಾಯವಾಗಿದೆ.

ಯಾವುದೇ ಕೃಷಿ ಮೇಳವಿದ್ದಲ್ಲಿ ಅಲ್ಲಿಗೆ ಧಾವಿಸಿ ವಿಷಯಗಳನ್ನು ತಿಳಿದುಕೊಂಡು ಅದನ್ನ ಕೃಷಿಯಲ್ಲಿ ಅಳವಡಿಸಿಕೊಳ್ಳುತ್ತಾರೆ. 'ಕಾಯಕವೇ ಕೈಲಾಸ'ವೆಂಬ ಬಸವಣ್ಣನವರ ನುಡಿಯಲ್ಲಿ ಅಪಾರ ನಂಬಿಕೆಯುಳ್ಳ ಇವರು 'ಉಸಿರಿರೊವರಿಗೂ ದುಡಿಬೇಕು ದುಡಿದು ತಿನ್ನಬೇಕು ಇದೇ ಬದುಕು' ಎನ್ನುವುದು ಇವರ ಮೂಲ ಮಂತ್ರವಾಗಿದೆ. ಇವರನ್ನು 97413 38993 ಸಂಖ್ಯೆಯಲ್ಲಿ ಸಂಪರ್ಕಿಸಬಹುದು.





# ಒಂದು ಎಕರೆಯಲ್ಲೇ ಬಂಪರ್ ಟೊಮ್ಯಾಟೋ ಬೆಳೆದ ಮಾದರಿ ರೈತ

■ ಜೆ. ಚಂದ್ರಕಾಂತ್
ಹಿರಿಯ ಸಹಾಯಕ ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಅಫಜಲಪುರ ತಾಲೂಕಿನ ಅಳ್ಳಗಿ(ಬಿ) ಗ್ರಾಮದ ರೈತ ಶಿವಶರಣಪ್ಪ ಗುರಪ್ಪ ಹಾಳಕಿ ನಾಲ್ಕೆಕರೆಯಲ್ಲಿ ಬೆಳೆಯುವ ಟೊಮ್ಯಾಟೋ ಬೆಳೆಯನ್ನು ಆರು ತಿಂಗಳ ಹಿಂದೆ ಕೇವಲ ಒಂದೇ ಎಕರೆಯಲ್ಲಿ ಬೆಳೆದು ಸುಮಾರು ಏಳು ಲಕ್ಷ ರೂ. ಗಿಂತ ಅಧಿಕ ಲಾಭ ಪಡೆದಿದ್ದಾರೆ. ಇದಕ್ಕೆ ಕೃಷಿ ಭಾಗ್ಯ ಯೋಜನೆಯ ಪಾಲಿಹೌಸ್ ಘಟಕವೇ ಮುಖ್ಯ ಕಾರಣ. ಈ ರೈತ ತಮ್ಮ ಒಂದು ಎಕರೆ ಜಮೀನಿನಲ್ಲಿ 28.40 ಲಕ್ಷ ರೂ. ವೆಚ್ಚದಿ ಪಾಲಿಹೌಸ್ ಘಟಕ ನಿರ್ಮಿಸಿಕೊಂಡು ಸುಮಾರು ಹತ್ತುಸಾವಿರ ಟೊಮ್ಯಾಟೋ ಗಿಡಗಳನ್ನು ಬೆಳೆದಿದ್ದಾರೆ. ಇದಕ್ಕಾಗಿ ತೋಟಗಾರಿಕೆ ಇಲಾಖೆಯಿಂದ ಒಟ್ಟು 17 ಲಕ್ಷ ರೂ. ಸಹಾಯಧನ ಪಡೆದಿದ್ದಾರೆ.

ಬದುವಿನಿಂದ ಬದುವಿಗೆ 5 ಅಡಿ ಅಂತರದ 65 ಸಾಲುಗಳಿದ್ದು, ಗಿಡದಿಂದ ಗಿಡಕ್ಕೆ ಒಂದುವರೆ ಅಡಿ ಅಂತರವಿಟ್ಟು 30 ಟ್ರಿಪ್ ಕೊಟ್ಟಿಗೆ ಮತ್ತು ಕುರಿ ಮತ್ತು ಬೇವಿನ ಗೊಬ್ಬರ ಹಾಕಿರುತ್ತಾರೆ. ಹನಿ ನೀರಾವರಿ ಪದ್ಧತಿಯಿಂದ ಪ್ರತಿದಿನ 5 ಗಂಟೆ ನೀರು ಹಾಯಿಸಿ ಹುಳಗಳ ನಿಯಂತ್ರಣಕ್ಕಾಗಿ ಅಂಟಿನ್ ಪ್ಲಾಸ್ಟಿಕ್ ಬ್ಯಾಗ್ ಅಳವಡಿಸಿದ್ದಾರಲ್ಲದೇ 600 ಚೆಂಡು ಹೂಗಳನ್ನು ಸಹ ಬೆಳೆದಿದ್ದಾರೆ.

ಪ್ರತಿಯೊಂದು ಟೊಮ್ಯಾಟೋ ಗಿಡದ ಬುಡಕ್ಕೆ ಮಲ್ಚಿಂಗ್ ಹೊದಿಕೆ ಅಳವಡಿಸಿದ್ದಾರೆ. ಕೇವಲ 4 ಜನ ಆಳುಗಳ ನೆರವಿನಿಂದ ಸದರಿ ಬೆಳೆಯ ನಿರ್ವಹಣೆ ಮಾಡಿ ಸುಮಾರು 20 ಸಲ ಬೆಳೆ ಕಟಾವು ಮಾಡಿ 7 ಲಕ್ಷ ರೂ. ಹಾಗೂ ಚೆಂಡು ಹೂವಿನ ಬೆಳೆಯಿಂದಲೂ 45000 ರೂ. ಪಡೆದಿದ್ದಾರೆ.

ರೈತರ ಮಗ ಅರವಿಂದ ಹಾಳಕಿ ಮಹಾರಾಷ್ಟ್ರದ ಸೋಲಾಪುರ, ಪುಣೆ, ಲಾತೂರ್‌ಗಳಿಗೆ ಭೇಟಿ ನೀಡಿ ಪಾಲಿಹೌಸಿನಲ್ಲಿ ಟೊಮ್ಯಾಟೋ ಬೆಳೆಯುವ ಮಾಹಿತಿ ಪಡೆದುಕೊಂಡು ತಮ್ಮ ಜಮೀನಿನಲ್ಲಿ ಬೆಳೆದು ಯಶಸ್ವಿಯಾಗಿದ್ದಾರೆ. ಕಡಿಮೆ ಆಳು, ಕಡಿಮೆ ಕೀಟನಾಶಗಳ ಮತ್ತು ಕಡಿಮೆ ನೀರಿನ ಬಳಕೆಯಿಂದ ನಾಲ್ಕೆಕರೆಯ ಟೊಮ್ಯಾಟೋ ಬೆಳೆಯನ್ನು ಕೇವಲ ಒಂದೆಕರೆಯಲ್ಲೇ ಬೆಳೆಯಬಹುದೆಂದು ಸಾಬೀತುಪಡಿಸಿ ಇತರ ರೈತರಿಗೆ ಮಾದರಿಯಾಗಿದ್ದಾರೆ. "ಹೊರಗಿನ ವಾತಾವರಣದಲ್ಲಿ ಈ ತರಹ ಟೊಮ್ಯಾಟೋ ಬೆಳೆ ಬೆಳೆಯಲು ಸಾಧ್ಯವಿಲ್ಲ" ಎಂದು ರೈತರ ಮಗ ಅರವಿಂದ ಹಾಳಕಿಯವರ ಅಭಿಮತ. ಸದರಿ ರೈತರು ಮಾದರಿ ಯೋಜನೆಯಾಗಿ ತಮ್ಮ ಜಮೀನಿನಲ್ಲಿ ಐದು ಅಶ್ವಶಕ್ತಿ ಸಾಮರ್ಥ್ಯದ ಸೋಲಾರ ಪಂಪ್‌ಸೆಟ್ ಸಹ ಅಳವಡಿಸಿಕೊಂಡಿರುತ್ತಾರೆ. ಇದರಿಂದ 5 ಗಂಟೆಗಳ ಕಾಲ ಈ ಪಂಪ್‌ಸೆಟ್ಟಿನಿಂದ ಬೆಳೆಗಳಿಗೆ ವಿದ್ಯುತ್ ಕಡಿತಗೊಂಡರೂ ವಿವಿಧ ಬೆಳೆಗಳಿಗೆ ನೀರುಣಿಸಬಹುದು.



# ಮರಿಯಮ್ಮನಹಳ್ಳಿ ರಂಗಸಿರಿ

## ಡಾ॥ ಕೆ.ನಾಗರತ್ನಮ್ಮ



■ *ಲಲಿತಾ ಕೆ. ಹೊಸಪ್ಯಾಟಿ*

**ಕ**ರ್ನಾಟಕ ಸರ್ಕಾರದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ವಾಲ್ಮೀಕಿ ಪ್ರಶಸ್ತಿಯ ಪ್ರಸಕ್ತ ಸಾಲಿನ ಪುರಸ್ಕೃತರು ಮರಿಯಮ್ಮನಹಳ್ಳಿಯ ಡಾಕ್ಟರ್ ಕೆ. ನಾಗರತ್ನಮ್ಮನವರು. ವಿಶ್ವವಿದ್ಯಾಲಯದ ಡಾಕ್ಟರೇಟ್ ಗೌರವಕ್ಕೆ ಪಾತ್ರರಾದ ಗ್ರಾಮೀಣ ರಂಗಭೂಮಿಯ ಪ್ರಥಮ ವೃತ್ತಿ ರಂಗ ಕಲಾವಿದೆ ಎಂಬ ಹೆಗ್ಗಳಿಕೆಯೂ ಇವರದಾಗಿದೆ. ರಾಜ್ಯೋತ್ಸವ, ಕರ್ನಾಟಕ ನಾಟಕ ಅಕಾಡೆಮಿ, ಸಾವಿತ್ರಮ್ಮ ದೇಜಗೌ, ನಾಡಚೇತನ, ಭಾರ್ಗವ, ವಿಶ್ವೇಶ್ವರಯ್ಯ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳಿಗೂ ಅವರು ಭಾಜನರಾಗಿದ್ದಾರೆ.

ಹೈದರಾಬಾದ್ ಕರ್ನಾಟಕದ ಬಳ್ಳಾರಿ, ಕೊಪ್ಪಳ, ರಾಯಚೂರು, ದಾವಣಗೆರೆ, ಗದಗ, ಆಂಧ್ರಪ್ರದೇಶ ಗಡಿನಾಡಿನ ಹತ್ತಾರು ಹಳ್ಳಿಗಳು ಪ್ರಮುಖವಾಗಿ ಸೇರಿದಂತೆ ಕರ್ನಾಟಕದ ವಿವಿಧೆಡೆ ಕಳೆದ 50 ವರ್ಷಗಳಿಂದ ನೂರಾರು ನಾಟಕಗಳ ಸುಮಾರು ಹದಿಮೂರು ಸಾವಿರ ಪ್ರದರ್ಶನಗಳಲ್ಲಿ ನಿರಂತರ ನಟಿಸಿರುವ ಪ್ರತಿಭಾವಂತ ನಟಿ ಮರಿಯಮ್ಮನಹಳ್ಳಿ ನಾಗರತ್ನಮ್ಮನವರು.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿ ಕೃಷಿಕ ಕುಟುಂಬದ ಮಾರೆಪ್ಪ– ಸಿದ್ದಮ್ಮ ದಂಪತಿಗೆ 1952 ರಲ್ಲಿ ಜನಿಸಿದ ನಾಗರತ್ನ ಎಸ್ಎಸ್ಎಲ್ಸಿ ವರೆಗೆ ಪ್ರತಿಭಾವಂತ ವಿದ್ಯಾರ್ಥಿಯಾಗಿ ಅಭ್ಯಾಸ ಮಾಡಿದ್ದರೂ– ಮುಂದೆ ರಂಗಭೂಮಿಯನ್ನೇ ಅವರು ಆಯ್ಕೆ ಮಾಡಿಕೊಂಡು ಆ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದರು.

ಮರಿಯಮ್ಮನಹಳ್ಳಿ ನಾಟಕಗಳಿಗೆ ಹೆಸರುವಾಸಿ. ಬದುಕಿನ ಅನಿವಾರ್ಯತೆಯಿಂದ ಇವರು ನಾನು ನಾಟಕ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡರು. ಅಪ್ಪ ಮಾರಪ್ಪನಿಗೆ ದಲಾಲಿ ಅಂಗಡಿಯ ಗುಮಾಸ್ತರ ಕೆಲಸ. ಐವರು ತಂಗಿಯರು, ಒಬ್ಬ ತಮ್ಮ. ಮನೆಯಲ್ಲಿ ದೊಡ್ಡವಳು. ಇದ್ದ ತುಂಡು ಹೊಲದಲ್ಲಿ ಅವ್ವ ದುಡಿಯುತ್ತಿದ್ದಳು, ಜತೆಗೆ ಬೇರೆಯವರ ಹೊಲದಲ್ಲಿ ಕೂಲಿಗೆ ಹೋಗುತ್ತಿದ್ದಳು. ವಾರದಲ್ಲಿ ಐದು ದಿನ ಶಾಲೆಗೆ, ಎರಡು ದಿನ ಕೂಲಿಗೆ ಹೋಗುತ್ತಿದ್ದರು ನಾಗರತ್ನ. ಶಾಲೆಯಲ್ಲಿ ಕೊಟ್ಟ ಎರಡು ರೊಟ್ಟಿಯನ್ನು ತಮ್ಮ ತಂಗಿಯರಿಗೆ ಹಂಚಿ ತಿನ್ನುತ್ತಿದ್ದರು. ಕೆಲವೊಮ್ಮೆ ಅವರಿಗೇ ಉಳಿಯುತ್ತಿರಲಿಲ್ಲ. ಅರೆ ಉಪವಾಸವೇ ಗತಿಯಾಗುತ್ತಿತ್ತು.

ಅಪ್ಪನ ಬಯಲಾಟದಲ್ಲಿ ಆಗಾಗ ಮುಖಕ್ಕೆ ಬಣ್ಣ ಹಚ್ಚುತ್ತಿದ್ದರು. ಚಿಕ್ಕವಳಿದ್ದಾಗಿನಿಂದಲೂ ಹಾಡು, ನೃತ್ಯ ಎಂದರೆ ಇಷ್ಟ. ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅನೇಕ ಬಾರಿ ಬಹುಮಾನ ಪಡೆಯುತ್ತಿದ್ದರು. ಮರಿಯಮ್ಮನಹಳ್ಳಿಯ ಮೈಲಾರಪ್ಪ ಎಂಬುವರು 1965 ರಲ್ಲಿ 'ಸಂಸಾರ' ಎಂಬ ನಾಟಕ ಮಾಡಿಸಿದರು. ಅದರಲ್ಲಿ ಅಭಿನಯಿಸಿದರು. ನಾಟಕ ನೋಡಿದ ಅಪ್ಪ ಮೆಚ್ಚಿಕೊಂಡು 'ನಾಟಕದಿಂದ ಮನೆ ನಡೆಸಬಹುದು ಮಗಳೆ... ತಮ್ಮ ತಂಗಿಯರನ್ನು ಓದಿಸಬಹುದು...' ಎಂದರು. ಅಪ್ಪ ಅಂಗಡಿಯಲ್ಲಿ ಲೆಕ್ಕ ತಪ್ಪು ಮಾಡಿದನೆಂಬ ನೆಪದ ಮೇಲೆ ಕೆಲಸ ಹೋಯಿತು. ಆತನಿಗೆ ಕಾಯಿಲೆ ಬೇರೆ. ಅಪ್ಪನಿಗೆ ಆ ಕಾಲಕ್ಕೆ ದಲಾಲಿ ಅಂಗಡಿಯಲ್ಲಿ ತಿಂಗಳಿಗೆ ನೂರು ರೂಪಾಯಿ ಪಗಾರ. ನಾಟಕಕ್ಕೆ ಹೋದರೆ ಒಂದು ನಾಟಕಕ್ಕೆ 25 ರೂ. ಸಂಭಾವನೆ ಸಿಗುತ್ತಿತ್ತು. ಹಾಗಾಗಿ ನಾಟಕಗಳಿಗೆ ಹೋಗುವುದೇ ಚಲೋ ಎನಿಸಿತು. ಬಂಡವಾಳವಿಲ್ಲದ ಕಸಬು. ನಾಲ್ಕು ನಾಟಕಕ್ಕೆ ಹೋದರೆ ಅಪ್ಪನ ತಿಂಗಳ ಹಣದಷ್ಟು ಮನೆಗೆ ತರಬಹುದು. ಹಾಗಾಗಿ ಶಾಲೆಗೆ ಚಕ್ಕರ್ ಕೊಟ್ಟು ನಾಟಕವಾಡಲು ಹೋಗಿ ಮೇಷ್ಟ್ರಿಂದ ಬೈಸಿಕೊಂಡರು. ನಾಟಕದಿಂದ ತರುವ ಹಣದಿಂದ ಮನೆಗೆ ಸಹಾಯವಾಗಹತ್ತಿತು. ಇಷ್ಟವೋ... ಕಷ್ಟವೋ... ಮನೆ ನಿಭಾಯಿಸುವುದಕ್ಕಾಗಿ ಈ ಕ್ಷೇತ್ರ ಆಯ್ಕೆ ಮಾಡಿಕೊಂಡರು.

'ಸಂಸಾರ' ನಾಟಕವಾಡಿದ ಕೆಲ ದಿನಗಳ ನಂತರ ಊರಿನ ಹಿರಿಯರು ಮಾಡಿದ 'ಸತ್ಯ ಹರಿಶ್ಚಂದ್ರ' ನಾಟಕದಲ್ಲಿ ಅವನ ಪುತ್ರ ಲೋಹಿತಾಶ್ವನ ಪಾತ್ರ ನೀಡಿದರು. ಮತ್ತೊಮ್ಮೆ 'ಕತ್ತಲು ಬೆಳಕು' ಎಂಬ ನಾಟಕ ಮಾಡಿದ್ದರು. ಆ ಪಾತ್ರದಲ್ಲಿ ಅಭಿನಯಿಸಬೇಕಿದ್ದ ನಾಯಕಿ ಪಾತ್ರಧಾರಿ ಅದೇ ದಿನ ಬೇರೆ ನಾಟಕಕ್ಕೂ ಒಪ್ಪಿಕೊಂಡು ಈ ನಾಟಕಕ್ಕೆ ಕೈಕೊಟ್ಟಳು. ಊರಿನ ಮಾನ ಕಾಪಾಡಬೇಕಿತ್ತು. ಹಾಗಾಗಿ ಊರಿನವರ ಒತ್ತಾಯದ ಮೇರೆಗೆ ಒಂದೇ ದಿನದಲ್ಲಿ ಆ ಪಾತ್ರದ ಮಾತುಗಳನ್ನು ಕಲಿತು ಅಭಿನಯಿಸಿದರು. ಚೆನ್ನಾಗಿ ಮಾಡಿದೆ ಎಂದು ಹೊಗಳಿಬಿಟ್ಟರು. ಅದೇ ದಿನ ನಾಟಕ ನೋಡಲು ಬಂದಿದ್ದ ಎರಡು ಹಳ್ಳಿಯವರು ತಮ್ಮ ಊರಲ್ಲಿ ಬಂದು ನಾಟಕದಲ್ಲಿ ಪಾತ್ರ ವಹಿಸಬೇಕು ಎಂದು ಆಹ್ವಾನಿಸಿ ಅಡ್ವಾನ್ಸ್ ಹಣವನ್ನೂ ಕೊಟ್ಟುಬಿಟ್ಟರು. ಈ ಘಟನೆಗಳು ನಾಗರತ್ನ ನಾಟಕದಲ್ಲೇ ಶಾಶ್ವತವಾಗಿ ಉಳಿಯುವಂತೆ ಮಾಡಿದವು.

ಅಲ್ಲಿಂದ ಮುಂದೆ ಅವರು ಗ್ರಾಮೀಣ ನಾಟಕಗಳಲ್ಲಿ ನಟಿಸುವ ವೃತ್ತಿನಟಿಯಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಈ ಮಧ್ಯೆ ಪಟ್ಟಣಗಳ ನಾಟಕಗಳು, ಮಧ್ಯೆ ಮಧ್ಯೆ ಕೆಲಕಾಲ ನಾಟಕ ಕಂಪನಿಗಳಲ್ಲೂ ಅಭಿನಯಿಸಿದರು. ಮರಿಯಮ್ಮನಹಳ್ಳಿಯ ಡಾಕ್ಟರ್



### ಜೀವನವೇ ಒಂದು ನಾಟಕ

ಒಮ್ಮೆ ನನ್ನೂರಿನ ಸಹ ಕಲಾವಿದೆ ರೇಣುಕ ಒಂದೂರಲ್ಲಿ 'ಕುರುಕ್ಷೇತ್ರ' ನಾಟಕದಲ್ಲಿ ಅಭಿನಯಿಸಲು ಒಪ್ಪಿಕೊಂಡಿದ್ದಳು. ಅನಾರೋಗ್ಯದಿಂದ ಅವಳಿಗೆ ಹೋಗಲು ಸಾಧ್ಯವಾಗಲೇ ಇಲ್ಲ. ನನ್ನನ್ನು ಹೋಗುವಂತೆ ವಿನಂತಿಸಿಕೊಂಡಳು. ನನ್ನ ಅಪ್ಪನೂ ತೀವ್ರ ಅಸ್ವಸ್ಥರಾಗಿದ್ದರು. ಭಾರವಾದ ಹೃದಯದಿಂದ ಅವರು ಬೀಳ್ಕೊಟ್ಟರು. ನಾಟಕ ಮುಗಿಸಿ ಮೇಕಪ್ ತೆಗೆಯುವ ಹೊತ್ತಿಗೆ ಅಪ್ಪನ ಸಾವಿನ ಸುದ್ದಿ ಬರಸಿಡಿಲಿನಂತೆ ಬಂದೆರಗಿತು. ನಾಟಕವಾಡಿದ್ದು 'ಕುರುಕ್ಷೇತ್ರ.' ಆಗ ನನ್ನ ಒಳಗೂ 'ಕುರುಕ್ಷೇತ್ರ' ನಡೆಯುತ್ತಿತ್ತು. ಹೇಳಿ... ಜೀವನ–ನಾಟಕ ಬೇರೆ ಬೇರೆ ಹೇಗೆ..?





ಬಿ.ಅಂಬಣ್ಣ ನೇತೃತ್ವದ ಲಲಿತ ಕಲಾರಂಗ ಹಾಗೂ ಹೂವಿನ ಹಡಗಲಿಯ ಮಾಜಿ ಸಚಿವ ಎಂ.ಪಿ.ಪ್ರಕಾಶರ ತಂಡಗಳ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದರು. ಮುಂದೆ ತಮ್ಮದೇ ಮಹಿಳಾ ವೃತ್ತಿ ರಂಗ ಕಲಾವಿದರ ಸಂಘ ಮಾಡಿಕೊಂಡು ನಿರಂತರವಾಗಿ ನಾಟಕಗಳ ಸಂಘಟನೆ, ನಿರ್ದೇಶನ ಮಾಡುತ್ತ ಬಂದರು. ಜೋಗತಿ (ಮಂಗಳಮುಖಿಯರು)ಯರಲ್ಲಿ ನಾಟಕವಾಡುವ ಪರಿಪಾಠ ಇತ್ತು. ಆದರೆ ಅವರಿಗೆ ಆಧುನಿಕ ನಾಟಕಗಳನ್ನು ಪ್ರಥಮಬಾರಿಗೆ ಕಲಿಸಿದ ಹೆಗ್ಗಳಿಕೆ ನಾಗರತ್ನಮ್ಮ ಅವರದು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಹೀಗೆ ನಿರಂತರವಾಗಿ ನಾಟಕವನ್ನೇ ನೆಚ್ಚಿ ಬದುಕಿದರು, ಬೆಳೆದರು, ತಮ್ಮ ಜತೆ ಇರುವ ಸಹಕಲಾವಿದೆಯರನ್ನು ಬೆಳೆಸಿದರು.

"ನಾವು ಬಳ್ಳಾರಿಯ ಸುಭದ್ರಮ್ಮ ಮನ್ಸೂರು ಅವರಂತಹ ಹೆಸರಾಂತ ಕಲಾವಿದರೊಟ್ಟಿಗೆ ಕೆಲಸ ಮಾಡಿದವರು. ಅವರು ಏಣಗಿ ಬಾಳಪ್ಪ, ಮಾಸ್ಟರ್ ಹಿರಣ್ಣಯ್ಯನವರಂತಹ ನಾಟಕ ತಂಡಗಳ ದೊಡ್ಡ ದೊಡ್ಡ ಕಲಾವಿದರ ಜತೆಗೆ ಪಳಗಿದವರು. ರಂಗ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತವರು. ಆದರೆ ನಾವು ಯಾವುದೇ ತರಬೇತಿ ಇಲ್ಲದೆ ಈ ಕ್ಷೇತ್ರಕ್ಕೆ ಬಂದವರು. ಹಾಗಾಗಿ ಪಾತ್ರದ ಬಗ್ಗೆ, ಹಾಡಿನ ಬಗ್ಗೆ ಕೇಳಿದರೆ ಅವರು ಹೇಳಿಕೊಡುತ್ತಿದ್ದರು. ಕಲಾವಿದೆಯರು ಮಾನಸಿಕವಾಗಿ ಹೇಗೆ ಗಟ್ಟಿಯಾಗಬೇಕು ಎಂಬುದರ ಗುಟ್ಟು ತಿಳಿಸಿಕೊಟ್ಟರು. ಅಂತೆಯೇ ನಾನು ಗ್ರಾಮೀಣ ರಂಗಭೂಮಿಯ ವೃತ್ತಿ ಕಲಾವಿದೆಯಾಗಿ ಗಟ್ಟಿಯಾಗುತ್ತ ಹೋದೆ... ಜಾನಪದ ವಿದ್ವಾಂಸ ಮುದೇನೂರು ಸಂಗಣ್ಣನವರು ನಮ್ಮೂರು ಸಮೀಪ ಚಿಗಟೇರಿಯವರು. ನಮ್ಮೂರಿನ ಲಲಿತ ಕಲಾರಂಗದ ಗೌರವ ಅಧ್ಯಕ್ಷರು. ಅವರ ನಾಟಕಗಳನ್ನು ನಾವು ಆಡಿದ್ದೇವೆ. ನನ್ನ ಪಾಲಿಗೆ ಅವರು ತಂದೆಗಿಂತ ಹೆಚ್ಚಾಗಿದ್ದವರು. 1997 ರಲ್ಲಿ ಮಹಿಳಾ ವೃತ್ತಿ ರಂಗ ಕಲಾವಿದರ ಸಂಘ ಅಸ್ತಿತ್ವಕ್ಕೆ ಬಂತು. ಇದರ ಪ್ರತಿ ನಡೆಯಲ್ಲೂ ಗುಡಿಹಳ್ಳಿ ನಾಗರಾಜ ಅವರ ಮಾರ್ಗದರ್ಶನ ಇದೆ. ಈಗ ಅದರ ಮೂಲಕ ಸಾಕಷ್ಟು ನಾಟಕ, ಶಿಬಿರ, ಸಂಕಿರಣ, ಉತ್ಸವಗಳು ನಿರಂತರವಾಗಿ ನಡೆದಿವೆ.." ಎಂದು ತಮಗೆ ಉಪಕಾರ ಮಾಡಿದವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ ನಾಗರತ್ನಮ್ಮ.

ಗ್ರಾಮ ಪಂಚಾಯಿತಿ ಸದಸ್ಯೆಯಾಗಿ, ಹೊಸಪೇಟೆ ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ ಆಯ್ಕೆಯಾಗಿ ಉಪಾಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿರುವ ನಾಗರತ್ನಮ್ಮ ಸಮಾಜಮುಖಿ ಕಲಾವಿದೆಯಾಗಿದ್ದಾರೆ. "ವಯಸ್ಸಾದಂತೆ ನಟಿಯರ ಬೇಡಿಕೆ ಕಡಿಮೆಯಾಗುತ್ತದೆ. ಸಂಘಟನೆಯಲ್ಲಿ ತೊಡಗಿಕೊಂಡ ನೆಪದಲ್ಲಿ ಕೆಲವೊಮ್ಮೆ ನನ್ನ ಪಾತ್ರಗಳನ್ನೇ ಅವರಿಗೆ ಬಿಟ್ಟು ಕೊಟ್ಟಿದ್ದೇನೆ. ಅಶಕ್ತ ಕಲಾವಿದರ ಸಹಾಯಾರ್ಥ ಪ್ರದರ್ಶನಗಳನ್ನು ಸಂಘಟಿಸಿದ್ದೇನೆ. ಅವರ ಮಕ್ಕಳ ವಿದ್ಯಾಭ್ಯಾಸ, ಸ್ವಂತಕ್ಕೊಂದು ಮನೆ, ಮದುವೆ, ಅನಾರೋಗ್ಯ ಮುಂತಾದ ಕಾರಣಕ್ಕೆ ನೆರವು ಕೊಡಿಸಿದ್ದೇನೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸದಸ್ಯೆ ಹಾಗೂ ನಾಟಕ ಅಕಾಡೆಮಿ ಸದಸ್ಯೆಯಾಗಿದ್ದಾಗ ಕಲಾವಿದರಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರದ ನೆರವು, ಉಚಿತ ವಿದ್ಯುತ್, ರೇಷನ್ ಕಾರ್ಡ್, ಕಡಿಮೆ ಬಡ್ಡಿಯಲ್ಲಿ ಸಾಲ, ಮಾಸಾಶನ ಮುಂತಾದ ವಿಷಯಗಳಲ್ಲಿ ನನ್ನ ಕೈಲಾದ ಮಟ್ಟಿಗೆ ಸಹಾಯ ಮಾಡಿದ್ದೇನೆ. ಕಷ್ಟದಲ್ಲಿರುವ ಕಲಾವಿದರಿಗೆ ಮಹಿಳಾ ವೃತ್ತಿ ರಂಗ ಕಲಾವಿದರ ಸಂಘದಿಂದ ನಾಟಕಗಳನ್ನು ಪ್ರಾಯೋಜನೆ ಮಾಡಿ ಅವರಿಗೆ ಹೆಚ್ಚು ಸಂಭಾವನೆ ಸಿಗುವ ಹಾಗೆ ಶ್ರಮಿಸಿದ್ದೇನೆ. ಕಾಯಿಲೆಯಿಂದ ನರಳುವ ಕಲಾವಿದರನ್ನು ನಾನೇ ಖುದ್ದಾಗಿ ಆಸ್ಪತ್ರೆಗೆ ಕೊಂಡೊಯ್ದು ಉಪಚರಿಸಿದ್ದೇನೆ.." ಎಂದು ತಮ್ಮ ಸಂಘದ ಕಾರ್ಯಕ್ರಮಗಳನ್ನು ವಿವರಿಸುತ್ತಾರೆ.

ಚಿಗಟೇರಿಯಲ್ಲಿ ಮುದೇನೂರು ಸಂಗಣ್ಣನವರು ಸಂಘಟಿಸಿದ ಹವ್ಯಾಸಿ ರಂಗಶಿಬಿರ, 1994 ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ದೆಹಲಿ ರಾಷ್ಟ್ರೀಯ ನಾಟಕ ಶಾಲೆ ಆಶ್ರಯದಲ್ಲಿ ನಡೆದ ಶಿಬಿರ, ಹಡಗಲಿ ಎಂಪಿ ಪ್ರಕಾಶ್ ಅವರ ರಂಗಭಾರತಿ ಶಿಬಿರ, ನೀನಾಸಂ, ಸಾಣೇಹಳ್ಳಿ ರಂಗಶಿಬಿರದ ವಿದ್ಯಾರ್ಥಿಯಾಗಿ, ಉಪನ್ಯಾಸಕಿಯಾಗಿ ಸಾಕಷ್ಟು ಅನುಭವವನ್ನು ನಾಗರತ್ನಮ್ಮ ಪಡೆದಿದ್ದಾರೆ. ರಾಘವೇಂದ್ರ ಜೋಶಿ ನಿರ್ದೇಶನದ 'ಲಕ್ಷ್ಮಣರೇಖೆ', 'ರಂಗಾಂತರಂಗ ವಿಲಾಸ', 'ಸೂರ್ಯ ಶಿಕಾರಿ' ಮುಂತಾದ ಪ್ರಮುಖ ಹವ್ಯಾಸಿ ನಾಟಕಗಳಲ್ಲಿ ಮುಖ್ಯ ಪಾತ್ರಗಳೇ ದೊರೆತವು. ಇವಕ್ಕೆ ಸಾಕಷ್ಟು ಮನ್ನಣೆ ಪ್ರಶಸ್ತಿಗಳೂ ಲಭಿಸಿದವು. ಸಂಗಣ್ಣನವರ 'ಶೀಲಾವತಿ' ನಾಟಕದ ಶೀಲಾವತಿ ಪಾತ್ರ ಜನಪ್ರಿಯತೆ ತಂದುಕೊಟ್ಟಿತು. ರಾಜ್ಯದ ಹಲವೆಡೆ ಪ್ರದರ್ಶನ ಕಂಡ ಈ ನಾಟಕ ಕೇರಳದ ಅಖಿಲ ಭಾರತ ನಾಟಕ ಉತ್ಸವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಭಾರಿ ಮನ್ನಣೆ ಗಳಿಸಿತು. ಕೇಂದ್ರ ಸರ್ಕಾರದ ಸಂಗೀತ ಮತ್ತು ನಾಟಕ ವಿಭಾಗದ ಮುಖ್ಯಸ್ಥರಾಗಿದ್ದ ಹೂಗೊಪ್ಪಲು ಕೃಷ್ಣಮೂರ್ತಿ ಅವರು ಲಲಿತ ಕಲಾರಂಗ ಹಾಗೂ ಮಹಿಳಾ ವೃತ್ತಿ ರಂಗ ಕಲಾವಿದರ ಸಂಘಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಸಾಕ್ಷರತೆ, ಆರೋಗ್ಯ, ಪರಿಸರ ರಕ್ಷಣೆ ಕುರಿತಾದ ಸಾಕಷ್ಟು ಬೀದಿ ನಾಟಕಗಳನ್ನು ಮಾಡಿದರು. ಸಂಘಟಕಿಯಾಗಿ, ನಿರ್ದೇಶಕಿಯಾಗಿ, ನಟಿಯಾಗಿ ನಾಗರತ್ನಮ್ಮ ಸಾಕಷ್ಟು ಅನುಭವ ಪಡೆದಿದ್ದಾರೆ. ■

**ಕಣ್ಣಿಗೆ ಕತ್ತಲೆ ಕವಿಯಿತು**

ಕೊಟ್ಟೂರಿನ ಹತ್ತಿರ ಐನಳ್ಳಿ ಎಂಬ ಊರಲ್ಲಿ ಕಂದಗಲ್ಲ ರಾಯರ 'ಮಾತಂಗ ಕನ್ಯಾ' ಎಂಬ ನಾಟಕ ಪ್ರದರ್ಶನ ನಡೆದಿತ್ತು. ಆ ನಾಟಕದ ಪಾತ್ರಗಳಲ್ಲಿ ನನ್ನ ತಂದೆ ಒಬ್ಬ ಜೀತದಾಳು. ಶ್ರೀಮಂತ ಒಮ್ಮೆ ನನ್ನ ತಂದೆಯನ್ನು ಛಾಟಿಯಿಂದ ಹೊಡೆಯಬೇಕು, ಬಿಡಿಸಿಕೊಳ್ಳಲು ಹೋದ ನನ್ನನ್ನೂ ಹೊಡೆಯಬೇಕು. ಆದರೆ ಆ ಪಾತ್ರಧಾರಿ ನಟನೆಯ ಭಾವಾವೇಶದಲ್ಲಿ ಛಾಟಿಯಿಂದ ನನಗೆ ಬಲವಾಗಿಯೇ ಹೊಡೆದುಬಿಟ್ಟ. ನನ್ನ ಕೈಯೆಲ್ಲಾ ರಕ್ತಮಯವಾಗಿ ಬೆರಳು ತಟಸ್ಥವಾಗಿಬಿಟ್ಟಿತು. ಮತ್ತೊಂದು ಪ್ರಸಂಗ: 'ರಕ್ಷಾಬಂಧನ' ಎಂಬ ನಾಟಕದಲ್ಲಿ ಅಣ್ಣನ ಪಾತ್ರಧಾರಿ ತಂಗಿಯಾದ ನನಗೆ ಕಪಾಳಕ್ಕೆ ಭಾರಿಸುವ ಸನ್ನಿವೇಶ ಇತ್ತು. ಆವೇಶದಲ್ಲಿ ಆ ಪಾತ್ರಧಾರಿ ಹೊಡೆದ ಹೊಡೆತಕ್ಕೆ ನನ್ನ ಕಿವಿಯೋಲೆ, ಮೂಗುತಿ ಮುರಿದು ಹೋಗಿದ್ದವು. ಕಣ್ಣಿಗೆ ಕತ್ತಲೆ ಕವಿದು ತುಂಬಾ ತೊಂದರೆಪಟ್ಟೆ.

'ಯಾರು ದೊಡ್ಡವರು' ಎಂಬ ನಾಟಕದಲ್ಲಿ ಶ್ರೀಮಂತೆ ಪಾತ್ರಧಾರಿಯಾದ ನಾನು ಬಡವನನ್ನು ಪ್ರೀತಿಸಿದ ಕಾರಣಕ್ಕೆ ತಂದೆ ಪಾತ್ರಧಾರಿ ಹೊಡೆದ ಛಾಟಿ ಏಟಿಗೆ ಕಾಲಿನ ಚರ್ಮ ಕಿತ್ತು, ಹೆಜ್ಜೆ ಎತ್ತಿಡಲು ಆಗದಷ್ಟು ನೋವಾಗಿ ಜೋರಾಗಿ ಅತ್ತುಬಿಟ್ಟೆ. ಒಂದು ವಾರ ಕಾಲ ಗಾಯಕ್ಕೆ ಚಿಕಿತ್ಸೆ ಪಡೆದೆ. ಇಷ್ಟೆಲ್ಲಾ ಆದಾಗಲೂ ಅವರು ಬೇಕೆಂತಲೇ ಮಾಡಿದ್ದಲ್ಲ ಎಂಬುದನ್ನು ನಾವು ಅರ್ಥಮಾಡಿಕೊಂಡು ವೈಮನಸ್ಸು ಬೆಳೆಸಿಕೊಳ್ಳಲಿಲ್ಲ. ಹಾಗೆ ಅರ್ಥ ಮಾಡಿಕೊಳ್ಳುತ್ತ ಹೋದ ಕಾರಣಕ್ಕೆ ಹಳ್ಳಿ ಜನ ನನಗೆ ತೀರಾ ಹತ್ತಿರವಾದರು.





ಗಣೇಶೋತ್ಸವ

# ಬಣ್ಣ ಬೇಡ ಮಣ್ಣೇ ಸಾಕು

▪ ಗುರುರಾಜ ಪೋಶೆಟ್ಟಿಹಳ್ಳಿ

ಎಲ್ಲೆಡೆಯೂ ಗೌರಿ–ಗಣೇಶ ಹಬ್ಬದ ಸಂಭ್ರಮ. ವಿವಿಧ ರೀತಿಯ ಗಣಪನ ಮೂರ್ತಿಗಳು ಕಂಗೊಳಿಸುತ್ತಿವೆ. ಅಂಗೈ ಅಗಲದ ಪುಟ್ಟ ಮೂರ್ತಿಯಿಂದ ಹಿಡಿದು ಆಳೆತ್ತರದ ದೊಡ್ಡ ವಿಗ್ರಹಗಳು ಸಾಲುಸಾಲಾಗಿ ಮಾರಾಟಕ್ಕಿವೆ. ಬೇರೆ ಬೇರೆ ವರ್ಣಾಲಂಕಾರಗಳಲ್ಲಿ ರಾರಾಜಿಸುತ್ತಿರುವ ವಿನಾಯಕನ ಮೂರ್ತಿಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಬಣ್ಣ ಬಣ್ಣದ ಗಣಪತಿ, ಪಟಗುಟ್ಟುವ ಪಟಾಕಿ ಖರೀದಿಯಲ್ಲಿ ಹಲವರು ಮಗ್ನರಾಗಿದ್ದಾರೆ. ಆದರೆ ಹಬ್ಬದ ಮೋಜು ತರುವ ಅಪಾಯಗಳ ಬಗ್ಗೆಯೂ ಎಚ್ಚರ ವಹಿಸುವುದು ಅಗತ್ಯ.

ರಂಗುರಂಗಿನ ಗಣಪನ ಮೂರ್ತಿಗೆ ಎಲ್ಲಿಲ್ಲದ ಬೇಡಿಕೆ. ನಮ್ಮಲ್ಲಿಂದ ವಿದೇಶಕ್ಕೂ ಇವು ರಫ್ತಾಗುತ್ತವೆ. ಬೇಡಿಕೆ ಹೆಚ್ಚಿರುವುದರಿಂದ ಕೈಯಿಂದ ಮೂರ್ತಿ ಮಾಡುವ ಬದಲು ಅಚ್ಚು ಉಪಯೋಗಿಸುತ್ತಾರೆ. ಹೀಗೆ ಅಚ್ಚಿನಿಂದ ತಯಾರಾದ ಗಣಪನಿಗೆ ಮೆಟಲ್ ಪೇಂಟ್ ಹಚ್ಚುತ್ತಾರೆ. 100 ಗ್ರಾಂ ಸೀಸ ಇರುತ್ತದೆ. ಇದು ವಿಷಕಾರಕ ವಸ್ತು ಪರಿಸರ ಹಾಗೂ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಜಿಪ್ಸಂ, ಸಲ್ಫರ್, ಪಾಸ್ಪರಸ್ ಮತ್ತು ಮೆಗ್ನಿಷಿಯಂ ಒಳಗೊಂಡ ಪ್ಲಾಸ್ಟರ್ ಆಫ್ ಪ್ಯಾರಿಸ್ ಮೂರ್ತಿಗಳಂತೂ ಹಾನಿಕಾರಕ ಅಂಶಗಳ ಆಗರ.

ಇಂಥ ಬಣ್ಣ ಹಚ್ಚಿದ ಮೂರ್ತಿಗಳನ್ನು ಕೆರೆ ಅಥವಾ ನದಿಯಲ್ಲಿ ವಿಸರ್ಜಿಸಿದರೆ ಅಲ್ಲಿರುವ ಜಲಚರಗಳ ಗತಿ ಏನು? ಆ ನೀರು ಕುಡಿದರೆ ಮನುಷ್ಯನ ಆರೋಗ್ಯದ ಮೇಲೆ ಏನೆಲ್ಲ ಪರಿಣಾಮವಾದೀತು ಎಂಬುದನ್ನು ಯೋಚಿಸಿದ್ದೀರಾ?

ಬಣ್ಣದಲ್ಲಿರುವ ಸೀಸದ ಅಂಶ ನೇರವಾಗಿ ನಮ್ಮ ದೇಹಕ್ಕೆ ಹೋಗದಿರಬಹುದು. ಆದರೆ ಉಸಿರಾಟದ ಮೂಲಕ ಅದರಲ್ಲಿರುವ ಹಾನಿಕಾರಕ ಅಂಶಗಳು ದೇಹದೊಳಗೆ ಸೇರಿಬಿಡುತ್ತವೆ.

**ನೇರ ಪರಿಣಾಮ:** ಸೀಸದ ವ್ಯತಿರಿಕ್ತ ಪರಿಣಾಮ ಮೊದಲು ಕಾಣಿಸಿಕೊಳ್ಳುವುದೇ ಮಕ್ಕಳಲ್ಲಿ ಅದರಲ್ಲೂ ಆರು ವರ್ಷದೊಳಗಿನ ಪುಟಾಣಿಗಳ ಮೇಲೆ ಇದರ ಪ್ರಭಾವ ಬಹುಬೇಗನೇ ಆಗುತ್ತದೆ. ಅವರ ಮಿದುಳು ಮತ್ತು ನರಮಂಡಲದ ಮೇಲೆ ಇದು ನೇರ ಪರಿಣಾಮ ಬೀರುತ್ತದೆ. ಇದರ ಫಲವಾಗಿ ಗ್ರಹಣಶಕ್ತಿ ಕ್ಷೀಣಿಸುವಿಕೆ, ಏಕಾಗ್ರತೆ ಕೊರತೆ, ಶಾರೀರಿಕ ಬೆಳವಣಿಗೆ ಕುಂಠಿತಗೊಳ್ಳುವುದು, ಬುದ್ಧಿಮಾಂದ್ಯತೆ ಮೊದಲಾದ ಸಮಸ್ಯೆಗಳು ತಲೆದೋರುತ್ತವೆ. ಇದಲ್ಲದೇ ಮೂತ್ರಪಿಂಡದ ತೊಂದರೆಗೂ ಕಾರಣವಾಗುತ್ತದೆ. ಜತೆಗೆ ಸಂತಾನಹೀನತೆ ಹಾಗೂ ಅಧಿಕ ರಕ್ತದೊತ್ತಡಕ್ಕೂ ದಾರಿ ಮಾಡಿಕೊಡುತ್ತದೆ.

ಚೈತನ್ಯದ ಚಿಲುಮೆಯಾಗಿದ್ದ ವ್ಯಕ್ತಿಗಳು ಸೀಸ ಸೇವನೆಯಿಂದ ಕಾಲ ಕಳೆದಂತೆ ಕಳೆಗುಂದುತ್ತಾರೆ. ಲವಲವಿಕೆ ಮಾಯವಾಗಿ ಆಲಸ್ಯದ ಆಗರವಾಗುತ್ತಾರೆ. ಹುರುಪು–ಹುಮ್ಮಸ್ಸು ಹರಿದು ಹೋಗಿ ಹಸಿವು ಕಡಿಮೆಯಾಗುತ್ತದೆ. ಸಿಟ್ಟು–ಸೆಡವು ಜಾಸ್ತಿಯಾಗುತ್ತದೆ. ಸೀಸದ ಪ್ರಭಾವದಿಂದಾಗಿ ಹಲ್ಲುಗಳ ಮೇಲೆ ನೀಲಿ ಗೆರೆಗಳು ಮೂಡುತ್ತವೆ.

ಕಲಾವಿದರು ಗಣಪತಿ ಮೂರ್ತಿಯನ್ನು ತಯಾರಿಸುವಾಗ ಮನಮೋಹಕ ಬಣ್ಣ ಬಳಿಯುತ್ತಾರೆ. ಮಿಂಚು ಹೆಚ್ಚಲು ಸುನೇರಿ ಹಚ್ಚುತ್ತಾರೆ. ಭಕ್ತಿ–ಭಾವುಕತೆಗಳ ಗಡಿ ಮೀರಿ ವೈಜ್ಞಾನಿಕ ವಿಶ್ಲೇಷಣೆ ಮಾಡಿದಾಗ ಇದು ವಿಷರಾಸಾಯನಿಕಗಳ ರಸಗಟ್ಟಿ.

ಕಲಾವಿದರು ಈ ವಿಷ ವಸ್ತುಗಳಿಗೆ ನೇರವಾಗಿ ಬಲಿಯಾಗುತ್ತಾರೆ. ಭಕ್ತ ಸಮೂಹ ಗಣಪತಿ ವಿಸರ್ಜಿಸಿದ ಬಾವಿ,



ಕೆರೆ, ಹೊಂಡಗಳಲ್ಲಿಯ ನೀರನ್ನು ಸೇವಿಸುವ ಮೂಲಕ ಹೊಟ್ಟೆ ತೊಳೆಸುವಿಕೆ, ವಾಂತಿ, ಭೇದಿ, ಕಾಮಾಲೆ ಹಾವಳಿಗೆ ಒಳಗಾಗಬೇಕಾಗುತ್ತದೆ.

**ಪರಿಹಾರವೇನು?**

ರಾಸಾಯನಿಕ ಬಣ್ಣ ಹಚ್ಚಿದ ಮೂರ್ತಿಗೆ ಬದಲು ಕೇವಲ ಮಣ್ಣಿನ ಮೂರ್ತಿಯನ್ನು ಖರೀದಿಸಿ ಅರಿಶಿನ, ಕುಂಕುಮ ಮತ್ತಿತರ ಸಾವಯವ ಬಣ್ಣ ಹಚ್ಚಿ ವರ್ಣ ವಿನ್ಯಾಸ ಮಾಡಬಹುದಲ್ಲ?

ನಗರದಲ್ಲಿನ ಒತ್ತಡದ ಬದುಕಿನಲ್ಲಿ ಇದಕ್ಕೆಲ್ಲ ಸಮಯ ಹೊಂದಿಸಿಕೊಳ್ಳುವುದು ಕಷ್ಟ. ಆದರೆ ಪೇಟೆಯಲ್ಲಿ ಸಾವಯವ ಬಣ್ಣದಿಂದ ಅಲಂಕರಿಸಿದ ಮೂರ್ತಿಗಳು ಸಿಗುತ್ತವೆ. ಕೆಲವು ಕಡೆ ವಿಚಾರಿಸಿ ಖರೀದಿ ಮಾಡಬೇಕು ಅಷ್ಟೆ.

ನಮ್ಮ ಮನೆಯಲ್ಲಿ ಪ್ರತಿಷ್ಠಾಪಿಸುವ ಗಣಪ ಎಲ್ಲರಿಗೂ ಶುಭದಾಯಕವಾಗಬೇಕೆ ಹೊರತು ಇತರರಿಗೆ ಕಿರಿಕಿರಿಯುಂಟು ಮಾಡಬಾರದು. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣೇಶ ನೋಡಲು ಸುಂದರವಾಗಿರುತ್ತಾದರೂ, ನೀರಿನಲ್ಲಿ ಮುಳುಗದೆ ತ್ಯಾಜ್ಯವಾಗುತ್ತದೆ. ಕೆರೆಯ ಹೂಳಿನೊಂದಿಗೆ ಸೇರಿ ಮಾಲಿನ್ಯ ಸಮಸ್ಯೆಗೆ ತನ್ನ ಕೊಡುಗೆ ನೀಡುತ್ತದೆ. ಇದರಿಂದ ಯಾರಿಗೆ ಲಾಭ ಎಂಬುದನ್ನು ಮನಗಾಣಬೇಕು.

ಮೂರ್ತಿಗಳಿಗೆ ಹಚ್ಚುವ ಹಾನಿಕಾರಕ ಬಣ್ಣಗಳ ಬಗ್ಗೆ ದಶಕದ ಹಿಂದೆಯೇ ಕೆಲವರಲ್ಲಿ ಜಾಗೃತಿ ಮೂಡಿತ್ತು. ಅದು ಈಗ ಚಳುವಳಿ ರೂಪ ಪಡೆಯುತ್ತಿದೆ. ಈ ನಿಟ್ಟಿನಲ್ಲಿ ಹಲವು ಪರಿಸರಪ್ರಿಯ ಸಂಘಟನೆಗಳು ಹೆಗಲುಕೊಟ್ಟಿವೆ.

ನೀರಿಗೆ ಹಾನಿ ಉಂಟುಮಾಡದ ರಾಸಾಯನಿಕ ಬಣ್ಣ ಹೊಂದಿರುವ ಮೂರ್ತಿಗಳನ್ನು  ಕೊಂಡು ಪೂಜಿಸಬೇಕು. ಪುಟ್ಟ ಮೂರ್ತಿಗಳನ್ನು ಮನೆಯ ತೊಟ್ಟಿ ಅಥವಾ ಹತ್ತಿರದ ಬಾವಿ–ಹೊಂಡಗಳಲ್ಲೇ ವಿಸರ್ಜಿಸಬಹುದು. ಇದರಿಂದ ನೀರು ಕೂಡ ಮಲಿನವಾಗುವುದಿಲ್ಲ. ಮೂರ್ತಿ ತಯಾರಕರಿಗೆ ಹಾಗೂ ಮಾರಾಟಗಾರರಿಗೆ ಈ ಬಗ್ಗೆ ಅರಿವು ಮೂಡಿಸಬೇಕು. ಜತೆಗೆ ಇಂಥ ಬಣ್ಣಗಳನ್ನು ಬಳಸದಿರುವಂತೆ ಎಚ್ಚರಿಕೆ ನೀಡಬೇಕು.

ಬನ್ನಿ, ಪರಿಸರಸ್ನೇಹಿ ಗಣಪನನ್ನು ಪೂಜಿಸಿ ಮಾಲಿನ್ಯಕ್ಕೆ ಕಡಿವಾಣ ಹಾಕೋಣ.

**ಪರಿಸರ ಸಂರಕ್ಷಿಸಿ**

ಗೌರಿ – ಗಣೇಶ ಹಬ್ಬ ಸಮೃದ್ಧಿ ಹಾಗೂ ಸಹಬಾಳ್ವೆಯ ಸಂಕೇತವಾಗಿ ಆಚರಿಸಲಾಗುತ್ತದೆ. ಸಂಭ್ರಮಾಚರಣೆಯಿಂದ ಪರಿಸರಕ್ಕೆ ಹಾನಿಯುಂಟಾಗದಿರಲಿ . ಪರಿಸರ ಸಂರಕ್ಷಣೆ ಇಡೀ ಸಮುದಾಯದ ಜವಾಬ್ದಾರಿ – ಹಬ್ಬದ ಸಡಗರದೊಡನೆ ಈ ಅಂಶಗಳು ನಿಮ್ಮ ನೆನಪಲ್ಲಿರಲಿ.

- ಶ್ರದ್ಧಾ ಭಕ್ತಿಯೇ ಗಣೇಶೋತ್ಸವದ ತಿರುಳಾಗಬೇಕು , ಆಡಂಬರವಲ್ಲ.
- ಚೆಂದಕ್ಕೆ ಮಹತ್ವ ಕೊಡದೆ ಸತ್ವಕ್ಕೆ ಪ್ರಾಶಸ್ತ್ಯ ಕೊಟ್ಟು ಬಣ್ಣವಿರದ ಮಣ್ಣಿನ ಸಣ್ಣ ಮೂರ್ತಿ ತಂದು ಪೂಜಿಸಿ.
- ಪಾಲಿಕೆ ರೂಪಿಸಿರುವ 'ಮೊಬೈಲ್ ಟ್ಯಾಂಕ್' ನಲ್ಲಿ ಅಥವಾ ನಿಮ್ಮ ಮನೆಯ ಬಕೆಟ್‌ಗಳಲ್ಲೇ ಗಣಪತಿ ವಿಸರ್ಜಿಸಿ .
- ಶಬ್ದ – ವಾಯು ಮಾಲಿನ್ಯ ಮಾಡುವ ಪಟಾಕಿ ಸಿಡಿಸದೇ ಸಂಪದ್ಭರಿತ ಪರಿಸರ ಸಂರಕ್ಷಿಸಿ.
- ಉತ್ಸವಕ್ಕಾಗಿ ಪೆಂಡಾಲ್ ಹಾಕಲು ರಸ್ತೆ ಅಗೆಯಬೇಡಿ–  ನೀರು ವಿದ್ಯುತ್ ಮಿತವಾಗಿ ಬಳಸಿ ಸ್ವಚ್ಛತೆ ಕಾಪಾಡಿ .

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050